6. ವಿತ್ತೀಯ ಕಾರ್ಯಕಲಾಪ (ಮುಂದು)

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಮತ್ತು ಸರ್ಕಾರದ ಉತ್ತರ.

ಅಧ್ಯಕ್ಷರು: ಈಗ ಸುಮಾರು 10 ಗಂಟೆಗಳ ಕಾಲ ಬೇಡಿಕೆಗಳ ಮೇಲೆ ಚರ್ಚೆಯಾಗಿದೆ. ಈಗ ಇರುವಂತಹ 25 ಬೇಡಿಕೆಗಳಿಗೆ 15 ಜನ ಮಂತ್ರಿಗಳು ಉತ್ತರ ಕೊಡಬೇಕು. ಈಗ ಆರಂಭವಾದರೆ ರಾತ್ರಿ 10 ಗಂಟೆಯಾದರೂ ಉತ್ತರ ಮುಗಿಯುವುದಿಲ್ಲ. ಆದ್ದರಿಂದ, ದಯಮಾಡಿ ಈಗ ಉತ್ತರ ಆರಂಭ ಮಾಡೋಣ. ಯಾರಾದರೂ ಮಾತನಾಡದೆ ಇರುವವರು ಇದ್ದರೆ ಅವರಿಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ . . .

ಶ್ರೀ ಗೋವಿಂದ ಎಂ.ಕಾರಜೋಳ: ಎಲ್ಲರಿಗೂ ಐದೈದು ನಿಮಿಷ . . . . .

ಅಧ್ಯಕ್ಷರು: ಈಗ ಮಾನ್ಯ ಕಾರಜೋಳ ಅವರೇ, ನಾನು ಐದೈದು ನಿಮಿಷ ಎಂದು ಅವಕಾಶ ಕೊಟ್ಟರೆ opening Pandora's box ತರಹ ಆಗುತ್ತದೆ. ದಯಮಾಡಿ ವಾಸ್ತವ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ. ಎಲ್ಲರಿಗೂ ಕೂಡ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕೆಂದು ಇದೆ. ಈ ಕಡೆಯವರಿಗೂ ಹೇಳಬೇಕೆಂದು ಇದೆ, ಕಡೆಯವರಿಗೂ ಹೇಳಬೇಕೆಂದು ಇದೆ. ಆದರೆ 15 ಜನ ಮಂತ್ರಿಗಳು ಉತ್ತರ ಹೇಳಬೇಕು. ನಾಳೆ ಅಪ್ರೋಪ್ರಿಯೇಷನ್ ಬಿಲ್ ಪಾಸಾಗಿ 12 ಗಂಟೆಯೊಳಗೆ ಆ ಮನೆಯಲ್ಲಿ ಪಾಸಾಗಬೇಕು.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗಾಗಲೇ ಬೇಕಾದಷ್ಟು ಜನರಿಗೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಐದೈದು ನಿಮಿಷ ಅವಕಾಶ ಮಾಡಿಮಾಡಿ.

ಅಧ್ಯಕ್ಷರು: ನೋಡಿ, ಐದು ನಿಮಿಷ ಎಂದರೆ ಯಾರೂ ಐದು ನಿಮಿಷದಲ್ಲಿ ಮುಗಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ಗಂಟೆ ಕೊಡಿ; ಎಲ್ಲರಿಂದ ಒಂದು ಗಂಟೆ ಅವಕಾಶ ಕೊಡಿ.

ಅಧ್ಯಕ್ಷರು: ದಯಮಾಡಿ ನಾನು ಹೇಳುತ್ತೇನೆ, ನಾಲ್ಕು ಗಂಟೆಗೆ ಉತ್ತರ ನೀಡಲು ಸಮಯ ಕೊಡುತ್ತೇನೆ. ಆಗ ಯಾರೂ ಆಕ್ಷೇಪಣೆ ಮಾಡಬಾರದು. ಈಗ ಯಾರೂ ಐದು ನಿಮಿಷದ ಮೇಲೆ ಮಾತನಾಡಬಾರದು. ಒಬ್ಬೊಬ್ಬರಿಗೆ ಐದು ನಿಮಿಷದಂತೆ ಅವಕಾಶ ಕೊಟ್ಟರೆ 12 ಜನರಿಗೆ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ನೀವು ಏನೇ ಹೇಳಿದರೂ 4 ಗಂಟೆಗೆ ಉತ್ತರಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ದಯಮಾಡಿ ಕೇಳಿ, ಸದನವನ್ನು ರಾತ್ರಿ 12 ಗಂಟೆಯವರೆಗೆ ನಡೆಸಿ. ತಪ್ಪೇನಿದೆ?

ಅಧ್ಯಕ್ಷರು: ಮಾನ್ಯ ಬಸವರಾಜ ರಾಯರೆಡ್ಡಿಯವರೆ, ನೀವು ಈ ರೀತಿ ಮಾತನಾಡುವವರೆಗೂ ಹೇಳುತ್ತೀರಿ. ನೀವು ಮಾತನಾಡಿದ ನಂತರ ಹೊರಟು ಹೋಗುತ್ತೀರಿ. ಈಗ ರಾತ್ರಿ 8 ಗಂಟೆಗೆ ಸದನದಲ್ಲಿ 10 ಜನರು ಇರುತ್ತಾರೆ. ಈ ರೀತಿ 10 ಜನ ಸದಸ್ಯರು ಇರುವಾಗ ಮಂತ್ರಿಗಳು ರಾತ್ರಿ 12 ಗಂಟೆಯವರೆಗೂ ಉತ್ತರವನ್ನು ಹೇಳುವುದಕ್ಕೆ ಆಗುವುದಿಲ್ಲ. ಈಗ ಸಾಕಷ್ಟು ಚರ್ಚೆಯಾಗಿದೆ, ಎಲ್ಲಾ ವಿಚಾರಗಳು ಪ್ರಸ್ತಾಪವಾಗಿದೆ. ನೀವುಗಳು ಮಾತನಾಡದೇ ಇರಬಹುದು, ಒಟ್ಟಾರೆ ಸಮಗ್ರವಾಗಿ ಚರ್ಚೆಯಾಗಿದೆ. ತಾವು ಇದನ್ನು ಅರ್ಥ ಮಾಡಿಕೊಳ್ಳಿ, ಸುಮ್ಮನೆ ಈ ರೀತಿ ಮಾಡಿದರೆ ಇದು

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಒಬ್ಬೊಬ್ಬರಿಗೆ ಐದೈದು ನಿಮಿಷದಂತೆ ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ನೀವು ನಿಮ್ಮ ಸದಸ್ಯರು ಒತ್ತಡವನ್ನು ತರುತ್ತಿದ್ದಾರೆಂದು, ನೀವು ಉಪ ನಾಯಕರು ಹೇಳಿಬಿಡುತ್ತೀರಿ. ಅದು ಆಗುತ್ತದೆಯೆ? ತಾವು ವಾಸ್ತವವನ್ನು ಯೋಚನೆ ಮಾಡಿ. ಈಗ ನಾನು 5 ನಿಮಿಷಗಳಂತೆ ಅವಕಾಶವನ್ನು ಕೊಡುತ್ತೇನೆ. ಮೊದಲು ಶ್ರೀ ಕುಮಾರ್ ಬಂಗಾರಪ್ಪನವರನ್ನು ಕರೆಯುತ್ತೇನೆ. ಮಾನ್ಯ ಕುಮಾರ್ ಬಂಗಾರಪ್ಪನವರೆ, ನೀವು ಹಿಂದೆ ಮಂತ್ರಿಯಾಗಿದ್ದವರು. ನೀವು 5 ನಿಮಿಷಗಳಲ್ಲಿ ಪ್ರಮುಖವಾದಂತಹ ಪಾಯಿಂಟ್‌ಗಳನ್ನು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನೀವು ನಮಗೆ ಮಾತನಾಡಲು ಅವಕಾಶವನ್ನು ಕೊಡದಿದ್ದರೆ, ನಾವು ವಾಕ್ ಔಟ್ ಮಾಡಬೇಕಾಗುತ್ತದೆ. ನಾವು ಇನ್ನು ಏನು ಮಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು: ಯಾರು ಬೇಕಾದರೂ ವಾಕ್ ಔಟ್ ಮಾಡಬಹುದು, ಏನು ಬೇಕಾದರೂ ಮಾಡಬಹುದು. ನಾನು ಯಾರಿಗೂ 5 ನಿಮಿಷದ ಮೇಲೆ ಮಾತನಾಡಲು ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ಕುಮಾರ್ ಬಂಗಾರಪ್ಪನವರೆ, ತಾವು ಮಾತನಾಡಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ(ಸೊರಬ): ಮಾನ್ಯ ಅಧ್ಯಕ್ಷರೆ, ನನಗೆ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಮೊದಲನೆಯದಾಗಿ, ಮಳೆರಾಯನ ಕೃಪೆಯಿಂದ ಕರ್ನಾಟಕ ರಾಜ್ಯದ ಸಾಕಷ್ಟು ಭಾಗಗಳಲ್ಲಿ ಮಳೆಯಾಗಿದೆ. ಈ ಮಳೆಯಿಂದ ಕೆಲವು ಕಡೆಗಳಲ್ಲಿ ಕಷ್ಟದ ಪರಿಸ್ಥಿತಿ ಕೂಡ ಉದ್ಭವವಾಗಿದೆ. ಅದರಲ್ಲೂ ವಿಶೇಷವಾಗಿ ಮಲೆನಾಡಿನ ಭಾಗದಲ್ಲಿ, ಕರಾವಳಿಯ ಭಾಗದಲ್ಲಿ, ಮತ್ತೆ ಕರ್ನಾಟಕದ ಒಳನಾಡಿನಲ್ಲಿ ಬಹಳಷ್ಟು ರಸ್ತೆಗಳು, ಕೆರೆಗಳು, ಕಾಲುವೆಗಳು, ಇವೆಲ್ಲವೂ ಒಡೆದುಹೋಗಿವೆ. ಅದೇ ರೀತಿಯಲ್ಲಿ ರಸ್ತೆಗಳ ಪರಿಸ್ಥಿತಿಯೂ ಕೂಡ ಬಹಳಷ್ಟು ಕೆಟ್ಟಿರುವಂತಹ ವಿಚಾರಗಳು ಬಂದಿವೆ. ಈಗಾಗಲೇ ಮಾನ್ಯ ಕಂದಾಯ ಮಂತ್ರಿಯವರ ಹತ್ತಿರವೂ ಸಾಕಷ್ಟು ಚರ್ಚೆಯನ್ನು ಮಾಡುತ್ತಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಯವರಲ್ಲಿ, ಒತ್ತಾಯ ಮಾಡುವುದೇನೆಂದರೆ, ಮಲೆನಾಡಿನ ಭಾಗಕ್ಕೆ, ಕರಾವಳಿಯ ಭಾಗಕ್ಕೆ, ಬೇಕಾಗಿರುವಂತಹ ಪರಿಹಾರವನ್ನು ತತಕ್ಷಣವೇ ಕಳುಹಿಸುವಂತಹ ಅವಶ್ಯಕತೆ ಇದೆ, ಏಕೆಂದರೆ ಇನ್ನು ಒಂದೆರಡು ದಿವಸಗಳು ಮಳೆಯಾಗುವ ಪರಿಸ್ಥಿತಿಯಾದರೆ, ಬಹಳಷ್ಟು ಕೆರೆಗಳು ಅಪಾಯದ ಮಟ್ಟವನ್ನು ಈಗಾಗಲೇ ಮುಟ್ಟಿವೆ. ಈಗಾಗಲೇ ಕೆಲವು ಕೆರೆಗಳು ಒಡೆದು ಹೋಗಿರುವಂತಹ ನಿದರ್ಶನಗಳು ಇವೆ. ಮಾನ್ಯ ಕಂದಾಯ ಮಂತ್ರಿಯವರಲ್ಲಿ, ನಾನು ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಇದು ಅಲ್ಲದೆ ನಾವು ಈ "ಭೂ ಸುಧಾರಣಾ ಕಾನೂನು" 1974ರಲ್ಲಿ ಬಂದಮೇಲೆ, ನಾವು ಫಾರಂ ನಂ: 7ರಲ್ಲಿ ಏನು ಅರ್ಜಿಗಳನ್ನು ಹಾಕಿದ ಮೇಲೆ, ಕೆಲವು ಕೇಸ್‌ಗಳು ಇನ್ನೂ ಇತ್ಯರ್ಥವಾಗದೇ, ಹೈಕೋರ್ಟ್‌ನಲ್ಲಿ ಇವೆ, ಕೆಲವು ಟ್ರಿಬ್ಯುನಲ್‌ನಲ್ಲಿ ಇವೆ, ಇದು ಅಲ್ಲದೆ ಅನಂತರ ಬಂದಂತಹ ಫಾರಂ ನಂ:7(ಎ)ರಲ್ಲಿ ಏನು ಇದೆ, ಅದು ಬಹಳಷ್ಟು ಕೇಸ್‌ಗಳು ಇನ್ನು ಪೆಂಡಿಂಗ್‌ನಲ್ಲಿ ಇವೆ. ನಾವು ಅದಕ್ಕೆ

ಮೊದಲಿನಿಂದಲೂ ಡೈರೆಕ್ಟ್ ಕೆ.ಎ.ಎಸ್. ಆಗಿ ಮಾಡಿಕೊಂಡಿರುವವರನ್ನು ಹಾಕುತ್ತಿದ್ದೇವೆ. ಆದರೆ ಈ ಕೇಸ್‌ಗಳು ಬಹಳಷ್ಟು ಇತ್ಯರ್ಥವಾಗದೇ, ಇವು ಪೆಂಡಿಂಗ್ ಉಳಿದುಕೊಂಡು, ರೈತರಿಗೆ, ಮತ್ತೆ ಇಲ್ಲಿ ನಾವು ಭೂ ಸುಧಾರಣಾ ಕಾನೂನಿನ ಪ್ರಕಾರ ಇದ್ದೇವೊ, ಇಲ್ಲವೋ, ಎನ್ನುವಂಥಾ ಅನುಮಾನವಿದೆ. ಅದರಲ್ಲೂ ಬಹಳಷ್ಟು ರಿಜೆಕ್ಟ್ ಆಗಿರುವುದೇ ಇದೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ತಾವು ನನಗೆ 5 ನಿಮಿಷಗಳ ಕಾಲ ಮಾತ್ರ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಆದುದರಿಂದ ಪ್ರಮುಖ ಪಾಯಿಂಟ್‌ಗಳನ್ನು ಮಾತ್ರ ಮಾತನಾಡುತ್ತೇನೆ. ಇದರಲ್ಲಿ ಬಗರ್‌ಹುಕುಂ ವಿಚಾರದಲ್ಲಿ ಮುಖ್ಯವಾಗಿ ಮಾತನಾಡುವಂಥಾದ್ದು ಏನೆಂದರೆ ಈ ಬಗರ್‌ಹುಕುಂ ಸಾಗುವಳಿ ಮಾಡುವಂಥವರು, ಮತ್ತೆ ಊರಿಗೆ ಬೇಕಾಗಿರುವಂತಹ ಜಮೀನು ಬೇಕೆಂಬುವರ ಮಧ್ಯೆ ಕ್ಲಾಷ್ ಆಗಿ, ಎಲ್ಲಾ ಕಡೆಗಳಲ್ಲೂ, ಬಗರ್‌ಹುಕುಂ ಸಾಗುವಳಿ ಬಗ್ಗೆ ಊರಿನೊಳಗೆ ಗಲಾಟೆಗಳು ಆಗಿ, ಹೊಡೆದಾಟಗಳು ಆಗಿ ಕ್ರಿಮಿನಲ್ ಕೇಸ್‌ಗಳು ರೆಕಾರ್ಡ್ ಆಗಿರುವಂತಹ ನಿದರ್ಶನಗಳು ಬಹಳಷ್ಟು ಇವೆ. ಈಗ ಬಗರ್‌ಹುಕುಂ ಸಮಿತಿಯಲ್ಲಿ ನಾವು ಇತ್ಯರ್ಥ ಮಾಡಲು ಹೋದ ತಕ್ಷಣವೇ, ನಾವು ಊರಿನ ವತಿಯಿಂದ ಯಾರಿಗೋ ಸಾಗುವಳಿ ಚೀಟಿಯನ್ನು ಕೊಡಬೇಕೆಂದು ಹೇಳಿ, ಫಾರಂ ನಂ:50, 53ರಲ್ಲಿ ಕೊಡುತ್ತಾ ಹೋಗುತ್ತೇವೆ. ಮತ್ತೊಂದು ಕಡೆಯಿಂದ ಊರಿನವರು ಅವರಿಗೆ ಸಾಗುವಳಿಯನ್ನು ಮಾಡುವುದಕ್ಕೆ ಬಿಡದೆ, ಮತ್ತೊಂದು ಊರಿನ ವತಿಯಿಂದಲೂ ಬೇಕೆಂಬುದು ಇದೆ. ಹಾಗಾಗಿ ವಿಶೇಷವಾಗಿ ರುದ್ರಭೂಮಿ, ನಡುತೋಪಿಗೆ, ಗೋಮಾಳಗಳಿಗೆ, ನಿರ್ದಿಷ್ಟವಾಗಿ ಗ್ರಾಮಕ್ಕೆ ಬೇಕೆಂದು ಇವೆ; ಈ ರುದ್ರಭೂಮಿಗಳನ್ನು ಮಾಡುವಂತಹ ವಿಚಾರದಲ್ಲಿ ಸರ್ವೆಯರ್‌ಗಳನ್ನು ತತ್‌ಕ್ಷಣ ನೇಮಕ ಮಾಡಿಕೊಂಡು, ಈ ಸರ್ವೆ ಕಾರ್ಯ ಮಾಡಿದರೆ ನಮಗೆ ಹೆಚ್ಚಿನ ಅನುಕೂಲಗಳು ಆಗುತ್ತವೆ. ನಾವು ಎಲ್ಲಾ ಊರುಗಳಿಗೂ ಸ್ಮಶಾನಗಳನ್ನು, ರುದ್ರಭೂಮಿಗಳನ್ನು ಮಾಡಬೇಕೆಂಬ ನಿಟ್ಟಿನಲ್ಲಿ ಎಲ್ಲಾ ಕಡೆಗಳಲ್ಲೂ ಮಾರ್ಕ್ ಮಾಡಿದ್ದೇವೆ. ಆದರೆ ಅದು ಯಾವ ಕಾರಣಕ್ಕೂ ಸರ್ವೆಯಾಗದೇ, ಮತ್ತೆ ಕೆಲವು ಫಾರೆಸ್ಟ್ ಸರ್ವೆ ನಂಬರ್‌ನಲ್ಲಿ ಇರುವುದರಿಂದ, ಇದು ಮಲೆನಾಡಿನ ಭಾಗದಲ್ಲಿ ಬಹಳ ತೊಂದರೆಗಳು ಆಗಿವೆ. ಆ ನಿಟ್ಟಿನಲ್ಲಿ ಇದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕು. ಇನ್ನು ನಮ್ಮ ಸಾರಿಗೆ ಮಂತ್ರಿಯವರನ್ನು ಒತ್ತಾಯ ಮಾಡುವುದೇನೆಂದರೆ, ಬಸ್ ಸ್ಟ್ಯಾಂಡ್‌ಗಳನ್ನು ನಾವು ಬಹಳಷ್ಟು ದಿವಸಗಳಿಂದಲೂ ತಾಲ್ಲೂಕಿಗೆ ಒಂದು ಬಸ್ ಸ್ಟ್ಯಾಂಡ್ ಮಿನಿಮಮ್ ಆಗಿ ಕೇಳಿರುವಂಥಾದ್ದು. ಅಲ್ಲಿ ನಾನಾ ರೀತಿಯ ತೊಂದರೆಗಳು ಇವೆ, ಈಗ ಅವೆಲ್ಲಾ ಕ್ಲಿಯರ್ ಆಗಿ ಇವೆ. ನಮಗೆ ಬಸ್ ಸ್ಟ್ಯಾಂಡ್ ಮಾತ್ರ ಮಾಡಿದರೆ ಸಾಲದು, ಏಕೆಂದರೆ ಒಂದೊಂದು ತಾಲ್ಲೂಕಿಗೂ ಕೂಡ ಮಿನಿಮಮ್ ಆಗಿ ಒಂದು ಸಣ್ಣ ಡಿಪೋವನ್ನು ಕೊಡಲಿಲ್ಲವೆಂದರೆ, ನಾವು ಅಲ್ಲಿ ಯಾವ ಕಾರಣಕ್ಕೂ ಬಸ್ಸುಗಳನ್ನು ನಿಲ್ಲಿಸುವುದಕ್ಕೆ ಬರುವುದಿಲ್ಲ, ಮತ್ತೆ ನಾನಾ ರೀತಿಯ ತೊಂದರೆಗಳು ಆಗುತ್ತವೆ. ಆದುದರಿಂದ ಈ ಬಸ್ ಸ್ಟ್ಯಾಂಡ್‌ಗಳು ಎಲ್ಲೆಲ್ಲಿ ಆಗಿಲ್ಲ, ಅದಕ್ಕೆ ಹೆಚ್ಚಿನ ಒತ್ತನ್ನು ಕೊಡುವಂಥಾದ್ದು, ಮತ್ತು ಬಸ್ ಡಿಪೋಗಳನ್ನು ಮಾಡುವಂಥಾದ್ದು, ಆಗಬೇಕು. ಇನ್ನು ನ್ಯಾಷನಲೈಜ್ ರೋಡ್‌ಗಳಲ್ಲಿ ಕ್ರಾಸ್ ಓವರ್ ಏನು ಮಾಡಬೇಕೆಂದು ಇದೆ, ಇದು ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಓವರ್ ಏನು ಮಾಡಬೇಕೆಂದು ಇದೆ, ಇದು ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಗೊಂದಲವಾಗಿದೆ. ಅಲ್ಲಿ 200 ಅಡಿ ಇದ್ದರೆ ಸಾಕು, ಅಲ್ಲಿ ಕ್ರಾಸ್ ಓವರ್ ಮಾಡುವ ಹಾಗೆ ಇಲ್ಲವೆಂದು, ಆರ್‌ಟಿಓಗಳು ಮತ್ತು ಡಿಸಿಗಳು ಹೇಳುತ್ತಾರೆ. ಇದು ಬಹಳಷ್ಟು ಕಡೆ ಬಸ್ಸುಗಳು ಸಾಗುವುದಕ್ಕೆ

ಆಗದೇ, ಇರುವಂತಹ ಪರಿಸ್ಥಿತಿ ಇದೆ. ಅದೇ ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಎರಡು, ಮೂರು ಕಿ.ಮೀ. ಆದರೂ ಕ್ರಾಸ್ ಓವರ್ ಮಾಡುವುದಕ್ಕೆ, ಒವರ್‌ಲ್ಯಾಪ್ ಮಾಡುವುದಕ್ಕೆ ಕೊಡುತ್ತಾರೆ. ಆದರೆ ಇಲ್ಲಿ ಕೆಲವು ಕಡೆ ಪರ್ಮಿಷನ್ ಕೊಟ್ಟಿದ್ದಾರೆ, ಕೆಲವು ಕಡೆಗಳಲ್ಲಿ ಕೊಡದೆ, ನಾನಾ ರೀತಿಯ ಸಮಸ್ಯೆಗಳು ಆಗಿವೆ. ಇನ್ನು ಕೆಲವು ವಿಚಾರಗಳು ಸ್ಟೂಡೆಂಟ್ಸ್‌ಗೆ ಬಸ್ ಪಾಸ್‌ಗಳನ್ನು ಕೊಡುವ ವಿಚಾರದಲ್ಲಿ ಅದನ್ನು 40 ಕಿ.ಮೀ. ನಿಂದ 60 ಕಿ.ಮೀ.ಗೆ ಮಾಡಬೇಕೆಂಬ ಬಗ್ಗೆ ನಮ್ಮ ಒತ್ತಾಯ ಇದೆಯೆಂಬ ಮಾತನ್ನು ಹೇಳುತ್ತೇನೆ. ಇನ್ನು "ಅರಣ್ಯ ಸಮಿತಿ"ಗಳು; ಈಗ ಬಗರ್‌ಹುಕುಂನಿಂದ ಬಂದಿರುವಂತಹ ಅರಣ್ಯ ಸಮಿತಿಗಳು ಇವೆ, ಈ ಅರಣ್ಯ ಸಮಿತಿಗಳನ್ನು ನಾವು ಮಾಡಿದ್ದೇವೆ; ಆದರೆ ನಾನು ಮಾನ್ಯ ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಅರಣ್ಯ ಸಮಿತಿಯನ್ನು ಯಾವ ನಿರ್ದೇಶನದ ಮೇಲೆ ಮಾಡಲಾಗಿದೆ. ಇದಕ್ಕೆ ಅಪ್ಲಿಕೇಷನ್ ಅನ್ನು ಕೊಡಬೇಕೆಂದು, ಹೇಳಿ ಅದಕ್ಕೆ ಈಗಾಗಲೇ ಅಪ್ಲಿಕೇಷನ್ ಫಾರ್ಮೆಟ್ ಅನ್ನು ತಯಾರು ಮಾಡಿ, ಎಲ್ಲರಿಗೂ ಜಿ.ಓ. ಮುಖಾಂತರ ಕಳುಹಿಸಿಕೊಟ್ಟಿದ್ದೇವೆ. ಆದರೆ ಇವೆಲ್ಲವೂ ಕೂಡ ಈಗಾಗಲೇ ಬಗರ್‌ಹುಕುಂನಲ್ಲಿ ತೆಗೆದುಕೊಂಡು, ಇವೆಲ್ಲವೂ ಅರಣ್ಯ ಇಲಾಖೆಯಲ್ಲಿದೆ ಎಂದು ರಿಜೆಕ್ಟ್ ಆಗಿರುವಂತಹ ಫಾರಂ ನಂ:50, 53ರಲ್ಲಿ ಹಾಕಿದ್ದು, ಇದು ಅರಣ್ಯವೆಂದು ಹೇಳಿ ರಿಜೆಕ್ಟ್ ಮಾಡಿ ಇಟ್ಟಿರುವಂಥಾದ್ದು ಸುಮಾರು 15 ಸಾವಿರದಿಂದ 16 ಸಾವಿರ ಅರ್ಜಿಗಳು ಇವೆ. ಈಗ ಮತ್ತೊಂದು ಅರ್ಜಿಯನ್ನು ಕೊಟ್ಟು, ಅದಕ್ಕೆ ಯಾವುದೇ ರೀತಿಯ ಮಾರ್ಗಸೂಚಿಯನ್ನು ಕೊಡದೆ, ಕೊಟ್ಟಿರುವಂಥಾದ್ದು ಬಹಳ ಗೊಂದಲವನ್ನುಂಟು ಮಾಡಿದೆ. ಈಗಾಗಲೇ ಹಿಂದೆ 1978ರಿಂದ 1980ರ ಹಿಂದೆ ಯಾವ್ಯಾವುದು ಸಾಗುವಳಿಯನ್ನು ಮಾಡಿದ್ದಾರೆ, ಅವೆಲ್ಲಕ್ಕೂ ಕೊಡಬೇಕೆಂಬ ಕಾನೂನು ಇದೆ. ಈಗ ಮತ್ತೆ ಇನ್ನೊಂದು ಅಪ್ಲಿಕೇಷನ್ ಅನ್ನು ತೆಗೆದುಕೊಂಡು, ಈಗ ಅರಣ್ಯ ಸಮಿತಿಯ ಮುಂಖಾತರ ಇದನ್ನು ಬಗೆಹರಿಸುತ್ತೇವೆನ್ನುವಂತಹ ವಿಚಾರ ಏನು ಇದೆ, ಇದು ಬಹಳ ಗೊಂದಲವಾಗುವಂಥಾದ್ದು, ಇಲ್ಲವೆಂದರೆ ನಿರ್ದಿಷ್ಟವಾಗಿ . . .

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, 1978ರ ಮೊದಲು ಯಾವ ಜಮೀನನ್ನು ಕಾಬೀಜ್ ಆಗಿದ್ದಾರೆ, ಅಂತಹ ಜಮೀನಿನ ಬಗ್ಗೆ ಅರ್ಜಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಯಾವುದು ಮಂಜೂರು ಆಗಿಲ್ಲ, ಅಂಥದ್ದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದು 14 ಸಾವಿರ ಹೆಕ್ಟಾರ್ ಭೂಮಿ ಮಂಜೂರು ಆಗಿದೆ. ಇನ್ನು ಕೆಲವು ಪೆಂಡಿಂಗ್ ಇದೆ, ಅದನ್ನೂ ಕೂಡ ನಾವು ಕಳುಹಿಸಿದ್ದೇವೆ. ಅದನ್ನು ಅರಣ್ಯ ಸಮಿತಿಯ ಮುಖಾಂತರ ಏಕೆ ತೆಗೆದುಕೊಳ್ಳುತ್ತಿದ್ದೇವೆಂದರೆ, 1980ರ ನಂತರ ಒಂದೂ ಅಪ್ಲಿಕೇಷನ್ ಅನ್ನು ತೆಗೆದುಕೊಳ್ಳುವುದಿಲ್ಲ, ಯಾವುದು ಸಕ್ರಮ ಮಾಡುವುದಕ್ಕೆ ಆಗುವುದಿಲ್ಲ. 1980ಕ್ಕಿಂತ ಮೊದಲು ಏನು ಇದೆ, ಅಂಥವು ಯಾವ್ಯಾವುದು ಬಿಟ್ಟು ಹೋಗಿವೆ, ಅವು ಅರಣ್ಯ ಸಮಿತಿಯ ಮುಂದೆ ಬಂದು, ನಂತರ ನಮಗೆ ಬರುತ್ತವೆ. ಅನಂತರ ಅದನ್ನು ಸಕ್ರಮ ಮಾಡುವುದಕ್ಕೆ ನಾವು ಕಳುಹಿಸಿಕೊಡುತ್ತೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುತ್ತಿರುವಂಥಾದ್ದು, ಈಗಾಗಲೇ ಬಗರ್‌ಹುಕುಂ ಸಮಿತಿಯಲ್ಲಿ ಇವೆಲ್ಲವೂ ಅರಣ್ಯವೆಂದು ರಿಜೆಕ್ಟ್ ಆಗಿ ಸುಮಾರು 15–16 ಸಾವಿರ ಅರ್ಜಿಗಳು ಪೆಂಡಿಂಗ್‌ನಲ್ಲಿ ಇವೆ. ಈಗ ಮತ್ತೆ ನಾವು ಅಪ್ಲಿಕೇಷನ್ ಅನ್ನು ತೆಗೆದುಕೊಳ್ಳುವುದಕ್ಕೆ ಶುರು ಮಾಡಿದರೆ ಸಾವಿರಾರು ಅರ್ಜಿಗಳು ಈ ಅರಣ್ಯ ಸಮಿತಿಗೆ ಬಂದು, ಗೊಂದಲವಾಗುತ್ತದೆ. ಅದಕ್ಕೆ ನಾವು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಗರ್‌ಹುಕುಂ ಸಮಿತಿಯಲ್ಲಿ ಏನು ಇದೆ, ಮೊದಲು ಇದು ಇತ್ಯರ್ಥವಾಗಲಿ, ಇದು ಆದಮೇಲೆ ಮಾಡಬಹುದು.

ಈಗ ನಾವು ಅರಣ್ಯ ಸಮಿತಿ ಎಂದು ಏನು ರೂಪರೇಷಗಳನ್ನು ಕೊಟ್ಟಿದ್ದೇವೆ ಅದನ್ನು ಬಿಟ್ಟಿದೆ ಇದುವರೆಗೂ ಬೇರೆ ಯಾವ ಗೈಡ್‌ಲೈನ್ಸ್ ಅನ್ನೂ ಕೊಡಲಿಲ್ಲ. ನಾವು ಬರೀ 'ಅರಣ್ಯ ಸಮಿತಿ' ಎಂದು ಕೊಟ್ಟಿದ್ದೇವೆ. ಅವರಿಗೆ ಮೀಟಿಂಗ್ ಕರೆಯುವುದಕ್ಕೆ ಯಾವುದೇ ರೀತಿಯಲ್ಲೂ ಗೈಡ್‌ಲೈನ್ಸ್ ಕೊಟ್ಟಿಲ್ಲ. ಆದುದರಿಂದ ಈಗ ನೀವು ಅರಣ್ಯ ಸಮಿತಿಗೆ ಏನು ಅರ್ಜಿಗಳನ್ನು ಕೊಡಬೇಕೆಂದು ಕೊಟ್ಟಿದ್ದೀರಿ, ಇದನ್ನು ಈಗ ಕೊಡಬೇಕೋ ಬಿಡಬೇಕೋ, ಎನ್ನುವಂಥಾದ್ದನ್ನು ತೀರ್ಮಾನ ಮಾಡಬೇಕು. ಇದನ್ನು ಕೊಡಬೇಕೆಂದು ಹೇಳಿದರೆ ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ನಾವು ಈಗ ಗೈಡ್‌ಲೈನ್ಸ್ ಕೊಟ್ಟು, ಎಲ್ಲಾ ಕಡೆಗೂ ಅರಣ್ಯ ಸಮಿತಿಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲೂ ಅರಣ್ಯ ಸಮಿತಿಗಳನ್ನು ಬೇಗ ಮಾಡುತ್ತೇವೆ. ಅವರಿಗೆ ಗೈಡ್‌ಲೈನ್ಸ್ ಕೊಡುತ್ತೇವೆ.

ಶ್ರೀ ಬಿ.ಎ. ಜೀವಿಜಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರ್ ಬಂಗಾರಪ್ಪನವರು ಹೇಳಿದ ಹಾಗೆ, ಈಗ ಅರಣ್ಯ ಸಮಿತಿಯೆಂದು ಬರೀ ಪೇಪರ್‌ನಲ್ಲಿ ಅಷ್ಟೇ ಮಾಡಿದ್ದಾರೆ. ಇವರು ಅರಣ್ಯ ಸಮಿತಿಯನ್ನೇ ಮಾಡಿಲ್ಲ, ಒಂದು ಮೀಟಿಂಗ್ ಮಾಡಿಲ್ಲ. ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ಈ ಅರಣ್ಯ ಸಮಿತಿಯನ್ನು ಬೇಗ ರಚನೆಯನ್ನು ಮಾಡಿ, ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಈಗ ನಾವು ಅರಣ್ಯ ಸಮಿತಿಯನ್ನು ಮಾಡಿದ್ದೇವೆ, ಇನ್ನೂ ಮಾಡುವಂಥಾದ್ದು ಬಹಳ ಇದೆ. ಸುಳ್ಳು ಏಕೆ ಹೇಳುವುದು. ನಾವು ಸತ್ಯವನ್ನೇ ಹೇಳುತ್ತಿರುವುದು, ಕೆಲವು ಕಡೆ ಆಗಿದೆ, ಕೆಲವು ಕಡೆಗಳಲ್ಲಿ ಆಗಿಲ್ಲ.

ಶ್ರೀ ಬಿ.ಎ. ಜೀವಿಜಯ: ಮಾನ್ಯ ಅಧ್ಯಕ್ಷರೆ, ನಾನು ಉದಾಹರಣೆಗೆ ಕೇಳುತ್ತೇನೆ. ಇದನ್ನು ಸೋಮವಾರಪೇಟೆಯಲ್ಲಿ ಮಾಡಿದ್ದೀರಾ? ಕೊಡಗಿನಲ್ಲಿ ಮಾಡಿದ್ದಿರಾ? ಅದನ್ನು ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಕೆಲವು ಕಡೆಗಳಲ್ಲಿ ಮಾಡಿದ್ದೇವೆ, ಕೆಲವು ಕಡೆ ಮಾಡಿಲ್ಲ, ಮಾಡುತ್ತೇವೆಂದು ಹೇಳಿದ್ದೇನೆ.

ಅಧ್ಯಕ್ಷರು: ದಯಮಾಡಿ ಬೇಗ ಮುಗಿಸಿ, ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಪಶ್ಚಿಮ ಘಟ್ಟಗಳಲ್ಲಿರುವ ಗಣಿಗಾರಿಕೆಯನ್ನು ಡಿಸೆಂಬರ್ ಒಳಗೆ ಬಂದ್ ಮಾಡಬೇಕೆಂದು ಆಗಿದೆ. ಅದು ಕುದುರೆಮುಖ ಇರಬಹುದು, ಮತ್ತೊಂದು ಇರಬಹುದು. ವೆಸ್ಟರ್ನ್ ಘಾಟ್ಸನ್ನು ಪ್ರಪಂಚದ ಹತ್ತು ಉತ್ತಮವಾಗಿರತಕ್ಕಂಥ ಅರಣ್ಯ ಪ್ರದೇಶಗಳಲ್ಲಿ ಒಂದು ಎಂದು ಈಗಾಗಲೇ ಗುರುತು ಮಾಡಿ ಆಗಿದೆ. ಅಲ್ಲಿ ಯಾವುದೇ ಕಾರಣಕ್ಕಾಗಿ ಡೀ-ಫಾರೆಸ್ಟೇಷನ್ ಆಗಲೀ, ಮರಗಳನ್ನು ಕಡಿಯತಕ್ಕಂಥಾದ್ದಾಗಲೀ ಅಥವಾ ಗಣಿಗಾರಿಕೆ ಮಾಡುವುದನ್ನಾಗಲೀ ಮಾಡಬಾರದು ಎಂದು ಆಗಿದೆ. ಈಗ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಹಳಷ್ಟು ವರ್ಷಗಳ ಗಣಿಗಾರಿಕೆಯಿಂದ ಅಲ್ಲಿನ ಕೆರೆಗಳು ಮತ್ತು ಹೊಳೆಗಳು ಹೂಳು ತುಂಬಿಕೊಂಡಿದ್ದು ಅದರಿಂದ ಅಲ್ಲಿರತಕ್ಕಂಥ ರೈತರಿಗೆ ತೊಂದರೆಯಾಗಿದ್ದು, ಅಲ್ಲಿ ನೀರಾವರಿ ಸ್ಕೀಂಗಳನ್ನು ಮಾಡಬೇಕು. ಅಲ್ಲಿ ದೊಡ್ಡದೊಡ್ಡ ಡ್ಯಾಂಗಳನ್ನು ಕಟ್ಟಿ ಎಂದು ನಾವು ಹೇಳುವುದಿಲ್ಲ, ಅದೆಲ್ಲಾ ಅಲ್ಲಿ ಆಗುವುದಿಲ್ಲ. ಈ ಬಗ್ಗೆ ಹೋದ ಸಾರಿಯೂ ಬಹಳಷ್ಟು ಚರ್ಚೆಯಾಗಿದೆ. ಆದ್ದರಿಂದ ಅಲ್ಲಿ ಸಣ್ಣಸಣ್ಣ ಚೆಕ್ ಡ್ಯಾಂಗಳ ತರಹ ಮಾಡಬೇಕು. ಈಗಾಗಲೇ ಕರಾವಳಿ ಪ್ರದೇಶದಲ್ಲಿ ಪಶ್ಚಿಮ ವಾಹಿನಿ ಎನ್ನುವ ಕಾರ್ಯಕ್ರಮವಿದ್ದು, ಪಶ್ಚಿಮಕ್ಕೆ ಹರಿಯತಕ್ಕಂಥ ನದಿಗಳ ಬಗ್ಗೆ ಮತ್ತು ಪೂರ್ವಕ್ಕೆ ಹರಿಯತಕ್ಕಂಥ ನದಿಗಳ ಬಗ್ಗೆ ಏನು [illegible]
[illegible]

ಅಧ್ಯಕ್ಷರು: ದಯಮಾಡಿ ನಿಲ್ಲಿಸಿ, ಸಾಕು.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಎರಡೇ ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಗುಡವಿ ಎನ್ನುವ ಪಕ್ಷಿಧಾಮವಿದೆ. ನಮ್ಮ ರಾಷ್ಟ್ರದಲ್ಲಿ ಹತ್ತು ಮುಖ್ಯವಾಗಿರತಕ್ಕಂಥ ಪಕ್ಷಿಧಾಮಗಳಿದ್ದು, ಅದರಲ್ಲಿ ಒಂದು ನಮ್ಮ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿರುವ ಈ ಗುಡವಿ ಪಕ್ಷಿಧಾಮ. ಅದಲ್ಲದೆ, ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನೂ 2–3 ಪಕ್ಷಿಧಾಮಗಳಿವೆ. ಈ ಪಕ್ಷಿಧಾಮಕ್ಕೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಿಕೊಡಬೇಕು. ಏಕೆಂದರೆ, ಭಾರತದಲ್ಲೇ ಮುಖ್ಯವಾದ ಪಕ್ಷಿಧಾಮಗಳಲ್ಲೊಂದು ಎಂದು ಅದನ್ನು ಮಾರ್ಕ್ ಮಾಡಿ ಆಗಿದೆ. ಆ ಪಕ್ಷಿಧಾಮಕ್ಕೆ ರಸ್ತೆಗಳ ಸಂಪರ್ಕ ಆಗಬೇಕು. ಇದು ಟೂರಿಸ್ಟ್ ಪ್ಲೇಸ್ ಸಹ ಆಗುತ್ತದೆ. ಏಕೆಂದರೆ ಅಲ್ಲಿ ಬನವಾಸಿ ಇದೆ, ಗುಡವಿ ಪಕ್ಷಿಧಾಮವಿದೆ, ಜೋಗ್‌ಫಾಲ್ಸ್ ಇದೆ. ಇವೆಲ್ಲವನ್ನೂ ಲಿಂಕ್ ಮಾಡಿ, ರಸ್ತೆ ಸಂಪರ್ಕದ ವ್ಯವಸ್ಥೆಯನ್ನು ಮಾಡಿದರೆ ನಮಗೆ ಎಲ್ಲಾ ರೀತಿಯಿಂದಲೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು: ದಯಮಾಡಿ ನಿಲ್ಲಿಸಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಪವರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಅಪೋಸಿಷನ್‌ನವರು ಅಷ್ಟೊಂದು ಮಾತನಾಡುವಾಗ ನಾವೇನೂ ಗಲಾಟೆ ಮಾಡುವುದಿಲ್ಲ, ಸೈಲೆಂಟಾಗಿ ಕುಳಿತುಕೊಂಡಿರುತ್ತೇವೆ. ಅವರ ಮಾತನ್ನು ಕೇಳುತ್ತೇವೆ. ಚರ್ಚೆಗೆ ತಾವು ನಾಲ್ಕು ಗಂಟೆಯವರೆಗೂ ಟೈಂ ಕೊಟ್ಟಿದ್ದೀರಿ, ಅದರಲ್ಲಿ ಎರಡೇ ನಿಮಿಷ ಮಾತನಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಜೀವಿಜಯಾರವರು ಆಗಲೇ ಒಂದು ವಿಷಯವನ್ನು ಕೇಳಿದರು. 34 ತಾಲ್ಲೂಕುಗಳಲ್ಲಿ ಕಮಿಟಿ ಆಗಿದೆ.

ಅಧ್ಯಕ್ಷರು: ಅರಣ್ಯ ಸಚಿವರೇ, ತಾವು ಉತ್ತರ ಕೊಡುವಾಗ ಹೇಳುವಿರಂತೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಉತ್ತಮವಾಗಿರತಕ್ಕಂಥ ಒಂದು ಕಾರ್ಯಕ್ರಮವನ್ನು ಇಂಧನ ಸಚಿವರಿಗೆ ಹೇಳಲು ಇಚ್ಛೆಪಡುತ್ತೇನೆ. 'ಆಶ್ರಯ' ಮನೆಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಲು ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಲೈನ್ ಎಳೆಯುವುದಕ್ಕೆ, ಕಂಬ ಹಾಕುವುದಕ್ಕೆ ಬಹಳಷ್ಟು ದೊಡ್ಡ ಮಟ್ಟದಲ್ಲಿ ನಾವು ದುಡ್ಡನ್ನು ಖರ್ಚು ಮಾಡುತ್ತಿದ್ದೇವೆ. ನಾನು ಇಂಧನ ಸಚಿವರಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ, ಒಂದೊಂದು ಮನೆಗೆ ಒಂದೊಂದು ಸೋಲಾರ್ ಸಿಸ್ಟಂ ಅನ್ನು ಕೊಟ್ಟುಬಿಡಿ. ಎರಡು ಬಲ್ಬ್‌ಗಳನ್ನು ಸೋಲಾರ್ ಸಿಸ್ಟಂ ಅನ್ನು ಕೊಡಿ. ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ, ಮೀಟರ್ ಹಾಕುವುದಕ್ಕೆ, ಮತ್ತೊಂದಕ್ಕೆಲ್ಲಾ ಖರ್ಚು ಬರುತ್ತದೆ. ಅದರ ಬದಲು ಸೋಲಾರ್ ಸಿಸ್ಟಂ ಅನ್ನು ಕೊಟ್ಟರೆ ಅವರೂ ಕೂಡ, ಯಾವುದೇ ಬಿಲ್ ಮತ್ತೊಂದು ಇಲ್ಲದೇ ನೆಮ್ಮದಿಯಿಂದ ಇರಬಹುದು. ಈ ಸೋಲಾರ್ ಸಿಸ್ಟಂಗಳನ್ನು ಮಾಸ್ ಆಗಿ ಪ್ರೊಡಕ್ಷನ್ ಮಾಡುವುದರಿಂದ ಯೂನಿಟ್ ಕಾಸ್ಟ್ ಕೂಡ ಕಡಿಮೆಯಾಗುತ್ತದೆ. ಯುಟಿಲಿಟಿಗೆ ಟು ಬಲ್ಬ್ಸ್ ಬೇಕೆಂದು ಹೇಳುತ್ತೀರಿ. I think, each Solar system of two bulbs will cost about Rs. 2,500 to 3,000 in a mass production. ಎರಡು ಬಲ್ಬಿನ ಒಂದು ಸೋಲಾರ್ ಸಿಸ್ಟಂ ಅನ್ನು ಕೊಟ್ಟರೆ, ತನ್ನ ಮನೆಗೆ ವಿದ್ಯುತ್ತನ್ನು ಕೇಳುತ್ತಿರುವ ಕೂಲಿ ಕಾರ್ಮಿಕ ಅಥವಾ ಮತ್ತೊಬ್ಬನಿಗೆ ಯಾವುದೇ ಸಮಸ್ಯೆಯಿಲ್ಲದೆ, ವಿದ್ಯುತ್ ಸಮಸ್ಯೆ ಪರಿಹಾರವಾಗುತ್ತದೆ. 5 ವಿದ್ಯುತ್ ಸರಬರಾಜು

ಕಂಪನಿಗಳಾಗಿದ್ದು, ಅವುಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗೆ ಕೊಡಗು ಸೇರುತ್ತದೆ ಎಂದು ಇಂಧನ ಸಚಿವರು ಹೇಳಿದ್ದರು. ಆದರೆ ಅದು ಇನ್ನೂ ಮೆಸ್ಕಾಂನಲ್ಲೇ ಇದೆ, ಚಾಮುಂಡೇಶ್ವರಿಗೆ ಸೇರಲು ಇನ್ನೂ ಆರ್ಡರ್ಸ್ ಆಗಿಲ್ಲ. ಕಳೆದ ಸಲ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಿದ್ದು, ಕೊಡಗನ್ನು ಮೈಸೂರಿಗೆ ಸೇರಿಸಿಕೊಳ್ಳುವ ತೀರ್ಮಾನವಾಗಿತ್ತು, ಅದು ಇನ್ನೂ ಕೂಡ ಆದೇಶವಾಗಿಲ್ಲ.

ಇನ್ನು, ಮಾನ್ಯ ನೀರಾವರಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ; . . . . ಹೋದಸಲವೂ ಕೂಡ ನಾವು ಒತ್ತಾಯ ಮಾಡಿದ್ದೇವೆ . . . . .

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಇನ್ನೊಂದು ಸಲ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಕುಮಾರ ಬಂಗಾರಪ್ಪ: ಎಲ್ಲಿ ಇನ್ನೊಂದು ಸಲ ಅವಕಾಶ ಕೊಡುತ್ತೀರಿ? ನೀರಾವರಿಗೆ ಸಂಬಂಧಪಟ್ಟಂತೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ.

ಅಧ್ಯಕ್ಷರು: ಎಲ್ಲರೂ ಹೀಗೆ ಹೇಳುತ್ತಾ ಹೋದರೆ ನಾಲ್ಕು ಗಂಟೆಯೊಳಗೆ ಎಷ್ಟು ಜನ ಮಾತನಾಡಬಹುದು? ಎಲೆಕ್ಟ್ರಿಸಿಟಿ ಬಗ್ಗೆ ಮತ್ತು ನೀರಾವರಿ ಬಗ್ಗೆ 4ನೇ ತಾರೀಖು ಪೂರ್ಣವಾಗಿ ಅವೆರಡಕ್ಕೇ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆವತ್ತು ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ನೀವು ಹೇಳುತ್ತಿದ್ದೀರಿ ಎಂದ ಮೇಲೆ ಆಯಿತು ಅಧ್ಯಕ್ಷರೆ, ಧನ್ಯವಾದಗಳು.

ಅಧ್ಯಕ್ಷರು: ಈಗ ಮಾನ್ಯ ಅಶೋಕ್‌ರವರು. ಅಶೋಕ್‌ರವರೇ, ನಿಮಗೂ ಅಷ್ಟೇ, 5 ನಿಮಿಷ.

ಶ್ರೀ ಆರ್. ಅಶೋಕ್: ಆಯಿತು, ಅವರು ಎಷ್ಟು ಹೊತ್ತು ಮಾತನಾಡಿದರೋ, ನಾನು ಅಷ್ಟು ಹೊತ್ತೇ ಮಾತನಾಡುತ್ತೇನೆ.

ಅಧ್ಯಕ್ಷರು: ಅವರೂ ಅಷ್ಟೇ ಮಾತನಾಡಿದ್ದು, ಅವರು 8 ನಿಮಿಷವೋ, 9 ನಿಮಿಷವೋ ಮಾತನಾಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನನಗೂ ಅವಕಾಶ ಕೊಡಬೇಕು.

ಅಧ್ಯಕ್ಷರು: ಆಯಿತು, ನೀವು ಒಂದೈದು ನಿಮಿಷ ಮಾತನಾಡುವಿರಂತೆ, ಈಗ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್(ಉತ್ತರಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದ ಮೇಲೆ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ಈಗಾಗಲೆ ಬಹಳಷ್ಟು ಐ.ಟಿ. ಕಂಪನಿಗಳು ಮತ್ತು ಬಹಳಷ್ಟು ಇಂಡಸ್ಟ್ರೀಸ್ ಬೆಂಗಳೂರನ್ನು ಬಿಟ್ಟು ಹೋಗುವ ಪರಿಸ್ಥಿತಿ ಬಂದಿದೆ. ಬೆಂಗಳೂರಿನಲ್ಲಿ ಲಾ ಅಂಡ್ ಆರ್ಡರ್ ಹದಗೆಟ್ಟಿದೆ. ಈ ಸರ್ಕಾರ ಬಂದ ಮೇಲೆ ಬೆಂಗಳೂರಿನ ಅಭಿವೃದ್ಧಿಗಾಗಿ ಯಾವುದೇ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ, ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಯಾವುದೇ ಚಿಂತನೆಯನ್ನು ಇದುವರೆಗೂ ಮಾಡದೇ, ಬೆಂಗಳೂರನ್ನು ಒಂದು ಕೊಳಗೇರಿಯನ್ನಾಗಿ ಮಾಡಲು ಈ ಸರ್ಕಾರ ಹೊರಟಿದೆ ಎನ್ನುವುದು ನನ್ನ ಮೊದಲ ಆಪಾದನೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಐದು ವರ್ಷಗಳಲ್ಲಿ 3,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟು ದೊಡ್ಡದಾದಂಥ ಅಮೌಂಟನ್ನು ಖರ್ಚು ಮಾಡಿದ್ದರೂ ಸಹ ಬೆಂಗಳೂರು ಮಹಾನಗರ ಪಾಲಿಕೆ ಯಾವುದೇ ಒಂದು ಮೇಜರ್ ಕಾರ್ಯಕ್ರಮವನ್ನು ಹಾಕಿಕೊಂಡು, ಬೆಂಗಳೂರು ಅಭಿವೃದ್ಧಿ ಯಾವ ರೀತಿ ಆಗಬೇಕು, ಬೆಂಗಳೂರಿನ

ಕೊಳಗೇರಿಗಳ ಅಭಿವೃದ್ಧಿ ಹೇಗೆ ಆಗಬೇಕು, ಬೆಂಗಳೂರಿನ ಸ್ಟಾರ್ಮ್ ವಾಟರ್ ಡ್ರೈನ್ಸ್‌ಗಳು ಯಾವ ರೀತಿ ಇರಬೇಕು, ಫ್ಲೈ ಓವರ್ಸ್ ಯಾವ ರೀತಿ ಇರಬೇಕು ಎನ್ನುವ ಬಗ್ಗೆ ಒಂದು ನೀಲಿ ನಕ್ಷೆ ಇಲ್ಲದೇ, ಸುಮ್ಮನೇ ಹಣವನ್ನು ವೃಥಾ ಖರ್ಚು ಮಾಡಿದ್ದಾರೆ. ಮೋರಿಗಳ ಮೇಲೆ ಸಿರಾ ಕಲ್ಲು ಹಾಕುವುದಕ್ಕೆ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾದ್ದು, ಉದ್ಯಾನವನಗಳಲ್ಲಿ ಗಿಡಗಳನ್ನು ಹಾಕುತ್ತೇವೆ ಎಂದು ದಂಧೆ ಮಾಡಿ ಕಳೆದ ಐದು ವರ್ಷಗಳಲ್ಲಿ 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ, ಯಾವುದೇ ಲಂಗುಲಗಾಮು ಇಲ್ಲದೇ, ಇವತ್ತು ಬೆಂಗಳೂರು ಮಹಾನಗರ ಪಾಲಿಕೆ ಒಂದು ಅವ್ಯವಹಾರದ ಆಗರವಾಗಿ, ಜನಸಾಮಾನ್ಯರಿಗೆ ಎಟುಕದ ರೀತಿಯಲ್ಲಿದೆ. ಕರ್ನಾಟಕ ಭ್ರಷ್ಟಾಚಾರದಲ್ಲಿ, ಅವ್ಯವಹಾರದಲ್ಲಿ 4ನೇ ಸ್ಥಾನದಲ್ಲಿದೆ ಅಂದರೆ, ಅದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಕೊಡುಗೆ ಬಹಳ. ಭ್ರಷ್ಟಾಚಾರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ನಂಬರ್ ಒನ್ ಸ್ಥಾನದಲ್ಲಿದೆ. ಹಾಗಾಗಿಯೇ ಕರ್ನಾಟಕಕ್ಕೆ ನಾಲ್ಕನೇ ಸ್ಥಾನ ಬಂದಿದೆ. ಇಲ್ಲದಿದ್ದರೆ, ಅದು ಹಿಂದಕ್ಕೆ ಅಂದರೆ 7–8ನೇ ಸ್ಥಾನಕ್ಕೆ ಹೋಗುತ್ತಿತ್ತೇನೋ. ಬೆಂಗಳೂರು ಮಹಾನಗರ ಪಾಲಿಕೆ ಯವರು ಮಾಡುವ ಮುಂಗಡ ಪತ್ರ ಪೂರ್ತಿ ಬೋಗಸ್. 1,500 ಕೋಟಿ ರೂಪಾಯಿಗಳ ಬಜೆಟ್ ಮಾಡುತ್ತಾರೆ, ಆದರೆ ಕೆಲಸ ಮಾಡುವುದು ಬರೀ 400 ಕೋಟಿ ರೂಪಾಯಿಗಳು. ಕಳೆದ 5 ವರ್ಷಗಳಲ್ಲಿ ಬಜೆಟ್‌ನಲ್ಲಿ ಬರುತ್ತಿರುವ ಕೆಲಸಗಳಲ್ಲಿ ಒಂದು ಕೆಲಸವನ್ನೂ ಇದುವರೆಗೆ ಮಾಡಿಲ್ಲ. ಫ್ಲೈ ಓವರ್ – ಸೌತ್ ಎಂಡ್ ಸರ್ಕಲ್, ಇಲ್ಲ. ಫ್ಲೈ ಓವರ್ – ಕನಕಪುರ, ಇಲ್ಲ, ಫ್ಲೈ ಓವರ್–ಮಲ್ಲೇಶ್ವರ ಸರ್ಕಲ್, ಇಲ್ಲ, ಫ್ಲೈ ಓವರ್ – ಮಿನರ್ವ ಸರ್ಕಲ್, ಇಲ್ಲ, ಫ್ಲೈ ಓವರ್–ಪೀಣ್ಯ ಸರ್ಕಲ್, ಇಲ್ಲ, ಫ್ಲೈ ಓವರ್–ಯಶವಂತಪುರ, ಇಲ್ಲ, ಫ್ಲೈ ಓವರ್–ಭಾರತೀ ಟಾಕೀಸ್, ಇಲ್ಲ; ಇವುಗಳೆಲ್ಲವನ್ನೂ ಸುಮ್ಮನೆ ಐದು ವರ್ಷಗಳಿಂದ ಬಜೆಟ್‌ನಲ್ಲಿ ಕಂಟಿನ್ಯೂಯಸ್ ಆಗಿ ಪ್ರಿಂಟ್ ಮಾಡುತ್ತಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತಾರೆ. ಮುಖ್ಯಮಂತ್ರಿಗಳೂ ಸಹ, ನೋಡಿ ಇಷ್ಟೊಂದು ಫ್ಲೈ ಓವರ್‌ಗಳು, ಬೆಂಗಳೂರು ಅಭಿವೃದ್ಧಿಗೆ ಇಷ್ಟನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇವೆಲ್ಲವೂ ಕಳೆದ ಐದು ವರ್ಷಗಳಿಂದ ಬಜೆಟ್‌ನಲ್ಲಿ ಬರುತ್ತಿವೆ. ಆದರೆ ಇವ್ಯಾವುದನ್ನೂ ಮಾಡದೇ, ಈ ಸರ್ಕಾರ ಬೆಂಗಳೂರನ್ನು ಒಂದು ಕೊಂಪೆ ಮಾಡುವುದಕ್ಕೆ ಹೊರಟಿದೆ. ಅದೇ ರೀತಿ, ಇನ್ನೊಂದು ವಿಷಯವೆಂದರೆ, ಬೆಂಗಳೂರಿನ ಕಸ ತೆಗೆಯುವುದರಲ್ಲಿ ಒಂದು ದೊಡ್ಡ ದಂಧೆ ನಡೆಯುತ್ತಿದ್ದು, ಮಾಫಿಯಾ ಗ್ಯಾಂಗ್ ಇದೆ. ಬರೀ ಕಸ ತೆಗೆಯುವುದಕ್ಕೆ 25 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಬಿಹಾರದಲ್ಲಿ 600 ಕೋಟಿ ರೂಪಾಯಿಗಳ ಮೇವನ್ನು ತಿಂದು ಹಾಕಿಬಿಟ್ಟರು ಎಂದು ನಾವು ಕೇಳಿದ್ದೆವು. ಆದರೆ ಇಲ್ಲಿ ಕಸ ತಿನ್ನುತ್ತಾರೆ. 25 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದರೂ, ನೀವು ಬೆಂಗಳೂರಿನಲ್ಲಿ ಎಲ್ಲಿ ಹೋಗಿ ನೋಡಿದರೂ ಲಾರಿಗಟ್ಟಲೆ ಕಸ ಬಿದ್ದಿರುತ್ತದೆ. ಮತ್ತು ಕಸವನ್ನು ಸಾಗಿಸುವುದರಲ್ಲೂ ಅಷ್ಟೇ, ಇವರ ಕಾರ್ಪೋರೇಷನ್ ಏರಿಯಾ ಮುಗಿದ ತಕ್ಷಣ. ಮಾಗಡಿ ರೋಡಿನಲ್ಲಿ ಸುರಿದು ಹೋಗುತ್ತಾರೆ, ಕನಕಪುರ ರೋಡಿನಲ್ಲಿ ಸುರಿದು ಹೋಗುತ್ತಾರೆ, ಹೊಸೂರು ರೋಡಿನಲ್ಲಿ ಸುರಿದು ಹೋಗುತ್ತಾರೆ. ಇವರನ್ನು ಕೇಳುವವರು ಹೇಳುವವರು ಯಾರೂ ಇಲ್ಲ. ಕಸ ಹಾಕಲು ಇವರಿಗೆ ಜಂಕ್ಷನ್ನೇ ಮಾಡಿಲ್ಲ. ಕಸ ತೆಗೆದುಕೊಂಡು ಹೋಗಿ ಎಲ್ಲಿ ಹಾಕಬೇಕು, ಮತ್ತೆ ಅದನ್ನು ಯಾವ ರೀತಿಯಾಗಿ ಗೊಬ್ಬರ ಮಾಡಬೇಕು ಇವುಗಳಿಗೆಲ್ಲಾ

ಯಾವುದೇ ಆ್ಯಕ್ಷನ್ ಪ್ಲಾನ್ ಇಲ್ಲ. ಆದರೆ ಪ್ರತಿವರ್ಷ ಕಸ ತೆಗೆಯುವುದಕ್ಕೆಂದು 25 ಕೋಟಿ ರೂಪಾಯಿಗಳನ್ನು ಇಡುತ್ತಾರೆ. ಕಾರ್ಪೊರೇಷನ್ನನ್ನೇ ಎಳೆದಾಡುವಷ್ಟು ಈ ದಂಧೆ ಪವರ್‌ಫುಲ್ ಆಗಿದೆ. ಅದಕ್ಕೆ ಟೆಂಡರೇ ಕರೆಯುವುದಿಲ್ಲ. 25 ಕೋಟಿ ರೂಪಾಯಿಗಳಿದ್ದರೂ ಅದಕ್ಕೆ ಟೆಂಡರ್ ಕರೆಯುವುದೇ ಇಲ್ಲ. 5 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿದ್ದರೆ ಟೆಂಡರ್ ಕರೆಯಿರಿ ಎಂದು ನಮಗೆ ಒತ್ತಿಒತ್ತಿ ಹೇಳುತ್ತಾರೆ. ನಮ್ಮ ಮಂತ್ರಿಗಳಂತೂ ಕಾನೂನಿನ ಪುಸ್ತಕವನ್ನೇ ಹಿಡಿದು ಓದಿಬಿಡುತ್ತಾರೆ.

ಅಧ್ಯಕ್ಷರು: ಟ್ರಾನ್ಸ್‌ಪೆರೆನ್ಸಿ ಆ್ಯಕ್ಟ್ ಪ್ರಕಾರ ಟೆಂಡರ್ ಕರೆಯಬೇಕಲ್ಲವೇ?

ಶ್ರೀ ಆರ್. ಅಶೋಕ್: ಅವರು ಕರೆಯುವುದಿಲ್ಲ.

ಅಧ್ಯಕ್ಷರು: ಅವರಿಗೇನಾದರೂ ವಿನಾಯಿತಿ ಇದೆಯೇ?

ಶ್ರೀ ಆರ್. ಅಶೋಕ್: 05–02–2005ಕ್ಕೆ tender close ಆಗಿದೆ. Tender close ಆಗಿ ಸುಮಾರು 5 ತಿಂಗಳು ಆಯಿತು. ಅಂದರೆ ಹೋದವರ್ಷದ tender close ಆಯಿತು. ಇದುವರೆಗೆ ಟೆಂಡರ್ ಕರೆದಿಲ್ಲ. ಹೋದ ಸಾರಿ ಏನಾಯಿತೆಂದರೆ ಅವರೇ ಹಾಗೆಯೇ adjustment ಮಾಡಿಕೊಂಡು ಹೇಗೋ ಬರುತ್ತಿದ್ದಾರೆ. ಕಳೆದಬಾರಿಯೂ tender ಕರೆಯದೇ ಹಾಗೆಯೇ adjustment ಮಾಡಿಕೊಂಡು ಬಂದಿದ್ದಾರೆ. ಸುಮಾರು 25 ಕೋಟಿ ರೂಪಾಯಿಗಳ ಟೆಂಡರ್ ಕರೆಯಬೇಕಾಗಿತ್ತು. ದುಡ್ಡು ತಿನ್ನುವುದಕ್ಕೆ, ಕಸ ತಿನ್ನುವುದಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ದಂಧೆ ಮಾಡಿಕೊಂಡು, ಇದಲ್ಲದೆ electricity maintenance ಕೂಡ ಅಷ್ಟೆ, ಇದೂ ಕೂಡ ದಂಧೆ. ಯಾರು repair ಮಾಡುತ್ತಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಯಾರು wire ತೆಗೆಯುತ್ತಾರೆ, wire ಹಾಕುತ್ತಾರೆ, transformer ಹಾಕುತ್ತಾರೆ ಇತ್ಯಾದಿ ಏನೂ ಗೊತ್ತಾಗುವುದಿಲ್ಲ. ಅದರ maintainanceಗೆ ಕೂಡ ಸುಮಾರು 50 ಕೋಟಿ ರೂಪಾಯಿಗಳನ್ನು ಇಟ್ಟುಕೊಳ್ಳುತ್ತಾರೆ. ಒಂದು ಚೂರೂ ಸಹ ನಮ್ಮ ಕೆಲಸ ಆಗುವುದಿಲ್ಲ. ಆದರೆ ಬಿಲ್ ಮಾತ್ರ ಆಗುತ್ತದೆ. ಇವರನ್ನು ಕೇಳುವವರು ಯಾರು? Transparancy Act ನಲ್ಲಿ ಇವರಿಗೆ tender ಕರೆಯಿರಿ ಎಂದು ಹೇಳುವವರು ಯಾರು? ಯಾರೂ ಇಲ್ಲ. ಮಾನ್ಯ ಅಧ್ಯಕ್ಷರೆ, ಇನ್ನೊಂದನ್ನು ತಾವು ಗಮನಿಸಬೇಕು. ಕರ್ನಾಟಕದಲ್ಲಿರತಕ್ಕಂಥ ಎಲ್ಲಾ Departmentsಗೆ ದೊಡ್ಡ ದೊಡ್ಡ ಮಂತ್ರಿಗಳು ಇದ್ದಾರೆ, ಮುಖ್ಯಮಂತ್ರಿಗಳು ಇದ್ದಾರೆ, ನೀರಾವರಿ ಮಂತ್ರಿಗಳು ಇದ್ದಾರೆ. ಹೀಗೆ ಇವರದ್ದೆಲ್ಲಾ ನಮ್ಮ PAC ಗೆ ಬರುತ್ತದೆ. Public Account Committee ಗೆ ಇವರೆಲ್ಲರ ಬಾಧ್ಯತೆ ಇರುತ್ತದೆ. Any time ಯಾರನ್ನೇ ಕರೆದು ಅವ್ಯವಹಾರ ಆಗಿರುವುದನ್ನು ತನಿಖೆ ಮಾಡಬಹುದು. ಕರ್ನಾಟಕದಲ್ಲಿ ಬಿಟ್ಟುಹೋಗಿರುವುದು ಒಂದೇ ಒಂದು. ಅದು ಬೆಂಗಳೂರು ಮಹಾನಗರ ಪಾಲಿಕೆ. ಇವರು Public Accounts Committee ಯ ಸುಪರ್ದಿಗೇ ಬರುವುದಿಲ್ಲ. ಇವರಿಗೆ ಏನೂ enquiry ಮಾಡುವುದಕ್ಕೆ ಆಗುವುದಿಲ್ಲ. ಇವರ ಆಡಿಟ್ ಅನ್ನು ನಾವು ಕೇಳುವುದಕ್ಕಾಗುವುದಿಲ್ಲ. ಆ ರೀತಿ ಒಂದು ವ್ಯವಸ್ಥೆ ಬೆಂಗಳೂರಿನಲ್ಲಿ ಇವತ್ತು ಮಾಡಿ ಬೆಂಗಳೂರು ಮಹಾನಗರ ಪಾಲಿಕೆ ಅವ್ಯವಹಾರ ಮಾಡುವುದಕ್ಕೆ ಒಂದು ದೊಡ್ಡ ಆಗರ ಮಾಡಿದ್ದಾರೆ, ಹಗರಣ ನಡೆಯುತ್ತಿದೆ, ಆದ್ದರಿಂದ ಇವರು ಖರ್ಚು ಮಾಡುವುದಕ್ಕೂ ಅಲ್ಲಿ ಕೆಲಸ ಆಗುತ್ತಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಕಳೆದ ಐದು ವರ್ಷಗಳಲ್ಲಿ ಖರ್ಚಾಗುತ್ತಿರುವುದು 3200 ಕೋಟಿ ರೂಪಾಯಿಗಳು. ಬೆಂಗಳೂರಿನಲ್ಲಿ ಅಂಥ ದೊಡ್ಡ ಬೆಳವಣಿಗೆ ಏನಾಗಿದೆ? ಎಷ್ಟು Flyovers ಆಗಿದೆ? ಒಂದೇ ಒಂದು ಸಣ್ಣ ಮಳೆ ಒಂದು ಗಂಟೆ

ಬೆಂಗಳೂರಲ್ಲಿ ಬಂದರೆ ಎಲ್ಲಾ ಕಡೆ ರಸ್ತೆ ತುಂಬ ನೀರು ಹರಿಯುತ್ತಿರುತ್ತದೆ. ಇದರಿಂದ ಜನರು, ವಾಹನಗಳು ಹೋಗುವುದಕ್ಕಾಗುವುದಿಲ್ಲ. ಕಳೆದ ವರ್ಷ ಸುಮಾರು 18 ಜನ ಸತ್ತಿದ್ದಾರೆ. ಪ್ರತಿ ವರ್ಷ ಸಾಯುತ್ತಲೇ ಇರುತ್ತಾರೆ. ಮಾನ್ಯ ಸಿಂಧ್ಯಾರವರ ಮನೆ ಪಕ್ಕದಲ್ಲಿ ಇದ್ದ ಒಂದು ಫಾಮಿಲಿನೇ ಕೊಚ್ಚಿಕೊಂಡು ಹೋಯಿತು. ಈ storm water drains ಹೇಗಿದೆಯೆಂದರೆ ಬೆಂಗಳೂರಿನಲ್ಲಿ 16 ಅಡಿ ಇದ್ದರೆ ಹೋಗುತ್ತಾ ಹೋಗುತ್ತಾ 5 ಅಡಿ ಆಗುತ್ತದೆ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಬೆಂಗಳೂರು ಮಹಾನಗರ ಪಾಲಿಕೆಗೆ ಅನಿಸಲೇ ಇಲ್ಲ. ಇದುವರೆಗೆ ಅದಕ್ಕೆ 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕಳೆದ 5 ವರ್ಷಗಳಲ್ಲಿ 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಲ್ಲಿಂದ ನೀರು ಹೋಗುವುದಕ್ಕೆ ಏನೂ ವ್ಯವಸ್ಥೆ ಮಾಡದಿರತಕ್ಕಂಥ ಪರಿಸ್ಥಿತಿ ಮಹಾನಗರ ಪಾಲಿಕೆಯದ್ದಾಗಿದೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ಇದು PAC ಕಮಿಟಿಗೆ ಬರಬೇಕು. ಅದರ ಜೊತೆಗೆ ಇಲ್ಲಿ ಆಗಿರುವಂಥ ಅವ್ಯವಹಾರಗಳು ಏನೇನಾಗಿದೆ ಅದಕ್ಕೆ ತನಿಖೆಯಾಗಬೇಕು. ಯಾವುದೇ ಲಂಗುಲಗಾಮ ಇಲ್ಲದೆ ಈ 3200 ಕೋಟಿ ರೂಪಾಯಿಗಳು ಏನು ಖರ್ಚಾಗಿದೆ, ಇದನ್ನು ಒಂದು ವ್ಯವಸ್ಥಿತವಾಗಿ ಮಾಡಬೇಕಾದರೆ Greater Bangalore ಮಾಡಬೇಕು. ಇವತ್ತು I.T. ಕಂಪನಿಗಳು ಸೇರಿದಂತೆ ಬೇರೆ ಎಲ್ಲಾ ಕಂಪನಿಗಳು ಬೇರೆ ಕಡೆಗೆ ಹೋಗುತ್ತಿರುವುದು ಏಕೆಂದರೆ, ಇವೆಲ್ಲಾ Corporation ನಿಂದ ಹೊರಗಡೆ ಇವೆ. ನಾವು ಏನೇ development ಮಾಡಬೇಕಾದರೂ ಇವತ್ತು ನಗರಸಭೆಗಳಿಂದ ಸಾಧ್ಯವಾಗುತ್ತಿಲ್ಲ. ಅದಕ್ಕೆ ಈ Greater Bangalore ಮಾಡಿದರೆ ಈ ಎಲ್ಲಾ 7 ನಗರಸಭೆಗಳನ್ನು ಈ Greater Bangalore ಅಡಿಯಲ್ಲಿ ತಂದು ಬೆಂಗಳೂರನ್ನು ನಾವು develop ಮಾಡಬೇಕು. ಒಂದು ವ್ಯವಸ್ಥಿತವಾಗಿ ಮಾಡುವಂಥ ಕೆಲಸ ಆಗಬೇಕು. ಇಲ್ಲವೆಂದರೆ ಇದು ಯದ್ವಾತದ್ವಾ ಬೆಳೆಯುತ್ತದೆ. ಯಾವುದನ್ನೂ ಕೂಡ development ಮಾಡುತ್ತೇನೆಂದು ಹೇಳಿದರೂ ಸಹ ಅದು ಯಾವುದನ್ನೂ ಮಾಡುವುದಕ್ಕೆ ನಗರಸಭೆಗಳಿಗೆ ಆದಾಯ ಇಲ್ಲ. ನಗರಸಭೆಗಳಿಗೆ betterment charges ಇಲ್ಲ. ಆದಾಯ ಬರುತ್ತಿಲ್ಲ, stamp duty ಬರುತ್ತಿಲ್ಲ, ಇದರಿಂದ ಯಾವುದೇ development ಆಗುತ್ತಿಲ್ಲ. ಅದಕ್ಕೆ ಈ Greater Bangalore ಮಾಡಿ ಏಳು ನಗರಸಭೆಗಳನ್ನು ಬೆಂಗಳೂರು ಒಳಗಡೆ ತಂದರೆ ಒಂದು ಸಮಗ್ರವಾದಂಥ development ಆಗುವುದಕ್ಕೆ ಬೆಂಗಳೂರಿಗೆ ಅವಕಾಶವಾಗುತ್ತದೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ. ಇದರ ಬಗ್ಗೆ ಕೂಡಲೇ ಗಮನಹರಿಸಿ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲವೆಂದರೆ ಬೆಂಗಳೂರು ಈಗಾಗಲೇ ಗೊಂದಲದಲ್ಲಿ ಇದೆ. ಬೆಂಗಳೂರು ಬಗ್ಗೆ ಏಕೋ ಗೊತ್ತಿಲ್ಲ, ಈ ಸರ್ಕಾರದಲ್ಲಿ ಒಂದು ರೀತಿ ಹೊಂದಾಣಿಕೆಯೇ ಇಲ್ಲ. Bangalore Development ಎಂದ ತಕ್ಷಣ ಬೆಂಗಳೂರು ಅಭಿವೃದ್ಧಿ ಮಾಡಬಾರದು, ಬೆಂಗಳೂರು ಬಗ್ಗೆಯೇ ಏಕೆ concentrate ಮಾಡುತ್ತೀರಾ ಎಂದು ಮತ್ತೊಂದು party ಯಿಂದ ತೊಂದರೆ ಪ್ರಾರಂಭವಾಗುತ್ತದೆ. ಇವರ ಗೊಂದಲದಲ್ಲಿ ಈಗಾಗಲೇ ಅರ್ಕಾವತಿ ಬಡಾವಣೆಯ ಕೆಲಸ ನಿಂತುಹೋಗಿದೆ. ಅರ್ಕಾವತಿಗೆ stay ಆದ ತಕ್ಷಣ ಒಂದು ಪಕ್ಷ announce ಮಾಡುತ್ತದೆ 'ಅರ್ಕಾವತಿಗೆ stay ಆಗಿರುವುದು ಬಹಳ ಸಂತೋಷ ಎಂದು. ಇನ್ನೊಂದು ಪಾರ್ಟಿ ಹೇಳುತ್ತದೆ ಅರ್ಕಾವತಿ ಬಡಾವಣೆಯನ್ನು ಮಾಡಿಯೇ ಮಾಡುತ್ತೇವೆಂದು. International Airport ಬಗ್ಗೆ ಗೊಂದಲ ಇರಬಹುದು. Metro Railway Project ಬಗ್ಗೆ ಅಂತೂ ಗೊಂದಲ ಎದ್ದು

ಅದು ಮುಂದುವರಿದಿದೆ. ಹೀಗಾದರೆ Bangalore Development ಎಲ್ಲಿ ಆಗುತ್ತದೆ? ಇವತ್ತು ಮೆಟ್ರೋ ಯೋಜನೆಯನ್ನು ತರಬೇಕು. ಬಹಳ ವರ್ಷಗಳ ಪರಿಶ್ರಮದಿಂದ ನಮ್ಮ ದೇಶದಲ್ಲಿ, ಅದರಲ್ಲೂ ನಮ್ಮ ರಾಜ್ಯದಲ್ಲಿ ಬರುತ್ತಿದೆ. ಆದರೆ ಈ ಬಗ್ಗೆ ಸರ್ಕಾರದಲ್ಲಿ ಪಾಲ್ಗೊಂಡ ಪಕ್ಷಗಳಲ್ಲಿ ಹೊಂದಾಣಿಕೆ ಇಲ್ಲ. ಈಗ ನಮ್ಮ ಗೌಡ್ರು ಏನೋ ದಕ್ಷಿಣದಿಂದ ಉತ್ತರಕ್ಕೆ ತಪಸ್ಸಿಗೆ ಹೋಗಿದ್ದಾರೆ. ಯಾವ ಬ್ರಹ್ಮಾಸ್ತ್ರ ತರುತ್ತಾರೋ ಗೊತ್ತಿಲ್ಲ. ಯಾರ ಮೇಲೆ ಪ್ರಯೋಗ ಮಾಡುತ್ತಾರೋ ಗೊತ್ತಿಲ್ಲ. ಅದು ಬಂದಮೇಲೆ ಬೆಂಗಳೂರು ಸ್ಥಿತಿ ಇನ್ನೇನಾಗುತ್ತದೋ ಗೊತ್ತಿಲ್ಲ. ಆದ್ದರಿಂದ ನಾವು ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ಇವತ್ತು ಕರ್ನಾಟಕದ 20 ಪರ್ಸೆಂಟ್ ಜನ ವಾಸ ಮಾಡುವಂಥ ಬೆಂಗಳೂರು development ಬಹಳ ಮುಖ್ಯ. ಅದಕ್ಕೋಸ್ಕರ ಬೆಂಗಳೂರು ಬಗ್ಗೆ ವಿಶೇಷವಾದಂಥ ಗಮನ ಕೊಟ್ಟು ಇದರ ಬೆಳವಣಿಗೆಗೆ ಒಂದು ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಆಗ್ರಹ ಮಾಡುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ರೇಣುಕಾಚಾರ್ಯರವರು ಮಾತನಾಡಿ. ಹೊಸಬರು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಕೃಷ್ಣ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಹೊಸಬರಿಗೆ ಬೇರೆ ರೂಲ್ಸ್, ಹಳಬರಿಗೆ ಬೇರೆ ರೂಲ್ಸ್ ಇದೆಯೇ? ಇದ್ದರೆ ಅದು ಯಾವುದು ಸರ್?

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ. ಸಧ್ಯಕ್ಕೆ ಕುಳಿತುಕೊಂಡುಬಿಡಿ. ಆಮೇಲೆ ನೋಡೋಣ.

(ನಗು)

ಡಾ: ಕೆ. ಅನ್ನದಾನಿ: ತಾವು ನೋವು ತರುವಂಥ ವಿಚಾರ ಹೇಳಿಬಿಟ್ಟಿರಿ ಅದಕ್ಕೆ ಕೇಳುತ್ತಿದ್ದೇವಷ್ಟೆ.

ಅಧ್ಯಕ್ಷರು: ಮಾತನಾಡಲಿ. ಸಮಯ ಹೆಚ್ಚು ಇಲ್ಲ ಅದಕ್ಕೋಸ್ಕರ ಹೇಳಿದೆ ಅಷ್ಟೆ.

ಶ್ರೀ ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ): ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಇವತ್ತು ಕಂದಾಯ ಇಲಾಖೆ ತಾಲ್ಲೂಕಿನಲ್ಲಿ ಬಹಳ ಪ್ರಮುಖವಾದ ಇಲಾಖೆ ಮತ್ತು ಎಲ್ಲಾ ಇಲಾಖೆಗಳಿಗೂ ಮಾತೃ ಸ್ಥಾನದಲ್ಲಿ ಇರತಕ್ಕಂಥ ಇಲಾಖೆಯಾಗಿದೆ. ಜನರ ಜೊತೆ ನೇರವಾಗಿ ಸಂಪರ್ಕವನ್ನಿಟ್ಟುಕೊಂಡು ಜನರ ಕೆಲಸವನ್ನು ಮಾಡತಕ್ಕಂಥ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. ಕಾರಣ, ಬಡ ವಿದ್ಯಾರ್ಥಿಗಳು ವರಮಾನ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಕೇಳಲು ಹೋದರೆ ಕನಿಷ್ಠ ಹದಿನೈದು ದಿವಸ ಸಮಯ ಬೇಕು, ಸರ್ಕಾರದ ಆದೇಶ ಇದೆ ಎಂದು ತಹಶೀಲ್ದಾರರವರು ಹೇಳುತ್ತಾರೆ. ಆದರೆ ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಸೇರುವ ಸಂದರ್ಭ ಇರಬಹುದು ಹಾಗೂ ಕೆಲಸಕ್ಕೆ ಹೋಗತಕ್ಕಂಥ ಅನೇಕ ಜನ ಪರದಾಡುತ್ತಿದ್ದಾರೆ. ಇವತ್ತು ಸರ್ಕಾರ ಇಲ್ಲಿ ಕುಳಿತು ಕೇವಲ ಆದೇಶ ಹೊರಡಿಸಿ ಜನರ ನೋವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತತಕ್ಷಣ ವರಮಾನ ಪತ್ರ ಇರಬಹುದು, ಜಾತಿ ಪ್ರಮಾಣ ಪತ್ರ ಇರಬಹುದು, ಇವುಗಳನ್ನು ತುರ್ತಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಪಡಿತರ ಚೀಟಿ ಕಾರ್ಯಕ್ರಮ ಇರಬಹುದು, ಫಲ್ಸ್ ಪೋಲಿಯೋ ಕಾರ್ಯಕ್ರಮ ಇರಬಹುದು,

ಬೆಳೆವಿಮೆ ಯೋಜನೆ ಇರಬಹುದು, ಹೀಗೆ ಅನೇಕ ಯೋಜನೆಗಳಿಗೆ ಕಂದಾಯ ಇಲಾಖೆಯ ಸಹಕಾರದಿಂದ ಬೇರೆ ಇಲಾಖೆಯವರು ಅಳವಡಿಸಿಕೊಂಡಿದ್ದಾರೆ. ಇದರ ಜೊತೆಗೆ ಅತ್ಯಂತ ಸೂಕ್ಷ್ಮವಾಗಿ ಜವಾಬ್ದಾರಿಯುತ ಕೆಲಸವನ್ನು ಕಂದಾಯ ಇಲಾಖೆ ಮುಖಾಂತರ ಆಡಳಿತ ನಡೆಸುವುದರ ಜೊತೆಗೆ ಚುನಾವಣಾ ಸಂದರ್ಭದಲ್ಲಿ ಕೆಲಸವನ್ನು ಮಾಡತಕ್ಕಂಥ ಇಲಾಖೆಯಾಗಿದೆ. ಈ ಇಲಾಖೆಗೆ ಒಂದು ಸಾರಿ ನಾವು ಹೋದರೆ ಈ ಇಲಾಖೆಯಲ್ಲಿ ಸಾಕಷ್ಟು ನ್ಯೂನತೆಗಳು ಕಂಡುಬರುತ್ತವೆ. ಒಬ್ಬ ರೈತ ತನ್ನ ಜಮೀನುಗಳಿಗೆ ಮಳೆ ಬಿದ್ದ ಸಂದರ್ಭದಲ್ಲಿ ಇವತ್ತು ದಾಖಲೆಗಳನ್ನು ಪಡೆಯಬೇಕೆಂದರೆ ಅಲ್ಲಿ ಅಧಿಕಾರಿಗಳು ರೈತರ ಜೊತೆ ಸಂಯಮದಿಂದ ವರ್ತಿಸುವುದಿಲ್ಲ. ಯಾವುದೇ Village Accountant ಇರಬಹುದು, Revenue Inspector ಇರಬಹುದು, ಬಹಳ ಪ್ರಮುಖವಾದ ಸಂದರ್ಭಗಳಲ್ಲಿ ಎಲ್ಲೋ ಕುಳಿತು ಕಚೇರಿಗೆ ಬರದೆ ತಮ್ಮ ವಹಿವಾಟನ್ನು ನಡೆಸುತ್ತಿದ್ದಾರೆ. ಇಂಥ ಇಲಾಖೆಗೆ ಸರ್ಕಾರ ಮೊಟ್ಟಮೊದಲು ಕಾಯಕಲ್ಪವನ್ನು ಕೊಟ್ಟು ಈ ಇಲಾಖೆ ಅತ್ಯಂತ ಪ್ರಾಮಾಣಿಕವಾಗಿ ಕೆಲಸವನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ವಹಿಸಬೇಕಾಗಿದೆ. ಬಹುಶಃ ಬ್ರಿಟಿಷರು ಈ ಹಿಂದೆ ನಮ್ಮನ್ನು ಆಳುವ ಸಂದರ್ಭದಲ್ಲಿ ತಾಲ್ಲೂಕು ಕಛೇರಿಯ ಕಟ್ಟಡಗಳನ್ನು ಕಟ್ಟಿ ಬಹಳ ವ್ಯವಸ್ಥಿತವಾಗಿ ಬಂದೋಬಸ್ತ್ ಮಾಡಿದ್ದರು. ತಹಸೀಲ್ದಾರ್ ಕುರ್ಚಿ ಇರಬಹುದು, ಟೇಬಲ್ ಇರಬಹುದು, ಇತರೆ ನೌಕರರು ಕೂರತಕ್ಕಂಥ ಛೇರ್‌ಗಳಿರಬಹುದು. ಇವತ್ತು ನಾವು ಹೋದರೆ, ಒಂದು ರೀತಿ ಮುರುಕಲು ಹಾಗೆ ಕಾಣುತ್ತದೆ. ಇತ್ತೀಚೆಗೆ ಸರ್ಕಾರ ಮಿನಿ ವಿಧಾನಸೌಧವನ್ನು ಅನೇಕ ತಾಲ್ಲೂಕುಗಳಲ್ಲಿ ಕಟ್ಟಿಸಿದೆ. ಬಹುಶಃ ನಾವು ಆ ಕಟ್ಟಡದೊಳಗೆ ಹೋದರೆ ಕೇವಲ 2–3 ವರ್ಷಗಳಲ್ಲಿ ಕಟ್ಟಿರುವ ಕಟ್ಟಡಗಳು ಇವತ್ತು ಸೋರುತ್ತಿವೆ. ಗುತ್ತಿಗೆದಾರರು ಆ ಕೆಲಸವನ್ನು ಸಂಪೂರ್ಣ ಕಳಪೆ ಮಾಡಿ ಯಾವ ಸಂದರ್ಭದಲ್ಲಿ ಯಾವಾಗ ಬೀಳುತ್ತದೆಂದು ಅರ್ಥವೇ ಆಗುವುದಿಲ್ಲ. ಈ ಒಂದು ವ್ಯವಸ್ಥೆಗೆ ಸರ್ಕಾರ ಕಾರಣವೆಂದರೆ ತಪ್ಪಾಗಲಾರದು. ಏಕೆಂದರೆ, ಇವತ್ತು ಯಾವುದೇ ಒಂದು ಕಾಮಗಾರಿಗೆ ಒಂದು ಟೆಂಡರ್ ಕರೆಯುವಾಗ ಎಸ್.ಆರ್. ರೇಟ್‌ನಲ್ಲಿ ಕರೆಯುತ್ತಾರೆ. ನಾವೇ ನೇರವಾಗಿ ಕಟ್ಟಿದರೆ 60 ಸಾವಿರ ರೂಪಾಯಿನಲ್ಲಿ ಆ ಕಟ್ಟಡ ವ್ಯವಸ್ಥಿತವಾಗುತ್ತದೆ. ಆದರೆ, ಸರ್ಕಾರ ಟೆಂಡರ್ ಕರೆಯುವಾಗ ಸುಮಾರು 40–50 ಪರ್ಸೆಂಟ್ ಹೆಚ್ಚು ಇಟ್ಟು ಟೆಂಡರ್ ಕರೆಯುತ್ತಾರೆ. ಆ ಟೆಂಡರ್ ಕರೆದಾಗ, ಯಾವ ಗುತ್ತಿಗೆಯವರಿಗೆ ಕೆಲಸವಾಗಿರುತ್ತದೆ, ಆತ ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಒಂದು ಕೆಲಸ ಅಪ್ರೂವಲ್ ಮಾಡಬೇಕೆಂದರೆ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಮಾಡಬೇಕೆಂದರೆ, ಮೊಟ್ಟಮೊದಲು ಒಂದು ರೀತಿ ಕಪ್ಪ–ಕಾಣಿಕೆ ಕೊಟ್ಟರೆ ಅಪ್ರೂವಲ್ ಆಗುತ್ತದೆ. ಬಹುಶಃ ಯಾವುದೇ ಇಲಾಖೆಗೆ ಹೋದರೂ ಇವತ್ತು 100ಕ್ಕೆ 50ರಷ್ಟು ಭ್ರಷ್ಟಾಚಾರವಿದೆ. 1 ಲಕ್ಷ, 2 ಲಕ್ಷ ರೂಪಾಯಿಗಳಲ್ಲಿ....

ಅಧ್ಯಕ್ಷರು: ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಕೇವಲ 40 ಸಾವಿರ ರೂ.ಗಳ ಕೆಲಸ ಮಾತ್ರ ಆಗುತ್ತದೆ. ಇದರ ಜೊತೆಗೆ, ಗುತ್ತಿಗೆದಾರನಿಗೆ 20 ಪರ್ಸೆಂಟ್ ಉಳಿತಾಯವಾಗುತ್ತದೆ. ಇದರ ಜೊತೆಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಈ ರೀತಿ ವ್ಯವಸ್ಥೆಯಾದರೆ ಇವತ್ತು ಯಾವುದೇ ಕಾಮಗಾರಿಗಳನ್ನು ಮಾಡಿದರೆ ಸಂಪೂರ್ಣ ಲೋಪದೋಷವಾಗಿರುತ್ತದೆ. ಇದರಲ್ಲಿ ಪಾರದರ್ಶಕತೆ ತರಬೇಕು. ಯಾವ ಮಟ್ಟದಲ್ಲಿ ಭ್ರಷ್ಟಾಚಾರ ಇರುತ್ತದೋ, ಅದನ್ನು ತಡೆಯುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ತಮ್ಮ ಮುಖಾಂತರ ನಾನು ಒತ್ತಡವನ್ನು ತರುತ್ತಿದ್ದೇನೆ. ಇವತ್ತು ತಾಲ್ಲೂಕು

ಮಟ್ಟದಲ್ಲಿ ಬಹುಶಃ ಅಲ್ಲೇನಾದರೂ ಗಲಭೆ ಆದರೆ, ತಹಶೀಲ್ದಾರ್‌ರವರು ಇಡೀ ತಾಲ್ಲೂಕನು ನಿಯಂತ್ರಿಸುತ್ತಾರೆ. ಇವತ್ತು ತಾಲ್ಲೂಕು ಮಟ್ಟದಲ್ಲಿ ಎಗ್ಸಿಕ್ಯೂಟೀವ್ ಆಫೀಸರ್ ಅವರು ಎ.ಸಿ. ಕೇಡರ್‌ನವರು ಈ ತಹಶೀಲ್ದಾರ್‌ಗೂ ಮತ್ತು ಇ.ಓ.ರವರಿಗೂ ಸಾಕಷ್ಟು ಸಂಘರ್ಷಗಳು ನಡೆಯುತ್ತಿರುತ್ತವೆ. ಇವತ್ತು ತಹಶೀಲ್ದಾರ್ ಹುದ್ದೆಯನ್ನು ಎ.ಸಿ. ಕೇಡರ್‌ಗೆ ಏರಿಸಿ, ಜಿಲ್ಲಾ ಮಟ್ಟದಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ರದ್ದುಪಡಿಸಿ ತಹಶೀಲ್ದಾರ್‌ಗೆ ಹೆಚ್ಚು ಅಧಿಕಾರವನ್ನು ಕೊಡಬೇಕು. ಏಕೆಂದರೆ, ಇತ್ತೀಚೆಗೆ ಜೆ.ಹೆಚ್. ಪಟೇಲ್‌ರವರ ಸರ್ಕಾರದಲ್ಲಿ ಹೊಸ ಜಿಲ್ಲೆಗಳು ರಚನೆಯಾದಾಗ ಪ್ರತಿ ಜಿಲ್ಲೆಯಲ್ಲಿ ತಾಲ್ಲೂಕುಗಳು ಕಡಿಮೆಯಾಗಿವೆ. ಜಿಲ್ಲಾಧಿಕಾರಿಗಳ ಮುಖಾಂತರ ನೇರವಾಗಿ ತಹಶೀಲ್ದಾರ್‌ಗೆ ಸಂಬಂಧ ಇಟ್ಟುಕೊಂಡು ಆಡಳಿತವನ್ನು ಸುಧಾರಿಸುವುದಕ್ಕೆ ಸರ್ಕಾರ ಮುಂದಾಗಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ, ಹಳದಿ ಕಾರ್ಡ್.

ಅಧ್ಯಕ್ಷರು: ನಿಲ್ಲಿಸಿ.

ಶ್ರೀ ಎಂ.ಪಿ. ರೇಣುಕಾಚಾರ್ಯ: 2 ನಿಮಿಷ ಸಾರ್. 2002ರಿಂದ ಇಡೀ ರಾಜ್ಯದಲ್ಲಿ ಇವತ್ತು ಹಳದಿ ಕಾರ್ಡ್ ಸಲುವಾಗಿ ಸುಮಾರು ಹತ್ತಾರು ಬಾರಿ ಸರ್ವೆ ಮಾಡಿದೆ. ಯಾವ ಕಡುಬಡವ, ಬಡತನ ರೇಖೆಗಿಂತ ಕೆಳಗೆ ಇದ್ದಾನೆ, ಅಂಥವರಿಗೆ ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ಅಕ್ಕಿ, ಗೋಧಿ ಕೊಡಬೇಕೆಂದು ಈ ಹಿಂದೆ ನಮ್ಮ ದೇಶದ ಅತ್ಯಂತ ನಮ್ಮ ನೆಚ್ಚಿನ, ಶ್ರೇಷ್ಠ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ ಕಾಲದಲ್ಲಿ ಕಡುಬಡವರಿಗೆ ಹಳದಿ ಕಾರ್ಡ್‌ನ ವ್ಯವಸ್ಥೆ ಜಾರಿಗೆ ತಂದರು. ರಾಜ್ಯ ಸರ್ಕಾರ, ಅಂದಿನ ಸರ್ಕಾರ ಈ ಸರ್ವೆ ಕಾರ್ಯವನ್ನು ಸಂಪೂರ್ಣ ಮುಗಿಸಲೇ ಇಲ್ಲ. ಕಾರಣ, ಈ ರಾಜ್ಯದಲ್ಲೇನಾದರೂ ಕಡುಬಡವರಿಗೆ ಹಳದಿ ಕಾರ್ಡ್ ವ್ಯವಸ್ಥಿತವಾದ ಕೊಟ್ಟರೆ, ಬಹುಶಃ ಕೇಂದ್ರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಂದು ತಿಳಿದು ಗೊಂದಲದಲ್ಲಿ ಮುಳುಗಿಸಿಬಿಟ್ಟರು. ಇವತ್ತು, ಸಾಕಷ್ಟು ಜನ ನೌಕರರೇತರಿಗೆ, ತೋಟ ಇದ್ದವರಿಗೆ, ಜಮೀನು ಇದ್ದವರಿಗೆ ಹಳದಿ ಕಾರ್ಡ್ ಕೊಡತಕ್ಕಂಥ ವ್ಯವಸ್ಥೆಯಾಯಿತು. ಈ ಹಳದಿ ಕಾರ್ಡ್ ಎಲ್ಲಾ ಕೇವಲ ಅಕ್ಕಿಗೋಸ್ಕರ ಅಲ್ಲ, ಇವತ್ತು ಯಾವ ಬಡ ವಿದ್ಯಾರ್ಥಿಗಳಿರಬಹುದು, ಆತ ತನ್ನ ವಿದ್ಯಾಭ್ಯಾಸಕ್ಕೋಸ್ಕರ . . .

ಅಧ್ಯಕ್ಷರು: ನಿಲ್ಲಿಸಿ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಸಾರ್, 2 ನಿಮಿಷ.

ಅಧ್ಯಕ್ಷರು: ನಿಲ್ಲಿಸಿ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಸಾರ್, ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದೇ ಮೊದಲು ಸಾರಿ. ಅಟ್‌ಲೀಸ್ಟ್ ಒಂದೆರಡು ನಿಮಿಷ. ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಎಷ್ಟು?

ಶ್ರೀ ಎಂ.ಪಿ. ರೇಣುಕಾಚಾರ್ಯ: ಈ ಹಳದಿ ಕಾರ್ಡ್ ವ್ಯವಸ್ಥೆ ಕೇವಲ ಗೊಂದಲದಲ್ಲಿ ಮುಳುಗಬಾರದು. ತತಕ್ಷಣ . . .

ಅಧ್ಯಕ್ಷರು: ದಯಮಾಡಿ ಮುಗಿಸಿ . . . ಎಷ್ಟು ಹೊತ್ತು? ಇನ್ನೂ ಮಾತನಾಡುವವರಿದ್ದಾರೆ. 4 ಗಂಟೆಯೊಳಗೆ ಮುಗಿಸಬೇಕು. ಇನ್ನೊಂದಿಬ್ಬರು ಮಾತನಾಡಲಿ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಇವತ್ತು ಜನರು ಶಾಸಕರ ಹತ್ತಿರ ಬರುತ್ತಾರೆ. ಇವತ್ತೇನು ಗ್ರಾಮ ಸಭೆ ಮಾಡಿ, ಗ್ರಾಮ ಸಭೆಯಲ್ಲಿ ಹಳದಿ ಕಾರ್ಡ್ ಅನ್ನು ಆಯ್ಕೆ ಮಾಡಿದ್ದಾರೆ. ಆ ಹಳದಿ ಕಾರ್ಡ್‌ನಲ್ಲಿ ಸಾಕಷ್ಟು ಗೊಂದಲವಾಗಿದೆ. ಸರ್ಕಾರದ ನಿಬಂಧನೆ ಇದೆ. 60 ಪರ್ಸೆಂಟ್ [illegible] ಎಂದು ಇದೆ. ಹಳ್ಳಿಗಳಲ್ಲಿ ಸಾಕಷ್ಟು ಕೂಲಿ [illegible]

ತಾಲ್ಲೂಕಿನಲ್ಲಿ ಎಷ್ಟು ಜನ ಕಡುಬಡವರಿದ್ದಾರೆ, ಅವರನ್ನು ಕೂರಿಸಿ, ಅಂಥವರಿಗೆ ಹಳದಿ ಕಾರ್ಡ್ ಅನ್ನು ಒದಗಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಂಡು, ಈ ಸಂದರ್ಭದಲ್ಲಿ ನನಗೆ ಬೇಡಿಕೆ ಮೇಲಿನ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* **ಶ್ರೀ ಲಾಲಾಜಿ ಆರ್. ಮೆಂಡನ್(ಕಾಪು)**: ಸನ್ಮಾನ್ಯ ಸಭಾಧ್ಯಕ್ಷರೆ, ...

ಅಧ್ಯಕ್ಷರು: 5 ನಿಮಿಷದಲ್ಲಿ ಮುಗಿಸಬೇಕು. ಇನ್ನೂ, ಇಬ್ಬರು, ಮೂವರು ಮಾತನಾಡುವವರಿದ್ದಾರೆ. 4 ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರ ನೀಡಬೇಕು.

ಶ್ರೀ ಲಾಲಾಜಿ ಆರ್. ಮೆಂಡನ್: ತಮಗೆಲ್ಲರಿಗೂ ವಂದಿಸುತ್ತಾ, ನಮ್ಮ ಕಾಪು ಕ್ಷೇತ್ರದ ಮತ್ತು ಉಡುಪಿ ತಾಲ್ಲೂಕಿನ ಕಂದಾಯ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ನಮ್ಮ ಕಾಪು ಕ್ಷೇತ್ರ, ಉಡುಪಿ ತಾಲ್ಲೂಕಿನಲ್ಲಿರುವುದರಿಂದಾಗಿ ಮುಖ್ಯವಾಗಿ ನಮಗೆ ಆರ್‌ಟಿಸಿಯ ಸಮಸ್ಯೆ ಇದೆ. ಅಲ್ಲಿ ಕಂಪ್ಯೂಟರ್ ಆರ್‌ಟಿಸಿ ವಿತರಣೆಯಲ್ಲಿ ತುಂಬಾ ವಿಳಂಬವಾಗುತ್ತಿದೆ. ಈಗಾಗಲೇ 2 ಲಕ್ಷದ 40 ಸಾವಿರ ಖಾತೆದಾರರಿದ್ದು, ಕಾಪು ಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಒಂದು ಹೋಬಳಿ ಕೇಂದ್ರದಲ್ಲಿ ಆರ್‌ಟಿಸಿ ಕೇಂದ್ರವನ್ನು ಖಾಸಗಿ ಅಥವಾ ಸರ್ಕಾರದ ವತಿಯಿಂದ ಮಾಡಿಕೊಡಬೇಕಾಗಿ ನಾವು ಬೇಡಿಕೆ ಇಟ್ಟಿದ್ದೇವೆ. ಈಗಾಗಲೇ ಇದನ್ನು ನಾನು ಪ್ರಶ್ನೆ ರೂಪದಲ್ಲಿ ಕೇಳಿದ್ದೇವೆ. ಅದೇ ರೀತಿ, ಇನ್ನೊಂದು ಸಮಸ್ಯೆ ನಮ್ಮ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತಿದೆ. ನಮ್ಮ ಶಿರ್ವಾದಲ್ಲಿ ಸಮುದಾಯ ಆಸ್ಪತ್ರೆ ಇದೆ, ಅದು 30 ಬೆಡ್‌ಗಳ ಆಸ್ಪತ್ರೆ. ಆದರೆ, ಅದು ಇಷ್ಟರವರೆಗೆ ಕಾರ್ಯಗತ ಆಗಿಲ್ಲ. ಕಳೆದ ಒಂದೂವರೆ ವರ್ಷದ ಮೊದಲು ಅದು ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಆ ಕಟ್ಟಡ ಆಗಿರುತ್ತದೆ. ಸುಮಾರು 30 ಬೆಡ್ ಇದ್ದರೂ ಕೂಡ ಅದು ಉಪಯೋಗವಾಗದ ರೀತಿಯಲ್ಲಿದೆ. ಏಕೆಂದರೆ, ಈಗಾಗಲೇ 4 ಜನ ವೈದ್ಯರು ಇರಬೇಕಾದಲ್ಲಿ, ಕೇವಲ ಒಬ್ಬ ವೈದ್ಯರಿದ್ದಾರೆ. ಅದೇ ರೀತಿ, ಸಿಬ್ಬಂದಿಗಳ ಕೊರತೆ ಇದೆ. ಆ ಸಮುದಾಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ಪರಿಣಾಮವಾಗಿ ಅದನ್ನು ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಿಕೊಡಬೇಕಾಗಿ ಸಂಬಂಧಪಟ್ಟ ಮಂತ್ರಿಯವರಿಗೂ ಕೂಡ ವಿನಂತಿಸುತ್ತೇವೆ. ಅದೇ ರೀತಿಯಲ್ಲಿ ನಮ್ಮ ಕಡಲು ಕೊರತದ ಬಗ್ಗೆ, ಮೀನುಗಾರಿಕೆ ಇಲಾಖೆ ಬಗ್ಗೆ ಸ್ವಲ್ಪ ಮಾತನಾಡಲಿಕ್ಕೆ ಬಯಸುತ್ತೇನೆ. ಏಕೆಂದರೆ, ಈಗಾಗಲೇ ನಮ್ಮ ಮಿತ್ರರು, ನಮ್ಮ ಸಹ ಸದಸ್ಯರು ಇದರ ಬಗ್ಗೆ ಉಲ್ಲೇಖಿಸಿದ್ದಾರೆ. ಕರಾವಳಿಯಲ್ಲಿ ನಿರಂತರವಾಗಿ ಕಡಲು ಕೊರೆತ ಇರುತ್ತದೆ. ಈಗಾಗಲೇ ಅಲ್ಲಿ ಕಳೆದ 4–5 ವರ್ಷದ ಮುಂಚೆ ಕಲ್ಲಾದರೂ ಹಾಕುತ್ತಿದ್ದರು. ಆದರೆ, ಈಗ ತಾತ್ಕಾಲಿಕವಾಗಿ ಹೊೖಗೆಯ(ಮರಳು) ಗೋಣಿ ಚೀಲವನ್ನು ಹಾಕುತ್ತಿದ್ದಾರೆ. ಅದು ನಮಗೆ ಯಾವುದೇ ರೀತಿಯಾದ ಭದ್ರತೆ ಅಲ್ಲ. ಕರ್ನಾಟಕದ ಕರಾವಳಿ ಸುಮಾರು 300 ಕಿಲೋಮೀಟರ್ ವ್ಯಾಪ್ತಿಯಲ್ಲಿ ನಮ್ಮ ಕರಾವಳಿ ಇದೆ. ಹೆಚ್ಚಿನ ಕ್ಷೇತ್ರಗಳಲ್ಲಿ ಕಡಲ ಕೊರೆತ ಇದೆ. ನಮ್ಮ ಕಾಪು ಕ್ಷೇತ್ರದ ಮಟ್ಟು, ಕೈ ಪುಂಜಾಲು ಪೊಲಿಪು, ಮೂಳೂರು, ಹೆಜಮಾಡಿ, ಪಡುಬಿದ್ರಿ, ತೆಂಕ ಎರ್ಮಾಳು ಉಚ್ಚಿಲ ಇತ್ಯಾದಿ ಭಾಗಗಳಲ್ಲಿ ತೀವ್ರವಾದ ಕಡಲ ಕೊರೆತ ಇದೆ. ಕಳೆದ 1 ತಿಂಗಳ ಮುಂಚೆ ನಮ್ಮ ಸನ್ಮಾನ್ಯ ಉಸ್ತುವಾರಿ ಮಂತ್ರಿಗಳಾದ ಶ್ರೀಯುತ ಡಿ.ಟಿ. ಜಯಕುಮಾರ್ ಹಾಗೂ

---

* ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.

ನಮ್ಮ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ನಮ್ಮೊಂದಿಗೆ ಸಮುದ್ರ ಕೊರೆತ ವೀಕ್ಷಣೆ ಮಾಡಿದ್ದಾರೆ. ಅದು ಬಹಳ ಜ್ವಲಂತ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಅದಕ್ಕೂ ಕೂಡ ಶಾಶ್ವತವಾದ ತಡೆಗೋಡೆಯನ್ನು ಹಾಕಬೇಕಾಗಿ ಈ ಸದನದ ಸಭಾಧ್ಯಕ್ಷರ ಮೂಲಕ ವಿನಂತಿ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ, ಇನ್ನೊಂದು ಸಮಸ್ಯೆ ಇದೆ. ಅಲ್ಲಿ ಸೀಆರ್‌ಝೆಡ್ ಝೋನ್ ಎಂದು ಇದೆ. ಕರಾವಳಿ ನಿಯಂತ್ರಣ ವಲಯ. ಇದು ಹಿಂದೆ 200 ಮೀಟರ್‌ಗೆ ಇತ್ತು. ಕ್ರಮೇಣ ಅದನ್ನು 500 ಮೀಟರ್‌ಗೆ ವಿಸ್ತರಿಸಿದ್ದಾರೆ. ಈ ಸಮಸ್ಯೆಯಿಂದಾಗಿ ನಮಗೆ ಕರಾವಳಿಯಲ್ಲಿ ಮನೆ ಕಟ್ಟುವವರಿಗೆ ಬಹಳ ಕಷ್ಟ ಆಗುತ್ತಿದೆ. ಏಕೆಂದರೆ, ನಮಗೆ ಜಾಗ ಪರಿವರ್ತನೆಯಾಗುವುದಿಲ್ಲ. ಬ್ಯಾಂಕ್ ಸೌಲಭ್ಯ ಸಿಕ್ಕುವುದಿಲ್ಲ. ಅದೇ ರೀತಿಯಲ್ಲಿ ಜಾಗ 500 ಮೀಟರ್‌ನೊಳಗೆ ಕನ್‌ವರ್ಷನ್ ಮಾಡದಿರುವುದರಿಂದಾಗಿ ಮನೆ ಕಟ್ಟಲಿಕ್ಕೆ ಪಂಚಾಯಿತಿ ಲೈಸನ್ಸ್‌ಗೆ ಕೂಡ ತೊಂದರೆಯಾಗಿದೆ. ಇದಕ್ಕಾಗಿ 500 ಮೀಟರ್‌ನಿಂದ, ಅದನ್ನು 200 ಮೀಟರ್‌ಗೆ ಇಳಿಸಬೇಕಾಗಿ ನಮ್ಮ ಸದನದ ಮೂಲಕ ವಿನಂತಿಸುತ್ತಾ, ಅದಕ್ಕೆ ಕೇಂದ್ರ ಸರ್ಕಾರ ಆದೇಶ ಕೊಡಬೇಕಾಗುತ್ತದೆ. ಅದಕ್ಕಾಗಿ ಸಂಬಂಧಪಟ್ಟವರನ್ನು ಸಂಪರ್ಕಿಸಿ, ಅದನ್ನೂ ಕೂಡ ಕರಾವಳಿಯವರಿಗೆ ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಸಮಸ್ಯೆ ಎಂದರೆ, ನಮ್ಮ ಗ್ರಾಮೀಣಾಭಿವೃದ್ಧಿಯಲ್ಲಿ ನಮ್ಮ ರಸ್ತೆಗಳ ಬಗ್ಗೆ ಕೂಡ ಹಲವಾರು ಸಮಸ್ಯೆಗಳಿವೆ. ಈಗಾಗಲೇ ಒಂದು ಹೊಸ ಯೋಜನೆ ಎಂದು ನಮ್ಮ ಕುಗ್ರಾಮ ಸುವರ್ಣ ಗ್ರಾಮ ಎನ್ನುವ ಯೋಜನೆಯಿಂದ ಎಲ್ಲಾ ಕ್ಷೇತ್ರಗಳಿಗೂ ಸುಮಾರು ರೂಪಾಯಿಗಳಷ್ಟು ಗ್ರಾಮೀಣಾಭಿವೃದ್ಧಿಯ ಯೋಜನೆಯನ್ನು ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ಕಾರ್ಯಗತ ಮಾಡಲಿಕ್ಕೆ ಉತ್ಸುಕರಾಗಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ. ಹಾಗೂ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದು ಇನ್ನಷ್ಟು ಸ್ವಲ್ಪ ಜಾಸ್ತಿ ಮೊತ್ತ ಕೊಟ್ಟರೆ, ಹೆಚ್ಚಿನ ಅಭಿವೃದ್ಧಿಯಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಂಡಿದ್ದೇವೆ. ಕರಾವಳಿಯಲ್ಲಿ ಇನ್ನೊಂದು ಸಮಸ್ಯೆ ಇದೆ. ಈಗಾಗಲೇ ನಮಗೆ ಬ್ಯಾಂಕಿಂಗ್ ಸೌಲಭ್ಯದಲ್ಲಿ ಕೃಷಿಕರಿಗೆ ನೀಡುವಷ್ಟೇ ಸೌಲಭ್ಯವನ್ನು ಅಂದರೆ 6 ಪರ್ಸೆಂಟ್‌ನಲ್ಲಿ ಬ್ಯಾಂಕ್ ಸಾಲ ಸೌಲಭ್ಯವನ್ನು ಕೊಡಬೇಕು. ಅದೇ ರೀತಿ, ಆಶ್ರಯ ಯೋಜನೆಯಲ್ಲಿ, ಮತ್ಸ್ಯಾಲಯ ಯೋಜನೆಯಲ್ಲಿ ನಮಗೆ ಮನೆ ನಿವೇಶನ ಸಿಕ್ಕುತ್ತಿತ್ತು. ಇದು ಕೇಂದ್ರ ಪುರಸ್ಕೃತ ಯೋಜನೆ. ಇದರಲ್ಲಿ ಸುಮಾರು 40 ಸಾವಿರ ರೂ.ಯಷ್ಟು ಹಣ ಬರುವಂಥ ವ್ಯವಸ್ಥೆ ಇತ್ತು. ಆದರೆ ನಮ್ಮ ರಾಜ್ಯ ಸರ್ಕಾರದವರು ಬೇರೆ ಯೋಜನೆಗಳಿಗೆ ಇಂದಿರಾ ಆವಾಸ್, ಅಂಬೇಡ್ಕರ್ ಆಶ್ರಯ ಈ ಯೋಜನೆಗಳಿಗೆ ಸರಿದೂಗಿಸಿರುವ ದೃಷ್ಟಿಯಿಂದ ಬರೀ 30 ಸಾವಿರ ರೂ.ಗಳನ್ನು ಮಾತ್ರ ಕೊಡುತ್ತಿದ್ದಾರೆ. ವಸ್ತುಸ್ಥಿತಿಯಲ್ಲಿ ಅದು 40 ಸಾವಿರ ರೂ.ಗಳ ಯೋಜನೆ. ಆದುದರಿಂದ, ಆ 40 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಾನು ಆಗ್ರಹಪಡಿಸುತ್ತಿದ್ದೇನೆ. ಅದೇ ರೀತಿಯಲ್ಲಿ ನಮ್ಮ ಭಾಗದಲ್ಲಿ ಹೆಚ್ಚಿನ ಕಡೆ ನೀರಿನ ಸಮಸ್ಯೆಯಿದೆ. ಕೆಲವು ಕಡೆ ಟಾಸ್ಕ್ ಫೋರ್ಸ್‌ನಲ್ಲಿ ಕುಡಿಯುವ ನೀರಿನ ಯೋಜನೆ ಹಾಕಿದ್ದಾರೆ, ಆದರೆ ನೀರಿನ ಸಮಸ್ಯೆ ಜಾಸ್ತಿ ಇರುವುದರಿಂದ ಇನ್ನಷ್ಟು ಯೋಜನೆಗಳನ್ನು ಹಾಗೂ ಸ್ವಲ್ಪ ಜಾಸ್ತಿ ಮೊತ್ತವನ್ನು ಕೊಡಬೇಕಾಗಿ ಸಂಬಂಧಪಟ್ಟ ಮಂತ್ರಿಗಳಲ್ಲಿ ಆಗ್ರಹ ಮಾಡುತ್ತಿದ್ದೇನೆ. ಇತರೆ ಕೆಲವು ಸಣ್ಣ ನೀರಾವರಿ ಇಲಾಖೆಯ ಯೋಜನೆಯ ಅಭಿವೃದ್ಧಿಯಲ್ಲಿ ಕೂಡ ಹಿಂದೆ ಬಿದ್ದಿದೆ. ಕೆಲವು ಕಡೆ ಹಲಗೆ ಇಟ್ಟವರಿಗೂ ಕೂಡ ಹಣ ಪಾವತಿ ಮಾಡಲಿಕ್ಕೆ ಹಣವಿಲ್ಲವೆಂದು ಇಲಾಖೆಯಲ್ಲಿ ಹೇಳುತ್ತಾರೆ. ಇದಲ್ಲದೇ ಕೆಲವು ಕಡೆ ನದಿಯ ಕೊರತೆದಿಂದಾಗಿ

ತುಂಬಾ ಕಡೆ ಗದ್ದೆ ಕೂಡ ಕೊಚ್ಚಿಕೊಂಡು ಹೋಗುವಂಥ ಸ್ಥಿತಿ ಇದೆ. ಆ ನದಿ ಕೊರೆತಕ್ಕೂ ಕೂಡ ಕಲ್ಲುಬಂಡೆ ಹಾಕಬೇಕಾಗಿದೆ. ಜೊತೆಗೆ ನಮ್ಮ ಕರಾವಳಿಯಲ್ಲಿ ಮೀನುಗಾರಿಕೆ ಬಂದರು ಅಭಿವೃದ್ಧಿ ಆಗಬೇಕಾಗಿದೆ. ಏಕೆಂದರೆ, ಉಡುಪಿ, ಮಲ್ಪೆ ಮತ್ತು ಮಂಗಳೂರು ಮಧ್ಯೆ ನಮ್ಮ ಕಾಪು ಕ್ಷೇತ್ರ ಅಲ್ಲಿ ಹೆಜಮಾಡಿಯಲ್ಲಿ ಒಂದು ಬಂದರು ಸುಮಾರು ಒಂದೊವರೆ ಕೋಟಿ ರೂ.ಯಷ್ಟು ಖರ್ಚು ಮಾಡಿ ಯಾವುದೇ ಬೋಟ್ ಒಳಗಡೆ ಬಾರದ ರೀತಿಯಲ್ಲಿ ಉದ್ಘಾಟನೆಯಾಗಿದೆ, ಆದರೆ ಬೋಟ್ ಒಳಗಡೆ ಬರುತ್ತಿಲ್ಲ. ಅದಕ್ಕೆ ಇನ್ನೊಂದು 5–6 ಕೋಟಿ ರೂಪಾಯಿಯಾದರೂ ಜಾಸ್ತಿ ಖರ್ಚು ಮಾಡಿ ಡ್ರೆಜ್ಜಿಂಗ್ ಮತ್ತು ಬ್ರೇಕ್‌ವಾಟರ್ ಮಾಡಿದರೆ ಅದು ಸರ್ವಋತು ಬಂದರು ಆಗಿ ಮಾಡುವಂಥ ಅವಕಾಶವಿದೆ. ಆ ದೃಷ್ಟಿಯಿಂದ ಕೂಡ ವಿಶೇಷ ಗಮನ ಕೊಡಬೇಕಾಗಿ ಸಂಬಂಧಪಟ್ಟ ಮೀನುಗಾರಿಕೆ ಇಲಾಖೆಯ ಜವಾಬ್ದಾರಿ ನೋಡಿಕೊಂಡಿರುವ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಲ್ಲಿ ಆಗ್ರಹ ಮಾಡುತ್ತಾ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ): ಮಾನ್ಯ ಅಧ್ಯಕ್ಷರೆ, ಬೇಡಿಕೆಯ ಮೇಲೆ ಮಾತನಾಡಲು ಸಮಯವನ್ನು ಒದಗಿಸಿಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಯನ್ನು ಹೇಳುತ್ತಾ, ಮೊದಲನೆಯದಾಗಿ, ಕಂದಾಯ ಇಲಾಖೆಯ ಬಗ್ಗೆ ಸಾಕಷ್ಟು ಹಿರಿಯ ಸದಸ್ಯರು ಮತ್ತು ಗೌರವಾನ್ವಿತ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಆದರೆ, ಕಂದಾಯ ಇಲಾಖೆಯ ಬಗ್ಗೆ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ, 1848ರಿಂದ 1950ನೇ ಇಸ್ವಿ ಒಳಗಾಗಿ ಆಗಿನ ಬ್ರಿಟಿಷ್ ಕಾಲದಲ್ಲಿ ಸರ್ವೆ ಆಗಿತ್ತು. ಆ ಸರ್ವೆಯ ಆಧಾರದ ಮೇಲೆ ಇವತ್ತು ಗ್ರಾಮ ನಕಾಶೆಗಳು ಇವೆ. ಆ ಗ್ರಾಮ ನಕಾಶೆಗಳನ್ನು ಆಧಾರವಾಗಿಟ್ಟುಕೊಂಡು ಇವತ್ತಿನವರೆಗೂ ಕೂಡ ಪ್ರತಿಯೊಂದು ರೈತರಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನತಕ್ಕಂಥದ್ದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ರಸ್ತೆಗೆ ಏನು ಒಂದು ಸರ್ವೆ ನಂಬರ್ ಇರುತ್ತದೋ ಆ ಸರ್ವೆ ನಂಬರ್ ಹತ್ತಿರತಕ್ಕಂಥ ರೈತನಿಗೆ ಮಾತ್ರ ಅದರ ಅನುಕೂಲವಿರುತ್ತದೆ. ಅದರ ಹಿಂದೆ ಇರುವ ರೈತನ ಸರ್ವೆ ನಂಬರ್‌ಗಳಿಗೆ ಅವನ ಹೊಲಗಳಿಗೆ ಹೋಗಲಿಕ್ಕೆ ಬಹಳಷ್ಟು ತೊಂದರೆಯಿದೆ. ಆ ತೊಂದರೆ ನಿವಾರಣೆ ಆಗಬೇಕಾದರೆ ಇವತ್ತಿನ ದಿವಸ ಪುನಃ ರಾಜ್ಯದಲ್ಲಿ ಒಂದು ಭೂ ಸರ್ವೆ ಆಗಬೇಕಾಗುತ್ತದೆ. ಆ ಒಂದು ಭೂ ಸರ್ವೆ ಮಾಡಿ ಪ್ರತಿಯೊಂದು ಸರ್ವೆ ನಂಬರ್‌ಗಳಿಗೆ ದಾರಿ ಕೊಡುವುದು ಸರ್ಕಾರದ ಕರ್ತವ್ಯ. ಇವತ್ತಿನ ದಿವಸ ಸುಮಾರು 150 ವರ್ಷಗಳಿಂದ ಪುನರ್ ಸರ್ವೆ ಆಗಲಿಲ್ಲ. ಇಂಥ ಸರ್ವೆ ಕಾರ್ಯವನ್ನು ಸರ್ಕಾರ ಇವತ್ತು ಬಹಳಷ್ಟು ಮುತುವರ್ಜಿ ವಹಿಸಿ ಮಾಡಬೇಕಾಗಿದೆ. ಅದರ ಜೊತೆಗೆ ಇವತ್ತಿನ ದಿವಸ ನಾವು ಎಲ್ಲಾ ಕಡೆಗೆ ಕೇಳುತ್ತೇವೆ, ಬೆಂಗಳೂರಿನಲ್ಲಿ ಭೂ ಹಗರಣ ನಡೆಯುತ್ತಿದೆ, ರಾಜ್ಯದಲ್ಲಿ ಬಹಳಷ್ಟು ಭೂ ಹಗರಣ ನಡೆಯುತ್ತಿದೆ ಎಂದು ಬಹಳಷ್ಟು ಸದಸ್ಯರು ಇಲ್ಲಿ ಎತ್ತಿ ತೋರಿಸಿದರು. ಇವತ್ತು ಪಂಚಾಯಿತಿ ಮಟ್ಟದಲ್ಲೂ ಕೂಡ ಭೂ ಹಗರಣ ಪ್ರಾರಂಭವಾಗಿದೆ. ಪಂಚಾಯಿತಿ ಮಟ್ಟದಲ್ಲಿ ಯಾವ ರೀತಿ ಭೂ ಹಗರಣ ಪ್ರಾರಂಭವಾಗಿದೆ ಎಂದರೆ, ತಾಲ್ಲೂಕು ಕೇಂದ್ರದಲ್ಲಿ ಒಂದು ಉದಾಹರಣೆಗೆ ಹೇಳುವುದಾದರೆ, ಅಥಣಿ ತಾಲ್ಲೂಕಿನಲ್ಲಿ ನಮ್ಮ ಅಥಣಿಯ ಸುತ್ತುಮುತ್ತಲಿನಲ್ಲಿರುವ ಪ್ರದೇಶಗಳಲ್ಲಿ ಎನ್‌ಎ ಮಾಡಿ ಫ್ಲಾಟ್ ಮಾಡತಕ್ಕಂಥ ಏನು ವ್ಯವಸ್ಥೆಯಿದೆಯೋ ಈ ವ್ಯವಸ್ಥೆ ಅಥಣಿ ಸುತ್ತಮುತ್ತಲೂ ಇರತಕ್ಕಂಥ ಎನ್‌ಎ ಮಾಡತಕ್ಕಂಥ ಜನ ಆ ಒಂದು ಪಕ್ಕದ ಪಂಚಾಯಿತಿಯಲ್ಲಿ ಏನು

ಮಾಡುತ್ತಾರೆಂದರೆ, ಅದನ್ನು ಹಸ್ತಾಂತರ ಮಾಡುತ್ತಾರೆ, ಮುನ್ಸಿಪಾಲಿಟಿಗೆ ಮಾಡುವುದಿಲ್ಲ, ಆ ಮುನ್ಸಿಪಾಲಿಟಿಗೆ ಹಸ್ತಾಂತರ ಮಾಡುವುದರ ಬದಲಿಗೆ ಗ್ರಾಮಪಂಚಾಯಿತಿಗೆ ಹಸ್ತಾಂತರ ಮಾಡಿ ಇವತ್ತಿನ ದಿವಸ ಅಥಣಿ ಕ್ಷೇತ್ರದಲ್ಲಿ ಸಾವಿರಾರು ಎಕರೆ ಎನ್‌ಎ ಆಗಿದೆ. ಅವತ್ತು ಪಂಚಾಯಿತಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಏನು ಮಾಡುತ್ತಿದ್ದಾರೆಂಬುದನ್ನು ಹೇಳುತ್ತೇನೆ. ಎನ್‌ಎ ಆದಂಥ 45 ಪರ್ಸೆಂಟ್ ಜಮೀನು ಏನು ಇರುತ್ತದೆ ಅದು ಸಾರ್ವಜನಿಕರಿಗೆ ಉಪಯೋಗಕ್ಕೆ ಇರುವಂಥದ್ದು, 55 ಪರ್ಸೆಂಟ್ ಜಮೀನು ಮನೆ ಕಟ್ಟಲಿಕ್ಕೆ. ಇಂಥ ಸಂದರ್ಭದಲ್ಲಿ ಆ 45 ಪರ್ಸೆಂಟ್ ಜಮೀನು ಏನು ಸಾರ್ವಜನಿಕರ ಉಪಯೋಗಕ್ಕೆ ಇರುತ್ತದೆ, ರಸ್ತೆ ಇರಬಹುದು, ಉದ್ಯಾನವನ ಇರಬಹುದು, ಕ್ರೀಡಾಂಗಣಕ್ಕೆಂದು ಇರಬಹುದು, ಇದಕ್ಕೆಲ್ಲಾ ಉಪಯೋಗ ಮಾಡಲಿಕ್ಕೆ ಇಟ್ಟಿರುತ್ತಾರೆ. ಸಂಕೋನಟ್ಟಿ ಎನ್ನುವ ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕವಾಗಿರತಕ್ಕಂಥ ಜಮೀನನ್ನು ಖಾಸಗಿ ಜನರಿಗೆ ಅದನ್ನು 99 ವರ್ಷ ಲೀಸ್‌ಗೆ ಆ ಜಮೀನುಗಳನ್ನು ಕೊಟ್ಟು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಇವತ್ತಿನ ದಿವಸ ಆಗುತ್ತಿದೆ. ಅದಕ್ಕೆ ಒಂದು ಕಡಿವಾಣ ಹಾಕಬೇಕು, ಕಡಿವಾಣ ಹಾಕದಿದ್ದರೆ ಪಟ್ಟಣದ ಸುತ್ತ ಮುತ್ತ ಇರುವ ಏನು ಜಮೀನು ಇರುತ್ತದೆ ಆ ಜಮೀನು ಸಂಪೂರ್ಣವಾಗಿ ಖಾಸಗೀಕರಣವಾಗಿ ನಗರದ ಸೌಂದರ್ಯ ಕೂಡ ಹಾಳಾಗುತ್ತಿದೆ. ಹಣ ದೋಚುವಂಥ ಜನರಿಗೆ ಪ್ರಚೋದನೆ ಕೊಡುವಂಥ ಕೆಲಸ ಪ್ರಾರಂಭವಾಗಿದೆ. ದಯವಿಟ್ಟು ಸರ್ಕಾರ ಎಚ್ಚೆತ್ತುಕೊಂಡು ಆದಂಥ ಅವ್ಯವಹಾರವನ್ನು ತಡೆಯಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಜಲಸಂಪನ್ಮೂಲ ಇಲಾಖೆಯ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಎರಡು ನೀರಾವರಿ ಯೋಜನೆಗಳು ಪ್ರಾರಂಭವಾಗಿವೆ. ಕರಿಮಸೂತಿ ಏತ ನೀರಾವರಿ, ಮತ್ತೊಂದು ಐನಾಪುರ ಏತ ನೀರಾವರಿ, ಐನಾಪುರ ಏತ ನೀರಾವರಿಯಲ್ಲಿ ಸುಮಾರು 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತು ಅಲ್ಲಿ ಇರಿಗೇಷನ್ ಮಾಡುತ್ತಿದ್ದಾರೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಎಲ್ಲಾ ಸದಸ್ಯರು ನಮಗೆ ನೀರಾವರಿ ಬೇಕು ಎಂದು ಕೇಳುತ್ತಾರೆ. ಆದರೆ ತದ್ವಿರುದ್ಧವಾಗಿ ನಾವು ಕೇಳುತ್ತೇವೆ, ಏನು ಕೇಳುತ್ತೇವೆ ಎಂದರೆ, ನೀವೇನು ಐನಾಪುರ ಏತ ನೀರಾವರಿ ಯೋಜನೆ ಮಾಡುತ್ತೀರಿ, ಅದರ ಕಮಾಂಡ್ ಏರಿಯಾದಲ್ಲಿ ಕೆನಾಲ್ ಮುಖಾಂತರ ರೈತರಿಗೆ ನೀರೇನು ಕೊಡಬೇಕೆಂದು ಹೇಳುತ್ತೀರಿ, ಆ ರೈತರಿಗೆ ಕೊಡತಕ್ಕಂಥ ಜಮೀನು ಏನು ಇದೆ, ಈಗಾಗಲೇ ಸುಮಾರು 30 ರಿಂದ 35 ವರ್ಷದ ಪೂರ್ವದಲ್ಲಿ ನೀರಾವರಿ ಆಗಿದೆ. ಆ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ 250 ಕೋಟಿ ರೂಪಾಯಿ ವ್ಯರ್ಥವಾಗಿ ಅಲ್ಲಿ ಖರ್ಚು ಮಾಡಿ, ಇವತ್ತು ಅಲ್ಲಿ ಸರ್ಕಾರಕ್ಕೆ ಹೊರೆ ಮಾಡುತ್ತಿದೆ. ಅಲ್ಲಿರತಕ್ಕಂಥ ರೈತರ ಬೇಡಿಕೆ ಏನು ಇದೆ ಎಂದರೆ, ನಾವು 30, 35 ವರ್ಷಗಳಿಂದ ನೀರಾವರಿ ಮಾಡಿಕೊಂಡಿದ್ದೇವೆ, ನಿಮ್ಮ ಸರ್ಕಾರದ ಯೋಜನೆಯ ಮುಖಾಂತರ ನಮಗೆ ನೀರು ಬೇಡ ಎಂದು ಸಾಕಷ್ಟು ಜನಪ್ರತಿನಿಧಿಗಳು ಇವತ್ತು ಹೇಳುತ್ತಿದ್ದಾರೆ. ಇಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಇವತ್ತಿನ ದಿವಸ ಪುನಃ ಟೆಂಡರ್ ಕರೆದು ಅಲ್ಲಿ ಗುತ್ತಿಗೆ ಕೊಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಇದನ್ನು ಏಕೆ ಮಾಡುತ್ತಿದ್ದಾರೆಂದರೆ, ಒಬ್ಬ ಗುತ್ತಿಗೆದಾರನಿಗೆ ಉದ್ಯೋಗ ಒದಗಿಸುವ ಸಲುವಾಗಿ ಸರ್ಕಾರ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ಯೋಜನೆಯನ್ನು ತರುತ್ತಿದ್ದಾರೆ. ಆ ಒಂದು ನಿಟ್ಟಿನಲ್ಲಿ ಇವತ್ತು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ನಾನೇನು ಪ್ರಯತ್ನ ಮಾಡುತ್ತೇನೆಂದರೆ,

ಇವತ್ತೇನು ವ್ಯರ್ಥ ಖರ್ಚು ಮಾಡುವುದರ ಬದಲಿಗೆ ಇವತ್ತು ಐನಾಪುರ ಏತ ನೀರಾವರಿ ಏನು ಇದೆ, ಎಡಕ್ಕೆ ಮತ್ತು ಬಲಕ್ಕೆ ಮಾಡತಕ್ಕಂಥ ಕೆನಾಲ್‌ಗಳನ್ನು ಸಂಪೂರ್ಣವಾಗಿ ನಿಲ್ಲಿಸಿ, ಮುಂದೆ ಬರಗಾಲದ ದವಡೆಯಲ್ಲಿ ತತ್ತರಿಸುವ ಅಥಣಿ ಕ್ಷೇತ್ರ ಏನು ಇದೆ, ಆ ಅಥಣಿ ಕ್ಷೇತ್ರಕ್ಕೆ ನೀರಾವರಿ ಮಾಡಿಕೊಡತಕ್ಕಂಥ ಕೆಲಸಕ್ಕೆ ಕೈ ಹಾಕಬೇಕೆಂದು ನಿಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನೀವು ಹೇಳುವುದನ್ನೆಲ್ಲ ಬರೆದು ಕೊಟ್ಟುಬಿಡಿ. ಅದನ್ನೆಲ್ಲ ನಾವು ರೆಕಾರ್ಡ್‌ಗೆ ಕೊಟ್ಟುಬಿಡುತ್ತೇವೆ. ನಿಮ್ಮ ನಿಮ್ಮ ಹೆಸರಿನಲ್ಲಿ ಬರೆದುಕೊಟ್ಟರೆ ರೆಕಾರ್ಡ್‌ಗೆ ಕೊಟ್ಟುಬಿಡುತ್ತೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಮಳೆ ಹೆಚ್ಚಾಗುತ್ತಿದೆ. ಮಳೆ ಹೆಚ್ಚಾಗಿ ಎಲ್ಲಾ ಕಡೆ ಪ್ರವಾಹಗಳು ಬರುತ್ತಿವೆ. ಆದರೆ ಅಥಣಿ ಕ್ಷೇತ್ರದಲ್ಲಿ ಇನ್ನೂ ಆರು ಹಳ್ಳಿಯಲ್ಲಿ ಟ್ಯಾಂಕರ್ ಮೂಲಕ ನೀರು ಹಾಕುವಂಥ ಪರಿಸ್ಥಿತಿ ಇದೆ. ಆ ನಿಟ್ಟಿನೊಳಗೆ ಎಲ್ಲಿ ಬೋರ್ ಹಾಕುತ್ತೇವೆ, ಅಲ್ಲಿ ಇವತ್ತು 500, 600 ಅಡಿ ಕೆಳಗಡೆ ನೀರು ಸಿಗುತ್ತಿವೆ. ಕುಡಿಯಲಿಕ್ಕೆ ನೀರು ಸಿಕ್ಕುತ್ತಿಲ್ಲ. ಆ ಒಂದು ನಿಟ್ಟಿನಲ್ಲಿ ನೀರಿನ ಟೇಬಲ್ ಕೆಳಗಡೆ ಏನು ಹೋಗಿದೆ ಆ ವಾಟರ್ ಟೇಬಲ್ ಮೇಲೆ ಬರಬೇಕಾದರೆ ಸಣ್ಣ ನೀರಾವರಿ ಇಲಾಖೆಯಲ್ಲಿರುವ ಏನು ಕೆರೆಗಳಿವೆ ಆ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಆಗಬೇಕು. ಆ ಕೆಲಸ ಆಗಬೇಕಾದರೆ, ಇವತ್ತಿನ ದಿವಸ ನೀವು, ಏನಪ್ಪ ಮಳೆ ರಾಜನಿಗೆ ನಾವು ಹೇಳಬೇಕೇ ಎಂದು ಕೇಳಬಹುದು. ಏನೂ ಹೇಳುವುದು ಅವಶ್ಯಕತೆ ಇಲ್ಲ. ಆ ಕೆರೆಗಳನ್ನು ತುಂಬಿಸತಕ್ಕಂಥ ಕೆಲಸವನ್ನು ನಮ್ಮ ಅಥಣಿ ತಾಲ್ಲೂಕಿನಲ್ಲಿ ಮಾಡಿದ್ದೇವೆ. ಜಿಲ್ಲಾ ಪಂಚಾಯಿತಿ ಇಂಜಿನಿಯರ್ ವಿಭಾಗದಿಂದ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಮೊಬೈಲ್ ಟ್ರಾನ್ಸ್‌ಪೋರ್ಟೇಷನ್ ಮಾಡಿ, ಜನರೇಟರ್ ಮತ್ತು ಒಂದು ಪಂಪು ಕೂಡಿಸಿಕೊಂಡು ಸುಮಾರು ಐದು ಕಿಲೋಮೀಟರ್‌ವರೆಗೆ ಪೈಪ್‌ಗಳನ್ನು ಜೋಡಿಸಿ, ಎಲ್ಲಿ ಕೆರೆ ಒಣಗಿದ ಸಂದರ್ಭವನ್ನು ನೋಡಿ ಅಲ್ಲಿ ನದಿಯಿಂದ ನೀರು ತಂದು ಆ ಕೆರೆಗಳನ್ನು ತುಂಬಿಸತಕ್ಕಂಥ ಒಂದು ಕೆಲಸವನ್ನು ಪ್ರಾಯೋಗಿಕವಾಗಿ ನಾವು ಪ್ರಾರಂಭ ಮಾಡಿದ್ದೇವೆ. ಆ ನಿಟ್ಟಿನಲ್ಲಿ ಇವತ್ತು ಸರ್ಕಾರ ಏನು ಮಾಡಬೇಕೆಂದರೆ, ಎಲ್ಲೆಲ್ಲಿ ವಾಟರ್ ಟೇಬಲ್ ಕೆಳಗೆ ಹೋಗಿದೆ ಆ ಭಾಗದಲ್ಲಿ ಒಂದು ಹೊಸ ಯೋಜನೆಯನ್ನು ಮಾಡಿಕೊಂಡು ದೊಡ್ಡ ಪ್ರಮಾಣದಲ್ಲಿ 50 ಹಾರ್ಸ್‌ಪವರ್‌ದ್ದು, 100 ಹಾರ್ಸ್ ಪವರ್‌ದ್ದು, ಮೋಟಾರ್ ತೆಗೆದುಕೊಂಡು ಒಂದು ಮೀಟರ್‌ದ್ದು ಅಡಿ ಇರತಕ್ಕಂಥ ಡೈಯಾಮೀಟರ್ ಇರತಕ್ಕಂಥ ಪೈಪ್‌ಗಳನ್ನು ಜೊಡಿಸಿ ಎಲ್ಲೆಲ್ಲಿ ನೀರು ಲಭ್ಯ ಇರುತ್ತದೆ ಆ ನೀರನ್ನು ಎತ್ತಿ ಆ ಕೆರೆಗಳಿಗೆ ತುಂಬಿಸುವಂಥ ಕೆಲಸವನ್ನು ಮಾಡಿದ್ದೇ ಆದರೆ ವಾಟರ್ ಟೇಬಲ್ ಮೇಲೆ ಬರುತ್ತದೆ. ಅದರ ಜೊತೆಗೆ . . .

ಅಧ್ಯಕ್ಷರು: ಆಯಿತು ಆಯಿತು ದಯಮಾಡಿ ಕುಳಿತುಕೊಳ್ಳಿ . . ಬಾಲರಾಜ್‌ರವರು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಸದಸ್ಯರು ಕೆರೆಗಳಿಗೆ ನೀರು ಹಾಕುವ ಸಲುವಾಗಿ ಒಳ್ಳೆಯ ಸಲಹೆ ಕೊಡುತ್ತಿದ್ದಾರೆ ದಯವಿಟ್ಟು ಮಾನ್ಯ ಸಚಿವರು ಗಮನಹರಿಸಬೇಕು.

ಅಧ್ಯಕ್ಷರು: ಇರಲಿ ಇನ್ನೂ ಒಳ್ಳೆಯ ಸಲಹೆಗಳನ್ನು ಬೇರೆ ಸದಸ್ಯರು ಕೊಡುತ್ತಾರೆ. ಬಾಲರಾಜ್‌ರವರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅತ್ಯಂತ ಮಹತ್ವದ ವಿಚಾರ ಇದೆ ಅದರ ಸಲುವಾಗಿ ನಾನು ತಮಗೆ ಹೇಳುತ್ತಿದ್ದೇನೆ. ಪ್ರಾಯೋಗಿಕವಾಗಿ ಮಾಡಿರುವ ಏನು ಯೋಜನೆ ಇದೆ, ಅದನ್ನು ಸಂಪೂರ್ಣವಾಗಿ ಎಲ್ಲೆಲ್ಲಿ ವಾಟರ್ ಟೇಬಲ್ ಕೆಳಗಡೆ ಹೋಗಿದೆ ಅಲ್ಲಿ ಮಾಡಬಹುದು . . .

ಅಧ್ಯಕ್ಷರು: ಎಪಿಎಂಸಿ ಸಚಿವರೇ, ಇಲ್ಲಿ ಬೇರೆಯವರು ಒಳ್ಳೆಯ ಸಲಹೆ ಕೊಡುತ್ತಾರೆ . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ವಾಟರ್ ಟೇಬಲ್ ಕೆಳಗಡೆ ಹೋದಂಥ ಜಿಲ್ಲೆಗಳು ಇರಬಹುದು, ಬೆಳಗಾವಿಯ ಅಥಣಿ ತಾಲ್ಲೂಕು ಇರಬಹುದು, ಕೋಲಾರ ಜಿಲ್ಲೆಯಲ್ಲೂ ಕೂಡ ಹೇಳುತ್ತಾರೆ, 800 ಅಡಿಗೆ ಹೋದರೂ ನೀರು ಸಿಕ್ಕುವುದಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು: ನೀವು ದಯಮಾಡಿ ಕುಳಿತುಕೊಳ್ಳಿ, ಬೇರೆಯವರು ಮಾತನಾಡಬೇಕಲ್ಲವೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅಟ್‌ಲೀಸ್ಟ್ ನಮ್ಮ ಕ್ಷೇತ್ರದ್ದು ನಮಗೆ ಹೇಳುವುದಕ್ಕೆ ಅವಕಾಶ ಇಲ್ಲ ಅಂದರೆ ನಾನು ಕುಳಿತುಕೊಳ್ಳುತ್ತೇನೆ ಸಾರ್, ಏನು ಮಾಡುವುದಕ್ಕೆ ಆಗುತ್ತದೆ? ಅನಿವಾರ್ಯ ಸಾರ್. ನಿಮ್ಮ ಆದೇಶವನ್ನು ನಾವು ಪಾಲನೆ ಮಾಡಬೇಕಾಗುತ್ತದೆ. .

ಅಧ್ಯಕ್ಷರು: ಏನೂ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಲಕ್ಷ್ಮಣ ಸಂಗಪ್ಪ ಸಾವದಿ: ನಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳಬೇಕೆಂದರೆ ತಾವು ಸಮಯ ಕೊಡುತ್ತಿಲ್ಲ. ನೀವು ಬೇಡವೆಂದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು: ನೀವು ಹೇಳುವಾಗಲೇ ಒಂದು ರೀತಿಯಲ್ಲಿ ಹೇಳುತ್ತೀರಿ. ನಾವು ಸಭೆ ನಡೆಸಬೇಕೋ ಅಥವಾ ಬೇಡವೋ?

ಶ್ರೀ ಆರಗ ಜ್ಞಾನೇಂದ್ರ: ಇನ್ನೂ ಮೂರ್‍ನಾಲ್ಕು ನಿಮಿಷ ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಇದೇನಿದು?

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಇರತಕ್ಕಂಥ ರಸ್ತೆಗಳ ಬಗ್ಗೆ ಹೇಳಬೇಕಾಗಿದೆ. ಅಲ್ಲಿನ ರಸ್ತೆಗಳ ಮೇಲೆ ಓಡಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ಗಾಡಿಗಳ ಮೇಲೂ ಕೂಡ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಚಿಕ್ಕನಗೌಡ್ರೆ, ಆಯಿತು ಕುಳಿತುಕೊಳ್ಳಿ. ಯಾಕೆ ಈ ರೀತಿಯಾಗಿ ತೊಂದರೆ ಮಾಡುತ್ತೀರಿ? ಮಾನ್ಯ ಸವದಿಯವರೆ, ಇನ್ನು ಒಂದು ನಿಮಿಷದಲ್ಲಿ ನಿಮ್ಮ ಮಾತನ್ನು ಮುಗಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಇಂಧನ ಇಲಾಖೆ ಬಗ್ಗೆ ಹೇಳುವುದಾದರೆ,

ಅಧ್ಯಕ್ಷರು: ಬೇರೆ ಬೇರೆ ಇಲಾಖೆ ಏತಕ್ಕೆ ತೆಗೆದುಕೊಳ್ಳುತ್ತೀರಿ? ದಯಮಾಡಿ ಕನ್‌ಫೈನ್ ಆಗಿ ಒಂದೆರೆಡು ಮಾತುಗಳನ್ನು ಹೇಳಿ ಮುಗಿಸಿ. ಏಕೆಂದರೆ, ಈಗ ಸಮಯ ಇಲ್ಲ. ನಿಮಗೆ ಮಾತನಾಡಬೇಕೆಂದು ಆಸೆ ಇದೆ. ಆದರೆ, ಅವಕಾಶ ಇಲ್ಲ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು: ಏಕೆ ಈ ತರಹ ಹಠ ಮಾಡುತ್ತೀರಿ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಒಂದೆರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು: ಹಾಗಾದರೆ, ಇಲ್ಲಿಯವರೆಗೆ ಮಾತನಾಡಿರತಕ್ಕಂಥದ್ದು ಯಾವುದು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ನನ್ನ ಅಥಣಿ ಕ್ಷೇತ್ರ ಮಹಾರಾಷ್ಟ್ರದ ಗಡಿ ಭಾಗದಲ್ಲಿರತಕ್ಕಂಥ ಒಂದು ತಾಲ್ಲೂಕು ಆಗಿದೆ. ಇವತ್ತಿನ ದಿವಸ ಎಲ್ಲಾ ಕಡೆಗೆ 18 ಗಂಟೆಗಳ ಅವಧಿಯವರೆಗೆ ವಿದ್ಯುತ್ ಕೊಡುತ್ತೇವೆಂದು ಇಂಧನ ಇಲಾಖೆಯವರು ಹೇಳುತ್ತಾರೆ. ಆದರೆ, ನನ್ನ ಕ್ಷೇತ್ರದ ಐಗಳಿ ಎನ್ನತಕ್ಕಂಥ ಗ್ರಾಮದಲ್ಲಿ ಕೇವಲ ನಾಲ್ಕು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡತಕ್ಕಂತ ಕೆಲಸ ಆಗುತ್ತಿಲ್ಲ. ಆದ್ದರಿಂದ, ಈ ಭಾಗದಲ್ಲಿರತಕ್ಕಂಥ 33 ಕೆ.ವಿ. ಲೈನ್ ಏನು ಇದೆ, ಅದನ್ನು ಬದಲಾವಣೆ ಮಾಡಿ 110 ಕೆ.ವಿ. ಮಾಡುವುದರ ಜೊತೆಗೆ ಎರಡು ಸ್ಟೇಷನ್ ಮಾಡಿದರೆ ಇವತ್ತಿನ ದಿವಸ ಅಥಣಿ ತಾಲ್ಲೂಕಿನಲ್ಲಿ ವಿದ್ಯುತ್ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ತಾವು ನನಗೆ ಸ್ವಲ್ಪ ಸಮಯ ಒದಗಿಸಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಬಾಲರಾಜ್‌ರವರೆ, ಈಗ ತಾವು ಮಾತನಾಡಿ. ತಾವೂ ಕೂಡ ಐದಾರು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕೆಂದು ತಮ್ಮ ಹತ್ತಿರ ಈಗಾಗಲೇ ಮನವಿ ಮಾಡಿಕೊಂಡಿದ್ದೇನೆ.

ಅಧ್ಯಕ್ಷರು: ಈಗ ಸಮಯವಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಇನ್ನೊಂದು ಸಲ ತಮಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಹಿರಿಯ ಸದಸ್ಯರು ದಯಮಾಡಿ ನಮಗೆ ಸಹಕರಿಸಿ. ದಯಮಾಡಿ ನಮ್ಮ ಕಷ್ಟವನ್ನು ಅರ್ಥಮಾಡಿಕೊಳ್ಳಿ. ಈಗ ಬಾಲರಾಜ್‌ರವರೇ, ತಾವು ಮಾತನಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ: ನೀವು ಬೇಡ ಎಂದರೆ ನಾವು ಹೊರಗೆ ಹೋಗುತ್ತೇವೆ. ನಾವು ಏನೇ ಮನವಿ ಮಾಡಿಕೊಂಡರೂ ತಾವು ಅವಕಾಶ ಕೊಡುತ್ತಿಲ್ಲ ಏಕೆ?

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಬೇಕು. ಬಾಲರಾಜ್‌ರವರೆ, ತಾವು ಮಾತನಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ; ಮಾತನಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ.

ಶ್ರೀ ಎಸ್. ಬಾಲರಾಜ್(ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ತಾವು ಶಾಸಕರ ದಿನಾಚರಣೆಯನ್ನು ನಡೆಸಿಕೊಟ್ಟು, ನಮ್ಮೆಲ್ಲರನ್ನೂ ಒಂದು ಮಾಡತಕ್ಕಂಥ ಕಾರ್ಯವನ್ನು ತಾವು ಮಾಡಿದ್ದೀರಿ. ಮತ್ತೆ ಆ ದಿನ ನಡೆದ ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ಎಲ್ಲಾ ಸದಸ್ಯರನ್ನು ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ಕೂಡ ನಮ್ಮ ಮುಖಗಳನ್ನು ತೋರಿಸುವಂತೆ ಮಾಡಿದ್ದಕ್ಕೆ ತಮಗೆ ಹಾಗೂ ವಿಧಾನ ಪರಿಷತ್‌ನ ಮಾನ್ಯ ಸಭಾಪತಿಯವರಿಗೆ ಮತ್ತು ಕರ್ನಾಟಕ ಸರ್ಕಾರದ ಎಲ್ಲರಿಗೂ ಹಾಗೂ ಮಾನ್ಯ ಮುಖ್ಯಮಂತ್ರಿಯವರಿಗೆಲ್ಲಾ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು: ನಾನು ನಿಮಗೆ 5 ನಿಮಿಷ ಸಮಯ ಕೊಟ್ಟಿದ್ದೇನೆ. ತಾವು ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಎಸ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಆನಂತರ ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಈಗ ಪ್ರಸ್ತಾಪ ಮಾಡಿದ್ದೇನೆ. ನೀವು ನನಗೆ ಕೊಟ್ಟಿರತಕ್ಕಂಥ ಐದು ನಿಮಿಷ ಅವಧಿಯಲ್ಲಿ, ಅಂದರೆ ಸಿನಿಮಾದಲ್ಲಿ ಟ್ರೈಲರ್ ತೋರಿಸುವ ಹಾಗೆ; ಆದಷ್ಟು ಬೇಗ ಅಂದರೆ 5–10 ನಿಮಿಷದಲ್ಲಿ ನನ್ನ ಕ್ಷೇತ್ರದ ಮತ್ತು ರಾಜ್ಯದ ಕೆಲವು ಸಮಸ್ಯೆಗಳ ಬಗ್ಗೆ ಮಾತ್ರ ಹೇಳುತ್ತೇನೆ. ಏಕೆಂದರೆ, ನನಗೆ ಹೆಚ್ಚು ಅವಕಾಶ ಇಲ್ಲದೇ ಇರುವುದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ ಮೀನುಗಾರಿಕೆ ಬಗ್ಗೆ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ 7.64 ಲಕ್ಷ ಮೀನುಗಾರರಿದ್ದಾರೆ. ಇದರಲ್ಲಿ 2 ಲಕ್ಷ ಕರಾವಳಿ ಮೀನುಗಾರರು ಮತ್ತು 5.6 ಲಕ್ಷ ಒಳನಾಡಿನ ಮೀನುಗಾರರು ಇದ್ದಾರೆ. ಇವತ್ತಿನ ದಿವಸ ಮತ್ಸ್ಯ ಸಂಪತ್ತನ್ನು ಅಭಿವೃದ್ಧಿಪಡಿಸತಕ್ಕಂಥದ್ದು ನಮ್ಮ ಆದ್ಯ ಕರ್ತವ್ಯವಾಗಿದೆ. ಕಾರಣ ಏನೆಂದರೆ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರಿಗೆ ನಾವು ವಿಟಮಿನ್‌ಯುಕ್ತ ಆಹಾರವನ್ನು ಕೊಡುವುದಕ್ಕೆ ನಾವು ಬೇರೆ ಯಾವುದೇ ತರಹದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗುತ್ತಿಲ್ಲ. ಮತ್ತೆ ಕಡಿಮೆ ದರದಲ್ಲಿ ಅತೀ ಹೆಚ್ಚು ಸಂಪತ್ತನ್ನು ಕೊಡತಕ್ಕಂಥ ಅವಕಾಶ ಇರತಕ್ಕಂಥ ಈ ಒಂದು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು. ಅನಂತರ ಒಳನಾಡು ಮೀನುಗಾರಿಕೆಗೆ ಅತೀ ಹೆಚ್ಚಿನ ಅನುದಾನವನ್ನು ನೀಡಬೇಕು. ಏಕೆಂದರೆ ಇದನ್ನು ನಂಬಿ ಬದುಕತಕ್ಕಂಥ ಸುಮಾರು 5.5 ಲಕ್ಷ ಜನರು ಇರುವಾಗ ಇವರಿಗೆ ಸೂಕ್ತವಾದ ಸೌಲಭ್ಯವನ್ನು ಕೊಡಬೇಕಾಗುತ್ತದೆ. ಇವತ್ತಿನ ದಿವಸ ಮೀನುಮರಿ ಉತ್ಪಾದನಾ ಕೇಂದ್ರಗಳು ಹಾಳಾಗಿವೆ. ಇದನ್ನು ಕಾಯಕಲ್ಪ ಮಾಡತಕ್ಕಂಥ ಕೆಲಸ ಇದುವರೆಗೆ ನಡೆದಿಲ್ಲ. ಮತ್ತೆ ಬರಗಾಲದಲ್ಲಿ ಮೀನು ಕೃಷಿಯನ್ನು ಅವಲಂಬಿಸಿರತಕ್ಕಂಥ ಸಹಕಾರ ಸಂಘಗಳು ಇರಬಹುದು ಅಥವಾ ಕೃಷಿಕರು ಇರಬಹುದು, ಇವತ್ತಿನದಿವಸ ಇವರೆಲ್ಲರೂ ಬಹಳ ಸಂಕಷ್ಟದಲ್ಲಿದ್ದಾರೆ. ಅವರಿಗೂ ಕೂಡ ಸಹಾಯ ಮಾಡುವ ನಿಟ್ಟಿನಲ್ಲಿ ಅಂದರೆ ಅವರ ಬಡ್ಡಿಯನ್ನು ಮನ್ನಾ ಮಾಡಬೇಕು. ಕಳೆದ ಸಾರಿ ಮೀನುಮರಿಯನ್ನು ಬಿಟ್ಟರು, ಆದರೆ ನೀರು ಬರಲಿಲ್ಲ. ನೀರು ಬಾರದೆ ಇರುವುದರಿಂದ ಅವರ ಮೀನುಮರಿಗಳೆಲ್ಲಾ ಹಾಳಾಯಿತು. ಆದ್ದರಿಂದ, ಅವರಿಗೆ ನಾವು ಏನು ಸಹಾಯ ಮಾಡಿದ್ದೇವೆ? ಆದ್ದರಿಂದ, ಈಗಲೂ ಕೂಡ ಬರಪೀಡಿತ ಪ್ರದೇಶವಾಗಿರತಕ್ಕಂಥ ನಮ್ಮ ಭಾಗದ ಯಳಂದೂರು ಮತ್ತು ಕೊಳ್ಳೇಗಾಲ ಭಾಗದಲ್ಲಿರತಕ್ಕಂಥ ಮೀನುಗಾರರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು. ಹಾಗೆಯೇ ಅವರ ಸಾಲಕ್ಕೆ ಮತ್ತೊಂದು ಸಾರಿ ಕಾಲಾವಧಿಯನ್ನು ವಿಸ್ತರಣೆ ಮಾಡಬೇಕು. ಜೊತೆಗೆ ಈ ಗುತ್ತಿಗೆ ಮೊತ್ತವನ್ನು ಮುಂದಿನ ಸಾಲಿಗೆ ಅಂದರೆ ಒಂದು ಏಳರಿಂದ ಕಟ್ಟುವುದಕ್ಕೆ ಅವಕಾಶವನ್ನು ಕೂಡ ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ, ಈ ಸಾರಿಯ ಆಯವ್ಯಯದಲ್ಲಿ ನೀಡಿರತಕ್ಕಂಥ 571 ಲಕ್ಷ ರೂಪಾಯಿಗಳ ಅನುದಾನದಲ್ಲಿ 150 ಲಕ್ಷ ರೂಪಾಯಿಗಳನ್ನು ಹುಡ್ಕೋ ಸಂಸ್ಥೆಯ ಬಡ್ಡಿ ಹಣದ ಮರು ಪಾವತಿಗಾಗಿ ಮೀಸಲಾಗಿಟ್ಟಿದ್ದೀರಿ. ಈ ಹಣದಲ್ಲಿ ಕನಿಷ್ಠಪಕ್ಷ 10 ಕೋಟಿ ರೂಪಾಯಿಗಳನ್ನಾದರೂ ನೀಡಿ, ಇದರ ಮುಖಾಂತರ ಈ ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಇಡೀ ಕರ್ನಾಟಕ ರಾಜ್ಯದಲ್ಲಿ 74 ದೊಡ್ಡ ಜಲಾಶಯಗಳಿವೆ. ಮತ್ತೆ ಸಾವಿರಾರು ಕೆರೆಗಳಿವೆ. ಇವುಗಳನ್ನು ಅಭಿವೃದ್ಧಿಪಡಿಸಬೇಕೆಂದು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದೆ. ಆದರೆ, ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, ನಾವು ಇಲ್ಲಿ ಮಾತನಾಡಿ ಹೋದರೆ ಸಾಕೇ ಅಥವಾ ಅಭಿವೃದ್ಧಿ

ಪಥದ ಕಡೆ ಕೆಲಸ ಆಗುತ್ತದೆಯೇ ಎಂಬುದರ ಬಗ್ಗೆ ನಮಗೆ ತಿಳುವಳಿಕೆ ಆಗಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ಜಲಾಶಯಗಳನ್ನು ಮತ್ತು ಕೆರೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಪ್ರಾಧಿಕಾರವನ್ನು ರಚನೆ ಮಾಡಿದರೆ ಸಂಪೂರ್ಣವಾದಂಥ ಕೆಲಸವನ್ನು ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಈ ಕೆಲಸವನ್ನು ಇವತ್ತಿನ ದಿವಸ ಇಲಾಖೆಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಇರತಕ್ಕಂಥ ಕೆರೆಗಳು ಸರ್ಕಾರಿ ಸ್ವಾಮ್ಯಕ್ಕೆ ಒಳಪಡದೆ, ಇವುಗಳನ್ನು ಕೆಸಿಎಫ್‌ರವರಿಗೆ ಕೊಟ್ಟಿರುವುದರಿಂದ ಇವುಗಳೆಲ್ಲಾ ಹಾಳಾಗಿವೆ. ಆದ್ದರಿಂದ ಇವುಗಳನ್ನು ಸರ್ಕಾರವೇ ವಶಪಡಿಸಿಕೊಳ್ಳಬೇಕು. ಮತ್ತೆ ಕಳೆದ ಮೂರು ವರ್ಷಗಳಿಂದ ಅಲ್ಲಿಗೆ ಒಬ್ಬ ಸಹಾಯಕ ನಿರ್ದೇಶಕರು ಇಲ್ಲದೇ ಇರುವುದರಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದ, ಗುಂಡಾಲ ಜಲಾಶಯದಲ್ಲಿದ್ದಂಥ ಒಂದು ಮೀನು ಉತ್ಪಾದನಾ ಕೇಂದ್ರ ಇವತ್ತು ಇದ್ದೂ ಕೂಡ ಇಲ್ಲದ ಹಾಗೆ ಆಗಿದೆ. ಆದ್ದರಿಂದ, ಇದಕ್ಕೆ ಕಾಯಕಲ್ಪ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಸ್ಥಳೀಯವಾಗಿ ಸಿಗತಕ್ಕಂಥ ಮೀನುಗಳಿಗೆ ಹೆಚ್ಚಿನ ಒತ್ತು ನೀಡಿ ಅಂದರೆ, ಸ್ಥಳೀಯ ಮೀನುಗಳ ಬೆಳವಣಿಗೆಗೆ ಪೂರಕವಾಗುವಂಥ ಒಂದು ಕ್ರಮವನ್ನೂ ಕೂಡ ಮೀನುಗಾರಿಕೆ ಇಲಾಖೆ ಕೈಗೊಳ್ಳಬೇಕು. ಮತ್ತೆ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಮೂರು ಜಲಾಶಯಗಳು ಮತ್ತು 90 ಕೆರೆಗಳು ಹಾಗೂ 225 ಚಿಕ್ಕ ಕೆರೆಗಳಿವೆ. ಬಹಳಷ್ಟು ಹೆಚ್ಚು ಕೆರೆಗಳಿವೆ. ಹಾಗೆಯೇ 20 ಸಹಕಾರ ಸಂಘಗಳು ನಮ್ಮ ಜಿಲ್ಲಾ ವ್ಯಾಪ್ತಿಯಲ್ಲಿವೆ. ಇದಕ್ಕೂ ಕೂಡ ಹೆಚ್ಚಿನ ಆದ್ಯತೆ ನೀಡಬೇಕು. ನಮ್ಮ ಕಡೆ ರಸ್ತೆಗಳು ಇಲ್ಲ ಮತ್ತೆ ಕಳೆದ ಎರಡು ವರ್ಷಗಳ ಹಿಂದೆ ಮನೆಗಳನ್ನು ನೀಡಲಾಗಿತ್ತು. ಈಗ ಮತ್ತೆ ಮನೆಗಳನ್ನು ನೀಡತಕ್ಕಂಥ ಅವಶ್ಯಕತೆ ಇದೆ. ಈ ಮನೆಗಳಿಗೆ ಕರ್ನಾಟಕ ಸರ್ಕಾರ 30 ಸಾವಿರ ರೂಪಾಯಿ ನಿಗದಿ ಮಾಡಿದೆ. ಆದರೆ, ಕೇಂದ್ರ ಸರ್ಕಾರ ಇದಕ್ಕಾಗಿ 40 ಸಾವಿರ ರೂಪಾಯಿ ನಿಗದಿ ಮಾಡಿದೆ. ಆದ್ದರಿಂದ ನೀವೂ ಕೂಡ 80 ಸಾವಿರ ರೂಪಾಯಿಗಳನ್ನು ಕೊಡುವ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಂಡರೆ ಮನೆಗಳನ್ನು ಕಟ್ಟಿಕೊಳ್ಳುವವರು ಒಳ್ಳೆಯ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಹಣವನ್ನು 40 ಸಾವಿರಕ್ಕೆ ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕಂದಾಯ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಕಂದಾಯ ಮತ್ತು ಅರಣ್ಯ ಗ್ರಾಮಗಳು ಯಾವುದು ಎಂದು ಇದುವರೆಗೂ ನಮಗೆ ಗೊತ್ತಿಲ್ಲ. ಅಂದರೆ, ಬಿಳಿರಂಗನ ಬೆಟ್ಟದ ಪೋಡ್‌ಗಳಿರಬಹುದು ಮತ್ತೆ ನಮ್ಮಲ್ಲಿರತಕ್ಕ ಜಾಗೀರ್‌ಬಾಗಳಿರಬಹುದು. ಈ ಗ್ರಾಮಗಳು ಅರಣ್ಯ ಅಥವಾ ಕಂದಾಯಕ್ಕೆ ಸೇರಿದೆಯೇ ಎಂಬುದು ಗೊತ್ತಿಲ್ಲ. ಅಪ್ಪ–ಅಮ್ಮ ಯಾರು ಎಂಬುದು ಅವರಿಗೆ ಗೊತ್ತಿಲ್ಲ. ಈ ಗ್ರಾಮಗಳನ್ನು ಯಾರೂ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಗ್ರಾಮಗಳು ಕಂದಾಯ ಅಥವಾ ಅರಣ್ಯಕ್ಕೆ ಸೇರಿಲ್ಲವೆಂದು ಎರಡು ಇಲಾಖೆಗಳು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಒಂದು ತೀರ್ಮಾನ ಮಾಡಬೇಕು. ಇವುಗಳನ್ನು ಅರಣ್ಯ ಗ್ರಾಮ ಎಂದು ಘೋಷಣೆ ಮಾಡಿ ಅರಣ್ಯವತಿಯಿಂದ ಅವರಿಗೆ ಸಂಪೂರ್ಣವಾದ ಸವಲತ್ತುಗಳನ್ನು ನೀಡಲಿ. ಇಲ್ಲದಿದ್ದರೆ ಕಂದಾಯ ಗ್ರಾಮ ಎಂದು ಮಾಡಿ, ಕಂದಾಯ ಇಲಾಖೆ ಮುಖಾಂತರ ಒಳ್ಳೆಯ ರೀತಿಯಲ್ಲಿ ಆ ಗ್ರಾಮಗಳನ್ನು ಅಭಿವೃದ್ಧಿಪಡಿಸತಕ್ಕಂಥ ಕೆಲಸ ಆಗಬೇಕಾಗಿದೆ. ಮತ್ತೆ ಬಿಳಿಗಿರಿ ಬೆಟ್ಟ ಮತ್ತು ಮಹದೇಶ್ವರ ಬೆಟ್ಟದಲ್ಲಿ ಒಳ್ಳೆಯ ಶೌಚಾಲಯಗಳು ಇವತ್ತಿನದಿವಸ ಇಲ್ಲ. ಮತ್ತೆ ಒಳ್ಳೆಯ ಮೂಲಭೂತ ಸೌಕರ್ಯಗಳು ಇಲ್ಲ. ಬಂದು ಅಲ್ಲಿ

ಉಳಿಯತಕ್ಕಂಥ ಜನರಿಗೂ ಕೂಡ ಅವಕಾಶಗಳು ಬಿಳಿರಂಗನ ಬೆಟ್ಟದಲ್ಲಿ ಇಲ್ಲ. ಆದರೆ, ಮಹದೇಶ್ವರ ಬೆಟ್ಟದಲ್ಲಿ ಜಾಗ ಇದೆ, ಮತ್ತೆ ಅಲ್ಲಿ ಭಕ್ತಾದಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಇಲ್ಲಿ ಸೇರುತ್ತಾರೆ. ಆದರೆ ಮಳೆ ಬಂದರ ನಿಂತುಕೊಳ್ಳುವುದಕ್ಕೆ ಒಂದು ಶೆಲ್ಟರ್ಸ್ ಕೂಡ ಅಲ್ಲಿ ಇಲ್ಲ. ಆದ್ದರಿಂದ, ನಾನು ತಮ್ಮಲ್ಲಿ ಕೇಳುವುದೇನೆಂದರೆ, ಇದರ ಬಗ್ಗೆ ತಾವು ಪರಿಶೀಲನೆ ಮಾಡಿಸಬೇಕು. ಇವತ್ತಿನದಿವಸ ಮಹದೇಶ್ವರ ಬೆಟ್ಟದಲ್ಲಿ ಒಂದು ಬಸ್ ಶೆಲ್ಟರ್ ಇಲ್ಲ. ಮಳೆ ಬಂದರೆ ನಾಲ್ಕು ಜನ ನಿಂತುಕೊಳ್ಳುವುದಕ್ಕೆ ಆಗುವಂಥ ಜಾಗ ಇಲ್ಲ. ಇದು ಒಂದು ದುರಂತ. ಅಲ್ಲಿನ ದೇವಸ್ಥಾನದ ಮುಖಾಂತರ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಲಾಗುತ್ತಿದೆ. ಆದರೆ ಅಲ್ಲಿ ಮೂಲಭೂತ ಸೌಕರ್ಯಗಳು ಏನೆಂದರೆ ಏನೂ ಇಲ್ಲ. ಆದ್ದರಿಂದ, ದಯವಿಟ್ಟು ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ನನ್ನ ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರಿರತಕ್ಕಂಥ ಶಿವನಸಮುದ್ರ ಇರಬಹುದು, ಬ್ಲಫ್ ಇರಬಹುದು, ಮತ್ತೆ ಗಗನ ಚುಕ್ಕಿ, ಬರ ಚುಕ್ಕಿ ಮತ್ತೆ ಅಲ್ಲಿರತಕ್ಕಂಥ ದರ್ಗಾ ಹಾಗೂ ಬಹಳ ಇತಿಹಾಸ ಹೊಂದಿರತಕ್ಕಂಥ ರಂಗನಾಥಸ್ವಾಮಿ ದೇವಸ್ಥಾನ ಮತ್ತೆ ಶ್ರೀಚಕ್ರ ಕರ್ನಾಟಕ ರಾಜ್ಯದಲ್ಲಿ ಶ್ರೀಚಕ್ರ ದೇವಸ್ಥಾನ ಎರಡನೇ ದೇವಸ್ಥಾನವಾಗಿದೆ; ಇಂಥ ಒಂದು ಅದ್ಭುತವಾದ ದೇವಸ್ಥಾನಗಳು ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಈ ಎಲ್ಲಾ ಸ್ಥಳಗಳ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ ಇಲ್ಲಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವಂಥ ಕೆಲಸವನ್ನು ತಾವು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ನಮ್ಮಲ್ಲಿ ಒಂದು ಮರಳು ದಂಧೆ ಹೆಚ್ಚಾಗಿ ನಡೆಯುತ್ತಿದೆ. ಇವತ್ತಿನದಿವಸ ಮರಳು ಹರಾಜು ಹಾಕತಕ್ಕಂಥ ಉದ್ದೇಶ ಏನಿದೆ? ಕೇವಲ ಇದರಿಂದ ಹಣ ಬಂದರೆ ಸಾಲದು. 10-15 ಲಕ್ಷ ರೂಪಾಯಿಗಳಿಗೆ ಟೆಂಡರ್ ಮಾಡಿ ಅಲ್ಲಿರತಕ್ಕಂಥ ನಾಲ್ಕು ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಹೇಳುವುದಾದರೆ, ಈಗ ಒಂದು ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾದರೆ ನಮಗೆ 7.5 ಲಕ್ಷ ರೂಪಾಯಿ ಬೇಕಾಗುತ್ತದೆ. ಆದ್ದರಿಂದ, ಅಲ್ಲಿರತಕ್ಕಂಥ ನಾಲ್ಕು ಕಿ.ಮೀ. ರಸ್ತೆಯನ್ನು ಮಾಡಬೇಕಾದರೆ 30 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ. ಈಗ ಆ ರಸ್ತೆಗಳಿಗೆ 30 ಲಕ್ಷ ರೂಪಾಯಿ ಖರ್ಚು ಮಾಡಿ ಅಲ್ಲಿ ಕೇವಲ 10 ಲಕ್ಷ ರೂಪಾಯಿ ಟೆಂಡರ್ ತೆಗೆದುಕೊಂಡು, 30 ಲಕ್ಷ ರೂಪಾಯಿ ರಸ್ತೆಯನ್ನು ಹಾಳು ಮಾಡುವುದಕ್ಕಾಗಿ ಏತಕ್ಕೆ ಅವಕಾಶ ಕೊಡಬೇಕು? ಇದರಿಂದ ಅಲ್ಲಿನ ಪರಿಸರ ಅಸಮತೋಲನ ಕೂಡ ಆಗುತ್ತಿದೆ. ಅಲ್ಲಿ ಮರಳು ಹೇಗೆ ಉತ್ಪತ್ತಿ ಆಗುತ್ತದೆ? ಮಳೆಯಿಂದ ಮರಳು ಸುರಿಯುತ್ತಿದೆಯೇ ಅಥವಾ ಎಲ್ಲಿಂದಾದರೂ ತಂದು ಹಾಕುತ್ತೀರಾ? ಮಣ್ಣಿನಲ್ಲಿರತಕ್ಕಂಥ ಸಣ್ಣ ಸಣ್ಣ ಪಾರ್ಟಿಕಲ್ಸ್ ನೀರಿನಲ್ಲಿ ಕರಗಿ ಹೋಗುತ್ತಿದೆ. ಮತ್ತೆ ಉಳಿಯತಕ್ಕಂಥ ದಪ್ಪ ಕಣಗಳು ಮರಳು ರೂಪದಲ್ಲಿ ಉಳಿದುಕೊಳ್ಳುತ್ತದೆ. ಆ ಮರಳನ್ನು ನಾವು ಪದೇ ಪದೇ ತೆಗೆಯುತ್ತಿದ್ದರೆ ಏನಾಗುತ್ತದೆಂದರೆ, ಅಲ್ಲಿ ಕೊರೆತ ಜಾಸ್ತಿಯಾಗುತ್ತದೆ ಮತ್ತು ಅಲ್ಲಿರತಕ್ಕಂಥ ಊರುಗಳು ಹಾಳಾಗುತ್ತವೆ. ಈಗಾಗಲೇ ಊರುಗಳನ್ನು ಎತ್ತರದ ಪ್ರದೇಶಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಇದೇ ರೀತಿಯ ಕೊರೆತ ಆದರೆ ಅಲ್ಲಿರತಕ್ಕಂಥ ಊರುಗಳನ್ನು ಮತ್ತೆ ಇನ್ನ್ಯಾವ ಪ್ರದೇಶಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದೆ? ಆದ್ದರಿಂದ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ 70 ಎಕರೆ ಜಾಗದಲ್ಲಿ ಮರಳಿಗೆ ಹರಾಜು ಕೊಡಲಾಗಿದೆ. ಮತ್ತೆ ಉಳಿಕೆ ಯಾವುದನ್ನೂ ಕೊಡಬಾರದೆಂದು ನಾನು ತಮ್ಮ ಮುಖಾಂತರ ಆಗ್ರಹ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಬಾಲರಾಜ್‌ರವರೆ, ಇನ್ನು ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಸ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ಇನ್ನು ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಾಲರಾಜ್: ನಿನ್ನೆ ಕೂಡ ನಾನು ಅರಣ್ಯ ಪರಿಸರದ ಬಗ್ಗೆ ಮಾತನಾಡಿದ್ದೇನೆ. ಆದರೆ ನನ್ನ ವ್ಯಾಪ್ತಿಯಲ್ಲಿ ಕೊಳ್ಳೇಗಾಲದ ಮುಡುಗುಂಡಂನ 601ನೇ ಸರ್ವೆ ನಂಬರಿನಲ್ಲಿ ಒಂದು ಕ್ರಷರ್ ಯಂತ್ರವನ್ನು ಸ್ಥಾಪನೆ ಮಾಡಿದ್ದಾರೆ. ಅದನ್ನು ಹಾಕಿ ಜಲ್ಲಿ ಮಾಡುತ್ತಿದ್ದಾರೆ. ಆ ಭಾಗದಲ್ಲಿ ಅದು ಅರಣ್ಯ ಇಲಾಖೆಗೆ ಸೇರಿರುವಂತಹ ಜಾಗವಾಗಿದೆ. ಅರಣ್ಯ ಇಲಾಖೆಯಲ್ಲಿ ಸೇರಿರುವಂತಹ ಜಾಗದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳು ಯಾವ ರೀತಿಯಾಗಿ ಅವರಿಗೆ ಆ ಜಾಗವನ್ನು ಗುತ್ತಿಗೆಗೆ ನೀಡಿದ್ದಾರೆ? ಇದರ ಬಗ್ಗೆ ತಾವು ದಯವಿಟ್ಟು ಆಲೋಚನೆಯನ್ನು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈಗ ಹೇಳಿಬಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಕೊನೆಗೆ ಉತ್ತರವನ್ನು ಕೊಡಲಿ.

ಅಧ್ಯಕ್ಷರು: ಮೊದಲೇ ಸಮಯವಿಲ್ಲ.

ಶ್ರೀ ಎಸ್. ಬಾಲರಾಜು: ಯಾರು ಆ ಗಣಿಗುತ್ತಿಗೆಯನ್ನು ನೀಡಿದ್ದಾರೆ, ಇದು ಗೊತ್ತಿದ್ದೂ ಅವರು ನೀಡಿದ್ದಾರೆ. ಅವರ ಮೇಲೆ ಕಾನೂನು ಚೌಕಟ್ಟಿನ ಮೇರೆಗೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ ಅವರನ್ನು ಬಂಧಿಸಬೇಕು. ಏಕೆಂದರೆ, ಯಾವುದೇ ಅಧಿಕಾರಿ ಗೊತ್ತಿದ್ದೂ ತಪ್ಪು ಮಾಡಿದರೆ ಸರ್ಕಾರ ಅವರನ್ನು ಕ್ಷಮಿಸಕೂಡದು. ಇಲ್ಲಿ ಗೊತ್ತಿದ್ದೂ ತಪ್ಪಾಗಿದೆ. ಆ ತಪ್ಪುಗಳು ಮತ್ತೆ ಆಗದ ರೀತಿಯಲ್ಲಿ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅವರು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿದ್ದರೂ ಕೂಡ 1996ರ ಆದೇಶವನ್ನು ಉಚ್ಚ ನ್ಯಾಯಾಲಯದ ಆದೇಶವನ್ನು ಕೂಡ ಉಲ್ಲಂಘಿಸಿ ಆ ಜಾಗವನ್ನು ಕೊಟ್ಟಿದ್ದಾರೆ. ಅದು 1991ನೇ ಇಸವಿಯಲ್ಲಿ ನೋಟಿಫಿಕೇಷನ್ ಆಗಿರುವಂತಹ ಜಾಗವಾಗಿದೆ. ಅದಕ್ಕೆ ಸಂಪೂರ್ಣವಾಗಿ ಎಲ್ಲಾ ರೀತಿಯ ಸವಲತ್ತುಗಳನ್ನು ಗಣಿ ಇಲಾಖೆಯ ಅಧಿಕಾರಿಗಳು ನೀಡಿದ್ದಾರೆ. ಅದನ್ನು ಘೋಷಣೆ ಮಾಡಿದ್ದಾರೆ, ಮತ್ತು ಅದನ್ನು ಬೆಳೆಸಿದ್ದಾರೆ. ದಯವಿಟ್ಟು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕು. ರಾಜಾರೋಷವಾಗಿ ಆ ಕ್ರಷತ್ ಯಂತ್ರವನ್ನು ಏನು ಹಾಕಿದ್ದಾರೆ, ಅದನ್ನು ಕೂಡಲೇ ಸೀಜ್ ಮಾಡಿ ಕೂಡಲೇ ಅದು ನಿಲ್ಲುವಂತೆ ಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಆಸ್ಪತ್ರೆಯಲ್ಲಿ 9 ಜನ ಡಾಕ್ಟರ್‌ಗಳು ಇದ್ದಾರೆ, ಅದರಲ್ಲಿ ಇಬ್ಬರು ಮಹಿಳಾ ಡಾಕ್ಟರ್‌ಗಳನ್ನು ವರ್ಗಾವಣೆ ಮಾಡಲಾಗಿದೆ. ಇನ್ನು 7 ಜನ ಡಾಕ್ಟರ್‌ಗಳು ಇದ್ದಾರೆ. ಆ 7 ಜನ ಡಾಕ್ಟರ್‌ಗಳಲ್ಲಿ ಒಬ್ಬರು ಮೆಡಿಕಲ್ ಆಫೀಸರ್ ಇದ್ದು ಅವರೇನೂ ಜಾಸ್ತಿ ಕೆಲಸ ಮಾಡುವುದಿಲ್ಲ. ಸುಮ್ಮನೆ ಓಡಾಡಿಕೊಂಡು ಕಾಲವನ್ನು ಕಳೆಯುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಬಾಲರಾಜುರವರೆ, ಇದರ ಬಗ್ಗೆ ಆರೋಗ್ಯ ಮಂತ್ರಿಗಳ ಹತ್ತಿರ ಮಾತನಾಡಿ. ಅದರ ಬಗ್ಗೆ ಈ ಸದನದಲ್ಲಿ ಮಾತನಾಡುವ ಅಗತ್ಯವಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಾಲರಾಜು: ಇದು ನನ್ನೊಬ್ಬನ ಸಮಸ್ಯೆಯಲ್ಲ, ಅನೇಕ ನನ್ನ ಸ್ನೇಹಿತರುಗಳ ಸಮಸ್ಯೆಯಾಗಿದೆ. ನಾನು ಅದನ್ನು ತಮಗೆ ಹೇಳಲೇಬೇಕಾಗುತ್ತದೆ. ಅಲ್ಲಿ ಉಳಿದಂತಹ ಇಬ್ಬರು ಒಂದು ದಿವಸಕ್ಕೆ 1500 ಪೇಷಂಟ್‌ಗಳನ್ನು ನೋಡಬೇಕಾಗುತ್ತದೆ. ಹೇಗೆ ನೋಡುವುದಕ್ಕಾಗುತ್ತದೆ? ದಯವಿಟ್ಟು ಆದಷ್ಟು ಬೇಗನೆ . . .

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಾಲರಾಜು: ಆದಷ್ಟು ಬೇಗನೆ ನಮ್ಮ ಕ್ಷೇತ್ರದ ಸರ್ವ ಅಭಿವೃದ್ಧಿಯನ್ನು ಮಾಡಬೇಕು. ನಮಗೆ ತಾವು ಎಲ್ಲವನ್ನೂ ಕೊಡುತ್ತೀರೆಂಬ ನಂಬಿಕೆಯಿಲ್ಲ. ನನಗೆ ಏನಾಗಿದೆ ಎಂದರೆ, ಕಳೆದ ಸಾರಿಯು ಮಾತನಾಡಿದೆ ಒಂದು ಕೆಲಸಗಳೂ ಆಗಲಿಲ್ಲ, ಈ ಸಾರಿ ಮಾತನಾಡಿದ್ದೇನೆ, ನಾನು ಮಾತನಾಡದಿದ್ದರೆ ನಮ್ಮ ಕ್ಷೇತ್ರದಲ್ಲಿ ಏನು ಅಸೆಂಬ್ಲಿಗೆ ಹೋಗಿ ಕುಳಿತುಕೊಂಡು ಬರುತ್ತಾನೆಂದು ಹೇಳುತ್ತಾರೆನ್ನುವ ಕಾರಣಕ್ಕಾಗಿ ಮಾತನಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ನಾವು ಮಾತನಾಡಿದಕ್ಕಾದರೂ ಒಂದಿಷ್ಟು ಕೆಲಸಗಳನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ, ಒಂದೇ ಒಂದು ವಿಷಯ ಒಳಾಡಳಿತದಲ್ಲಿ ಆಗಿರತಕ್ಕಂತಹ ಒಂದು ಲೋಪವನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ದಯಮಾಡಿ ಬಾಲರಾಜ್‌ರವರೇ, ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಾಲರಾಜು: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಷಯ ಹೇಳುತ್ತೇನೆ, ಏಕೆಂದರೆ ಎಲ್ಲರೂ ಇರುವಾಗ ಹೇಳಿದರೆ ನನಗೆ ಅನುಕೂಲವಾಗುತ್ತದೆ. ನಂಜನಗೂಡಿನಲ್ಲಿ ಕಳೆದ 3–4 ವರ್ಷಗಳ ಹಿಂದೆ 2001ನೇ ಇಸವಿಯಲ್ಲಿ ಯಾರೋ ಒಬ್ಬ ರಾಜಕುಮಾರ್ ಎಂಬ ಕುಖ್ಯಾತ ರೌಡಿ ಇದ್ದ, ಆ ರೌಡಿಯನ್ನು ಬಂಧಿಸುವ ಬಗ್ಗೆ ತಮಿಳುನಾಡಿನಿಂದ ಪೋಲೀಸ್‌ನವರು ಬಂದಿದ್ದರು. ಆ ಸಂದರ್ಭದಲ್ಲಿ ನಮ್ಮ ತಮಿಳುನಾಡು ಪೋಲೀಸ್‌ನವರು ಶೂಟ್ ಮಾಡಿದರು. ಆಗ ಸತ್ತವನು ನನ್ನ ಕ್ಷೇತ್ರದ ಒಬ್ಬ ಅಮಾಯಕ ಹುಡುಗ. ಅವರಿಗೆ ಅವನೊಬ್ಬನೇ ಮಗ, ಅವರಿಗೆ ಇನ್ಯಾರೂ ದಿಕ್ಕಿಲ್ಲ. ಅಂತಹವರು ಸತ್ತು ಆಗಲೇ 4 ವರ್ಷಗಳು ಮುಗಿದಿದೆ. ಅವನಿಗೆ ಜಿಲ್ಲಾಧಿಕಾರಿಗಳು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದರು. ಆದರೆ ಇದುವರೆಗೂ ಆ ಪರಿಹಾರಧನ ಬಿಡುಗಡೆಯಾಗಿಲ್ಲ. ಕಛೇರಿಯಿಂದ 7–8 ಪತ್ರಗಳು ಮೇಲಿನಿಂದ ಕೆಳಗಡೆ ಓಡಾಡಿದೆ. ಇದುವರೆಗೂ ಹಣ ಕೊಟ್ಟಿರುವುದಿಲ್ಲ. ಇದು ಏನು ದುರಂತ ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕೂಡಲೇ ಯಾರು ಇದರ ಹಿಂದೆ ಇದ್ದಾರೆ, ಅವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವ ದಿಕ್ಕಿನಲ್ಲಿ ತಾವು ಸೂಕ್ತ ಕ್ರಮ ವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ತಮಗೆ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡಲಾಗಿದೆ. ಈಗಾಗಲೇ 4–15 ಗಂಟೆಯಾಯಿತು. 15 ಜನ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ವೈಜನಾಥ ಪಾಟೀಲ್: ನಮಗೆ ಭಾಷಣವನ್ನು ಕೇಳುವುದಕ್ಕೆ ಜನರು ನಮ್ಮನ್ನು ಕಳುಹಿಸಿಲ್ಲ. ಮಾನ್ಯ ಅಧ್ಯಕ್ಷರೆ, ...

(ಮಾನ್ಯ ವೈಜನಾಥ ಪಾಟೀಲ್‌ರವರು ಸದನದ ಬಾವಿಗೆ ಬಂದರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಹೀಗೆ ಮಾಡಿ.

ಅಧ್ಯಕ್ಷರು: ಅವರಿಗೆ ಇನ್ನೊಂದು ಸಾರಿ ಅವಕಾಶವನ್ನು ಕೊಡುತ್ತೇನೆ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದರೆ ಹೇಗೆ?

ಶ್ರೀ ಬಿ.ಆರ್. ಪಾಟೀಲ್: ಆಡಳಿತ ಪಾರ್ಟಿಯವರಿಗೆ ಅವಕಾಶ ಇಲ್ಲವಾ?

ಅಧ್ಯಕ್ಷರು: ಆಡಳಿತ ಪಾರ್ಟಿಯವರು, ಮಂತ್ರಿಗಳ ಹತ್ತಿರ ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಹೀಗೆ ಮಾಡಿ ಸಾರ್.

ಅಧ್ಯಕ್ಷರು: ಈಗ ಒಂದು ಸ್ವಲ್ಪಹೊತ್ತು ಕುಳಿತುಕೊಳ್ಳಿ. ರೆಸ್ಟ್ ತೆಗೆದುಕೊಳ್ಳಿ.

(ಶ್ರೀ ವೈಜನಾಥ ಪಾಟೀಲ್‌ರವರು ಸದನದ ಬಾವಿಯಿಂದಲೇ ಮಾತನಾಡುತ್ತಿದ್ದರು.)

ಅಧ್ಯಕ್ಷರು: ವೈಜನಾಥ್ ಪಾಟೀಲ್‌ರವರೆ, ಇನ್ನೂ 15 ಜನ ಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ. ಹೇಗೆ ಮಾಡುವುದು ತಾವು ಹೇಳಿ? ನಿಮ್ಮ ಸಮಸ್ಯೆಗಳು ಇದ್ದರೆ ನಾನು ಏನು ಮಾಡುವುದು? ನಿಮಗೆ ಎಷ್ಟೋ ಸಾರಿ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಮುಂದೆ ಅವಕಾಶವನ್ನು ಕೊಡುತ್ತೇನೆ, ತಾವು ನಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ವೈಜನಾಥ್ ಪಾಟೀಲ್‌ರವರು ಹಿರಿಯ ಸದಸ್ಯರಾಗಿದ್ದಾರೆ.

ಅಧ್ಯಕ್ಷರು: ನಾನು ಅದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಈಗ ಏನು ಮಾಡುವುದು? 4 ಗಂಟೆಗೆ ಉತ್ತರ ಪ್ರಾರಂಭಿಸಬೇಕೆಂದರೂ 4–15 ಗಂಟೆಯಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ: ನಮಗೆ ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶವನ್ನು ಮಾಡಿಕೊಡಿ. ನಾನು ತಮ್ಮಲ್ಲಿ ಇಷ್ಟೆ ವಿನಂತಿ ಮಾಡುತ್ತೇನೆ. ನೀವು 4–00 ಅಥವಾ 4–30 ಅಥವಾ 4–45 ಗಂಟೆಗೆ ಉತ್ತರ ಶುರುಮಾಡಿಸಿ, ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ. ಅರ್ಧ ಗಂಟೆಗಳ ಕಾಲ ತಡವಾಗಿಂಯಾದರೂ ಕುಳಿತು ಇದನ್ನು ಮುಗಿಸಿ ಕೊಡುತ್ತೇವೆ. ಈಗ ಮಾನ್ಯ ವೈಜನಾಥ್‌ಪಾಟೀಲ್‌ರವರು ಸೇರಿ ಉಳಿದವರಿಗೆ 3–4 ಜನರಿಗೆ 5–5 ಅಥವಾ 10–10 ನಿಮಿಷ ಕಾಲಾವಕಾಶವನ್ನು ಕೊಡಿ. ನಾಳೆ ನಾನು 7 ರಿಂದ 8 ನಿಮಿಷಕ್ಕಿಂತ ಹೆಚ್ಚು ಮಾತನಾಡುವುದಿಲ್ಲ. ನಾನು ಒಂದು ನಿಮಿಷ ಪೂರ್ತಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ತಾವು ಕೇಳಿ, 15 ಜನ ಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲಿದ್ದಾರೆ ಸಾರ್ ಮಂತ್ರಿಗಳು?

ಅಧ್ಯಕ್ಷರು: ಮಂತ್ರಿಗಳು ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಯ್ಯೋ ದೇವರೆ, ನಾನು ನಿಮಗೆ ಒಂದು ಮಾತನ್ನು ಹೇಳಲೇ?

ಅಧ್ಯಕ್ಷರು: ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಮೊದಲು ತಮ್ಮ ಜಾಗಕ್ಕೆ ಹೋಗಿ.

(ಮಾನ್ಯ ವೈಜನಾಥ ಪಾಟೀಲ್‌ರವರು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರಿಗೇನಾದರೂ ಸ್ವಾಭಿಮಾನವಿದ್ದರೆ ನಾಚಿಕೆ ಇಲ್ಲದೆ ತಲೆತಗ್ಗಿಸುವಂತಹ ಸಂಗತಿ, ಫ್ರಂಟ್ ಬೆಂಚಿನಲ್ಲಿ ಒಬ್ಬ ಮಂತ್ರಿ ಇಲ್ಲ. ಇದು ಯಾರಿಗೂ ಶೋಭೆ ತರುವಂತಹ ವಿಷಯವಲ್ಲ. ನಾನು ಇಷ್ಟೇ ಹೇಳುತ್ತೇನೆ. ನಮ್ಮ ಡ್ಯೂಟಿಯನ್ನು ನಾವು ಮಾಡಿದ್ದೇವೆ, ನಮಗೆ ಅವಕಾಶವನ್ನು ತಾವು ಕೊಟ್ಟಿದ್ದೀರಿ, 4–45 ಗಂಟೆಯವರೆಗೆ ವೈಜನಾಥ್‌ಪಾಟೀಲ್‌ರವರು ಹಾಗೂ ಇತರರು ಮಾತನಾಡಲಿ.

ಅಧ್ಯಕ್ಷರು: ಎಷ್ಟು ಗಂಟೆಗಳ ಕಾಲ ಕೊಡಬೇಕೆಂದು ತಾವು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: 4–45 ಗಂಟೆಗೆ ರಿಪ್ಲೈ ಶುರುಮಾಡಿಸಿ.

ಅಧ್ಯಕ್ಷರು: ಈಗ 4–15 ಗಂಟೆಯಾಯಿತು. ವೈಜನಾಥ್‌ಪಾಟೀಲ್‌ರವರೆ, 5–6 ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಬೇಕು.

ಶ್ರೀ ಬಿ.ಆರ್. ಪಾಟೀಲ್: ವೈಜನಾಥ್‌ಪಾಟೀಲ್‌ರವರು ಇಂಡಿಪೆಂಡೆಂಟ್, ನಾವು ಆಡಳಿತ ಪಕ್ಷದವರು ಯಾರೂ ಕೂಡ ಹೆಚ್ಚಿಗೆ ಮಾತನಾಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: 5–00 ಗಂಟೆಗೆ ರಿಪ್ಲೈ ಶುರುಮಾಡಿಸಿ ಸಾರ್.

ಅಧ್ಯಕ್ಷರು: 5 ಗಂಟೆಗೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಕುಳಿತುಕೊಳ್ಳುತ್ತೇವಲ್ಲಾ ಸಾರ್. ನಾವು ನಿಮಗೆ ಕೋ–ಆಪರೇಟ್ ಮಾಡುತ್ತೇವೆ.

ಅಧ್ಯಕ್ಷರು: ಈಗ 15 ಜನ ಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆಯಲ್ಲಾ, ಹೇಗೆ ಮಾಡುವುದು ನೀವೇ ಹೇಳಿ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, . . .

ಶ್ರೀ ಬಿ.ಎಸ್. ಯಡಿಯೂರಪ್ಪ: ಬೇಕಾದರೆ ತಾವು ನೋಡಿ ಯಾರೂ ಸಹ ಉತ್ತರವನ್ನು ಕೊಡುವುದಿಲ್ಲ.

ಶ್ರೀ ಬಸವರಾಜು: ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು: ಮಾನ್ಯ ಬಸವರಾಜುರವರೆ, ತಾವು ಕುಳಿತುಕೊಳ್ಳಿ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ, ಇನ್ನೆಷ್ಟು ಜನರಿಗೆ ಅವಕಾಶ ಕೊಡುವುದಕ್ಕೆ ಆಗುತ್ತದೆ? ನಿಮ್ಮ ಮುಂದಿನವರು ಮಾತನಾಡಲಿಲ್ಲವೇ ಗಂಟೆಗಟ್ಟಲೆ, . . .

ಶ್ರೀ ಬಿ.ಎಸ್. ಯಡಿಯೂರಪ್ಪ: ಬಸವರಾಜುರವರೆ, ತಾವು ಕುಳಿತುಕೊಳ್ಳಿ, ಅವಕಾಶವನ್ನು ಕೊಡುತ್ತಾರೆ.

ಅಧ್ಯಕ್ಷರು: ಸುಮ್ಮನೆ ಎದ್ದುನಿಂತುಕೊಂಡು ಮಾತನಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ: ನಮ್ಮ ಪ್ರಕಾಶ್ ಖಂಡ್ರೆಯವರಿಗೆ 5 ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್(ಚಿಂಚೋಳಿ): ಮಾನ್ಯ ಅಧ್ಯಕ್ಷರೆ, . . .

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನಾವು ಏತಕ್ಕೆ ಮಾತನಾಡಬಾರದು?

ಅಧ್ಯಕ್ಷರು: ಆಯಿತು ತಾವು ಕುಳಿತುಕೊಳ್ಳಿ, ನಾನು ವೈಜನಾಥ್‌ಪಾಟೀಲ್‌ರವರ ಹೆಸರನ್ನು ಕರೆದಿದ್ದೇನೆ.

ಶ್ರೀ ವೈಜನಾಥ ಪಾಟೀಲ್(ಚಿಂಚೋಳಿ): ಮಾನ್ಯ ಅಧ್ಯಕ್ಷರೆ, ಇಲ್ಲಿ ಈ ಬೇಡಿಕೆಗಳ ಪಟ್ಟಿ ಇದೆ, ಆದರೆ ನಾನು ಕೆಲವು ವಿಷಯಗಳನ್ನು ಮಾತ್ರ ಮಾತನಾಡುತ್ತೇನೆ. ಬೇರೆ ಬೇರೆ ಅನೇಕ ವಿಷಯಗಳು ಪಟ್ಟಿಯಲ್ಲಿ ಇವೆ. ವಿಶೇಷವಾಗಿ ನೀರಾವರಿ ಬಗ್ಗೆ ಹೇಳುವುದಾದರೆ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕಾವೇರಿ ಮತ್ತು ಕೃಷ್ಣ ಈ ಎರಡು ನೀರಾವರಿ ಯೋಜನೆಗಳು ಇವೆ. ಇದರ ಮೇಲೆ ಕಡೆ ಆಂಧ್ರದವರು ಮತ್ತು ಮಹಾರಾಷ್ಟ್ರದವರಿಂದ ಗುಲ್ಬರ್ಗಾ, ಬಿಜಾಪುರ ವಿಭಾಗಕ್ಕೆ

ಎಲ್ಲಿ ಕೃಷ್ಣ ಬೇಸಿನ್ ನದಿಗಳು ಹರಿಯುತ್ತವೆ ಅಲ್ಲಿ ದೊಡ್ಡ ಅನ್ಯಾಯವಾಗುತ್ತಿದೆ. ಮತ್ತೊಂದು ಕಡೆ ಕಾವೇರಿ ನೀರಿನ ಬಗ್ಗೆ ತಮಿಳುನಾಡಿನವರಿಂದ ಅನ್ಯಾಯವಾಗುತ್ತಿದೆ. ಆದರೆ ಇಷ್ಟು ವರ್ಷಗಳಲ್ಲಿ ಬಹಳಷ್ಟು ಎಲ್ಲಾ ಸರ್ಕಾರಗಳು ನಮ್ಮ ಇಂಟರೆಸ್ಟ್ ಕಾಪಾಡುವುದರಲ್ಲಿ ಎಲ್ಲರೂ ಕೂಡ ವಿಫಲರಾಗಿದ್ದಾರೆ. ಕೃಷ್ಣ ಬೇಸಿನ್‌ನಲ್ಲಿ ಮಹಾರಾಷ್ಟ್ರ ಏರಿಯಾ ಬರುವುದು 26.8% ಆಂಧ್ರ 29.40% ಕರ್ನಾಟಕದ್ದು ಎಲ್ಲಕ್ಕಿಂತ ಹೆಚ್ಚು ಏರಿಯಾ ಇದೆ. 43.80% ಇದು ಕರ್ನಾಟಕದ ಏರಿಯಾಗೆ ಬರುತ್ತದೆ. ಆದರೆ ಬಚಾವತ್ ಟ್ರಿಬ್ಯುನಲ್ ಪ್ರಕಾರ ನೀರು ಸಿಕ್ಕಿದ್ದು ಆಂಧ್ರಕ್ಕೆ 800 ಫೀಟ್ ಟಿಎಂಸಿ ಕರ್ನಾಟಕ 733, ಮಹಾರಾಷ್ಟ್ರ 564; ಆಗ ಅನ್ಯಾಯವಾಯಿತು. ಆ ಕಾಲದ ರಾಜಕಾರಣಿಗಳಾಗಲಿ ಸರ್ಕಾರವಾಗಲಿ ಅಥವಾ ಅಧಿಕಾರಿಗಳಾಗಲಿ ಯಾರೂ ಕೂಡ ಸರಿಯಾಗಿ ವಾದವನ್ನು ಮಾಡಿಲ್ಲ. ನಮಗೆ ಆಗ ಅನ್ಯಾಯವಾಗಿದೆ. ಅನಂತರ ಸತತವಾಗಿ ಆಂಧ್ರದವರು ಯೋಜನೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅವರು 800 ಫೀಟ್ ಟಿಎಂಸಿಗೆ ಸಂಬಂಧಪಟ್ಟಂತೆ ಎಲ್ಲಾ ಯೋಜನೆಗಳನ್ನು ಕಂಪ್ಲೀಟ್ ಮಾಡಿಕೊಂಡಿದ್ದಾರೆ. ಈಗ ಹೊಸದಾಗಿ ಮಾಡಿಕೊಳ್ಳುತ್ತಿದ್ದಾರೆ. ಬಚಾವತ್ ಅವಾರ್ಡ್ ಪ್ರಕಾರ 'ಎ' ಸ್ಕೀಂನಲ್ಲಿ ಎಷ್ಟು ನೀರು ನಮಗೆ ಹಂಚಿಕೆಯಾಗಿತ್ತು, ಅದನ್ನು ನಾವು ಪೂರ್ಣ ಬಳಕೆ ಮಾಡಿಕೊಂಡಿರುವುದಿಲ್ಲ. ನಮ್ಮ ಸರ್ಕಾರದಿಂದ ಅದನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಯಾವುದೇ ಸರ್ಕಾರಗಳಿದ್ದರೂ ಕೂಡ ಆಗಿಲ್ಲ. ಆದರೆ ಒಂದು ಕಡೆ ಆಂಧ್ರದವರು ಅನೇಕ ನೀರಾವರಿ ಯೋಜನೆಗಳು ಅದರಲ್ಲಿ ತೆಲುಗುಗಂಗಾ ಎಂದು 150 ಟಿಎಂಸಿ ಫೀಡರ್ ಒಂದು ಯೋಜನೆಯನ್ನು ಕಂಪ್ಲೀಟ್ ಮಾಡಿದ್ದಾರೆ. ಶ್ರೀಶೈಲಂ ಲಿಫ್ಟ್ ಬ್ಯಾಂಕ್ ಕೆನಾಲ್; ಅದೇ ತರಹವಾಗಿ ನಾಗಾರ್ಜುನ ಸಾಗರ; ಇಂತಹ ಅನೇಕ ಇಲ್ಲೀಗಲ್ ಪ್ರಾಜೆಕ್ಟ್‌ಗಳನ್ನು ಅವರು ಕಟ್ಟಿಕೊಳ್ಳುತ್ತಿದ್ದಾರೆ. ಇನ್ನೂ ಹೊಸದಾಗಿ ಅನೇಕ ಯೋಜನೆಗಳನ್ನು ಅವರು ಇತ್ತೀಚೆಗೆ ಹಾಕಿಕೊಂಡಿದ್ದಾರೆ. ಒಂದು ಕಡೆ ಹೀಗಾದರೆ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಿಂದ ಭೀಮಾನದಿ ಗುಲ್ಬರ್ಗಾ, ಬಿಜಾಪುರ, ರಾಯಚೂರು ಈ ಜಿಲ್ಲೆಗಳಿಂದ ಹೋಗಿ ಕೃಷ್ಣ ನದಿಗೆ ಹರಿಯುತ್ತದೆ. ಅಲ್ಲಿ ಅಡ್ಡಲಾಗಿ ಮಹಾರಾಷ್ಟ್ರದವರು ಒಂದು ಗೋಡೆಯನ್ನು ಕಟ್ಟಿದ್ದಾರೆ. ಎಷ್ಟೋ ಡ್ಯಾಂಗಳನ್ನು ಮತ್ತೊಂದನ್ನು ಕಟ್ಟಿಕೊಳ್ಳುತ್ತಾರೆ, ಅದು ಹಾಗಿಲ್ಲ, ಸಂಪೂರ್ಣ ನದಿಗೆ ನದಿಯನ್ನೇ ಡೈವರ್ಟ್ ಮಾಡಿದ್ದಾರೆ. ಭೀಮಾ ನದಿಗೆ ಡೈವರ್ಟ್ ಮಾಡಿ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಲ್ಲಿರುವ ಸೀನಾ ನದಿಗೆ ಜೋಡಿಸಿ ಸುರಂಗದ ಮುಖಾಂತರ ಅದನ್ನು ತಿರುಗಿಸಿ ಅಲ್ಲಿ ಅನೇಕ ಏತ ನೀರಾವರಿ ಯೋಜನೆಗಳನ್ನು ಅವರು ಮಾಡಿಕೊಂಡಿದ್ದಾರೆ. ಮಳೆಗಾಲದಲ್ಲೂ ಕೂಡ ನಮ್ಮ ದನಕರುಗಳಿಗಾಗಲಿ, ಜನರಿಗಾಗಲಿ, ಕುಡಿಯುವುದಕ್ಕೆ ಒಂದು ಹನಿ ನೀರು ಕೂಡ ಮೇಲಿನಿಂದ ಅಂದರೆ ಮಹಾರಾಷ್ಟ್ರದಿಂದ ಬರುವುದಿಲ್ಲ. ಮಳೆಗಾಲದಲ್ಲಿ ಏನು ಕೆಳಗಡೆಯಿಂದ ನೀರು ಬರುತ್ತದೆಯೋ ಅಷ್ಟೇ ನಮ್ಮಗೆ ಸಿಗುತ್ತದೆ. ನಮ್ಮ ಸರ್ಕಾರದವರು ಈ ಕಡೆ ಅನೇಕ ಏತನೀರಾವರಿ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಅದು ಕೆಳಗಡೆಯಿಂದ ಎಷ್ಟು ಮಳೆಯ ನೀರು ಬರುತ್ತದೆಯೋ ಅಷ್ಟೇ ಉಪಯೋಗವಾಗುತ್ತದೆ. ಮೇಲಿನಿಂದ ಏನೂ ನೀರು ಬರುವುದಿಲ್ಲ. ಆದರೆ ಸರ್ಕಾರದವರು ನಮ್ಮ ಇಂಟರೆಸ್ಟ್‌ನ್ನು ಪ್ರೊಟೆಕ್ಟ್ ಮಾಡುವುದರಲ್ಲಿ ವಿಫಲರಾಗಿದ್ದಾರೆ. ನಮ್ಮಲ್ಲಿ ಆಲಮಟ್ಟಿ 524 ಅಡಿ ಎತ್ತರ ಮಾಡುವಂತಹ ಒಂದು ಗೇಟ್ ಇತ್ತು, ಆ ಗೇಟನ್ನು ಕೇಂದ್ರ ಸರ್ಕಾರದ ಪರ್ಮಿಶನ್‌ನಿಂದ ತಯಾರು ಮಾಡಿರುವುದು. ಎಷ್ಟೋ ಮೆಟೇರಿಯಲ್ಸ್ ಅನ್ನು ಹೊರಗಿನಿಂದ ಅಂದರೆ ಪರದೇಶದಿಂದ ಸರ್ಕಾರದವರು ಲೈಸೆನ್ಸ್ ಕೊಟ್ಟ ಮೇಲೆ ತರಿಸಿದ್ದೆವು, ಆಂಧ್ರದವರು ಸುಪ್ರೀಂ

ಕೋರ್ಟಿನಲ್ಲಿ ಕೇಸ್‌ನ್ನು ಹಾಕಿದರು. ಕೇಂದ್ರ ಸರ್ಕಾರದ ಒಂದು ಪಾರ್ಷಿಯಲ್ ಅಟ್ಟಿಟ್ಯೂಡ್, ಆಂಧ್ರ ಸರ್ಕಾರದ ಕುಟಿಲತೆ, ನಮ್ಮ ಸರ್ಕಾರದ ನಿಷ್ಕ್ರಿಯತೆಯಿಂದ ಅಲ್ಲಿ ನಾವು ಕೇಸನ್ನು ಸೋತು 524 ಅಡಿ ಎತ್ತರದ ಬದಲಾಗಿ 519 ಅಡಿಗೆ ಇಳಿಸಿದರು. ಆ ಗೇಟನ್ನು ಕಂಪ್ಲೀಟ್ ಮಾಡಿದರೆ ಮಾತ್ರ ಎಲೆಕ್ಟ್ರಿಸಿಟಿ ಜನರೇಟ್ ಆಗುತ್ತಿತ್ತು. ಅಲ್ಲಿಯ ಏತ ನೀರಾವರಿ ಯೋಜನೆಗಳು ಮುಡವಾಳ ಮೊದಲಾದವುಗಳನ್ನು ಏನು ಹಾಕಿಕೊಳ್ಳುತ್ತಿದ್ದಾರೆ, ಅದಕ್ಕಾಗಿ ಎಲೆಕ್ಟ್ರಿಸಿಟಿ ಜನರೇಟ್ ಆಗಬೇಕಾಗುತ್ತದೆ. ಅದು ಆಗುವುದಿಲ್ಲ, ಮುಂದೆ ಅದರಿಂದ ಉಪಯೋಗವಾಗುವುದಿಲ್ಲ. ಏನೋ ಜನರಿಗೆ ಕಣ್ಣು ಒರೆಸುವ ಸಲುವಾಗಿ ಇವತ್ತು ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಇಂತಹ ಅನ್ಯಾಯ ನಮ್ಮ ಮೇಲೆ ಆಗುತ್ತಿದೆ. ಒಂದು ಕಡೆ ಮಹಾರಾಷ್ಟ್ರದವರು ಮಾಡುತ್ತಾರೆ, ಮತ್ತೊಂದು ಕಡೆ ಆಂಧ್ರದವರು ಮಾಡುತ್ತಾರೆ. ಮತ್ತೊಂದು ಕಡೆ ತಮಿಳುನಾಡಿನವರು ಮಾಡುತ್ತಾರೆ. ಆದರೆ ಯಾವುದೇ ಸರ್ಕಾರಗಳು ಬರೀ ಕೇಂದ್ರ ಸರ್ಕಾರದವರನ್ನು ಖುಷಿಪಡಿಸುವುದಕ್ಕೆ ನೆರೆರಾಜ್ಯಗಳ ಸರ್ಕಾರಗಳನ್ನು ಖುಷಿಪಡಿಸುವುದಕ್ಕೆ ನಮ್ಮ ರಾಜನೀತಿಯವರು ಕಾಲವನ್ನು ಕಳೆಯುತ್ತಿದ್ದಾರೆ. ಆಗಲೇ ನಾವು ಬಚಾವತ್ ಆಯೋಗದ ಬಗ್ಗೆ ಫೈಟ್ ಮಾಡಬೇಕಾಗಿತ್ತು. ಅದರ ಬಗ್ಗೆ ವಿರೋಧವನ್ನು ಮಾಡಬೇಕಾಗಿತ್ತು. ಆಗ ಮಾಡಲಿಲ್ಲ, ಇವತ್ತೂ ಕೂಡ ಯಾವ ರೀತಿಯಾಗಿ ಲೀಗಲ್ ಆಗಿ ಫೈಟ್ ಮಾಡುತ್ತಾರೋ ಗೊತ್ತಿಲ್ಲ. ಏಕೆಂದರೆ, ಕೇಂದ್ರಸರ್ಕಾರ ನಮ್ಮ ವಿರುದ್ಧ ಪ್ರತಿಯೊಂದು ಸರ್ಕಾರಗಳು ಮಹಾಜನ್ ವರದಿಯೇ ಇರಲಿ, ಅದು ಬಚಾವತ್ ಟ್ರಿಬ್ಯೂನಲ್ ಇರಲಿ, ಮತ್ಯಾವುದೇ ಇರಲಿ, ಪ್ರತಿಯೊಬ್ಬರ ತಲೆಯನ್ನು ಒಡೆಯುತ್ತಾರೆ, ನಮ್ಮವರು ಖುಷಿ ಆಗಿಬರುತ್ತಾರೆ, ಈ ರೀತಿಯಾಗಿ ನೀರಾವರಿ ಯೋಜನೆಗಳಲ್ಲಿ ನಮಗೆ ಅನೇಕ ರೀತಿಯಿಂದ ಅನ್ಯಾಯಗಳು ಆಗುತಿದೆ. 'ಎ' ಸ್ಕೀಂ ನೀರನ್ನು ನಾವು ಕಂಪ್ಲೀಟ್ ಬಳಸಿಕೊಂಡಿಲ್ಲ, ಈಗ 'ಬಿ' ಸ್ಕೀಂ ಗೋಸ್ಕರ ಮತ್ತೊಂದು ಟ್ರಿಬ್ಯೂನಲ್ ಕುಳಿತಿದೆ. ಆ ಟ್ರಿಬ್ಯೂನಲ್ ಬಗ್ಗೆ ನಮ್ಮ ಸರ್ಕಾರದವರು ಯಾವ ರೀತಿಯಾಗಿ ಫೈಟ್ ಮಾಡುತ್ತಿದ್ದಾರೆ, ಇಂಟರೆಸ್ಟ್ ಪ್ರೊಟೆಕ್ಟ್ ಯಾವ ರೀತಿಯಾಗಿ ಮಾಡುತ್ತಿದ್ದಾರೆ, ಗೊತ್ತಿಲ್ಲ. ಈಗ ಪ್ರತಿಯೊಂದು ಮಾತು ಬಂದರೆ ಕೇಂದ್ರ ಸರ್ಕಾರಕ್ಕೆ ಡೆಲಿಗೇಷನ್ ಹೋಗುವುದು, ಮೆಮೋರ್‍ಯಾಂಡಮ್‌ನ್ನು ಕೊಟ್ಟು ಬರುವುದು ನಡೆಯುತ್ತಿದೆ. ಅವರು ಹೇಳಿಬಿಡುತ್ತಾರೆ, ಇಲ್ಲ ನಾವು ನೋಡುತ್ತೇವೆ, ಅಂದಕೂಡಲೇ ಇವರುಗಳು ಖುಷಿಯಾಗಿ ಬರುತ್ತಾರೆ. ಪ್ರತಿಯೊಂದು ವಿಷಯಕ್ಕೆ ಇವರು ಡೆಲಿಗೇಷನ್ ಹೋಗಿ ಬಂದರಾಯಿತು. ನಮ್ಮ ಡ್ಯೂಟಿ ಮುಗಿಯಿತು ಎಂದು ಹೇಳುತ್ತಾರೆ. ನೀರಾವರಿ ಸಲುವಾಗಿ ಆಂಧ್ರದವರು ಏನು ಅನ್ಯಾಯವಾಗಿ ಇಲ್ಲೀಗಲ್ ಪ್ರಾಜೆಕ್ಟ್‌ಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಅದರ ಸಲುವಾಗಿಯೂ ಸಹ ಡೆಲಿಗೇಷನ್ ಹೋಯಿತು. ಪ್ರಧಾನಮಂತ್ರಿಗಳಿಗೆ ಒಂದು ಪತ್ರವನ್ನು ಬರೆದರು. ಆಂಧ್ರ ಸರ್ಕಾರಕ್ಕೂ ಅಥವಾ ನೀರಾವರಿ ಮಂತ್ರಿಗಳಿಗೂ ಸಹ ಇವರ ಮೇಲೆ ಅನ್ಯಾಯ ಆಗಬಾರದು ಅಂತ ಬರೆದರು ಎಂದು ಅದರ ಮೇಲೆ ನಮ್ಮ ಸರ್ಕಾರದವರು ಖುಷಿಯಾಗಿ ಸ್ಟೇಟ್‌ಮೆಂಟ್ ಮೇಲೆ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಇಂಪ್ಲಿಮೆಂಟ್ ಎಲ್ಲಿಯತನಕ ಆಗಿದೆ? ಪ್ರಧಾನಮಂತ್ರಿಗಳು ಪತ್ರ ಬರೆದ ಮೇಲೆ ಅವರು ಯೋಜನೆಗಳನ್ನು ತಡೆದಿದ್ದಾರೋ ಇಲ್ಲವೋ ಅದು ಮುಖ್ಯವಾಗಿದೆ. ನೀರು ಬಿಡುವವರು ಮೇಲಿನವರು ನಾವು ಇದ್ದೇವೆಂಬುದು ತಪ್ಪು ಕಲ್ಪನೆ, ಬಚಾವತ್ ಕಾಲಕ್ಕೂ ಕೂಡ ಅದೇ ಆಯಿತು. ಕೊಯ್ನಾ ನದಿ ಯೋಜನೆಯಿಂದ ನಮಗೆ ನೀರು ಬರಬೇಕಾಗಿತ್ತು. 1958ರಲ್ಲಿ ಮಹಾರಾಷ್ಟ್ರ ಸರ್ಕಾರ ಕರ್ನಾಟಕ ಸರ್ಕಾರಕ್ಕೆ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಡಿ. ಜತ್ತಿಯವರಿಗೆ ಒಂದು ಪತ್ರವನ್ನು

ಬರೆದರು. ರಾಜ್ಯ ಪುನರ್‌ವಿಂಗಡಣೆಗಿಂದ ಮೊದಲು ಕೊಯ್ನಾ ಯೋಜನೆ ಪ್ರಾರಂಭವಾಗಿದ್ದು 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಯಿತು. ಆನಂತರ ಅಂದರೆ ಎರಡು ವರ್ಷಗಳ ನಂತರ 1958ರಲ್ಲಿ ಆ ಯೋಜನೆ ಪೂರ್ಣವಾಯಿತು. ಅದು ಆದ ಮೇಲೆ ಮಹಾರಾಷ್ಟ್ರ ಸರ್ಕಾರದವರು ಪತ್ರ ಬರೆದರು. ಎರಡು ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರಕ್ಕೆ ನೀವು ಕೊಟ್ಟರೆ, ನಿಮ್ಮ ಪಾಲಿನ ನೀರು ಏನಿದೆ, ನಿಮ್ಮ ಷೇರನ್ನು ನಿಮಗೆ ಕೊಡುತ್ತೇವೆಂದು ಪತ್ರ ಬರೆದರು. ಅಂದಿನ ಮುಖ್ಯಮಂತ್ರಿಗಳು ದುರ್ದೈವದಿಂದ ಉತ್ತರದಲ್ಲಿ ನಮ್ಮ ಯೋಜನೆಗಳನ್ನು ಮಾಡುತ್ತೇವೆಂದು ಹೇಳಿದರು. ಸರ್ಕಾರದಲ್ಲಿ ಆ ಬಗ್ಗೆ ರೆಕಾರ್ಡ್ ಇದೆ. ಆ ವಿಷನ್ನೇ ಇಲ್ಲ. ಇವತ್ತು 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಬಿಜಾಪುರ ಜಿಲ್ಲೆ ಬರಗಾಲ ರಹಿತವಾಗಿರುತ್ತಿತ್ತು. ಅದನ್ನು ಕೊಟ್ಟಿರುವುದಿಲ್ಲ. 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಗೆ ಏನೂ ಆಗುತ್ತಿರಲಿಲ್ಲ. ಶ್ರೀಮಾನ್ ಜತ್ತಿಯವರು, ಪತ್ರವನ್ನು ಅವರೇ ಬರೆದಿದ್ದಾರೆ. ಈ ತರಹ ಒಂದಲ್ಲ ಒಂದು ಜವಾಬ್ದಾರಿ ಸ್ಥಾನದಲ್ಲಿದ್ದವರು ಸರಿಯಾಗಿ ಅಧ್ಯಯನ ಮಾಡದೆ ಇರುವ ಕಾರಣಕ್ಕಾಗಿ ಅಧಿಕಾರಿಗಳು ಹಾಗೂ ಎಕ್ಸ್‌ಪರ್ಟ್ಸ್ ಅವರಿಗೆ ಸರಿಯಾಗಿ ಅಡ್ವೈಸ್ ಕೊಡದೆ ಇರುವ ಕಾರಣಕ್ಕಾಗಿ ಈ ರೀತಿಯಲ್ಲಿ ನಾವು ಒಂದಲ್ಲ ಒಂದು ಅನ್ಯಾಯಕ್ಕೆ ಒಳಗಾಗುತ್ತಿದ್ದೇವೆ. ಈಗ ನಮ್ಮ ಸರ್ಕಾರದವರು ನಮ್ಮ ಯೋಜನೆಗಳನ್ನು ಎಂದು ಪೂರ್ಣ ಮಾಡುತ್ತಾರೆ ಎಂಬುದು ಗೊತ್ತಿಲ್ಲ. ಆದರೆ ಆಂಧ್ರಪ್ರದೇಶದವರು ಮತ್ತು ಮಹಾರಾಷ್ಟ್ರದವರು ನಮ್ಮ ಕರ್ನಾಟಕಕ್ಕೆ ಏನು ನೀರು ಸಿಗಬೇಕು ಅದು ಸಿಗದಹಾಗೆ ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿದ್ದಾರೆ. ಆಲಮಟ್ಟಿ ಯೋಜನೆಯಲ್ಲಿ ನಾವು ಹೋರಾಟ ಮಾಡಿದ್ದೇವೆ. ಅದು ಕರಸೇವೆಯ ಮುಖಾಂತರ ನಾವು ಗೇಟ್‌ಗಳನ್ನು ಕಂಪ್ಲೀಟ್ ಮಾಡಿ ಹೋಗಿ ಕೂಡಿಸಬೇಕೆಂದು ಇದ್ದೆವು. ಗೇಟುಗಳನ್ನು ಕೂಡಿಸಬಾರದು ಎಂದು ಸುಪ್ರಿಂ ಕೋರ್ಟ್ ಸ್ಟೇ ಇತ್ತು. ಕರ್ನಾಟಕ ಸರ್ಕಾರದ ವಿರುದ್ಧ ಸುಪ್ರಿಂಕೋರ್ಟ್ ಇಂಜಕ್ಷನ್ ಅರ್ಡರನ್ನು ಕೊಟ್ಟಿತ್ತು. ನಾವು ರೈತರ ಸಹಾಯದಿಂದ ಅಲ್ಲಿಗೆ ಹೋಗಿ ಗೇಟನ್ನು ಪ್ರೊಟೆಸ್ಟ್ ರೂಪದಲ್ಲಿ ಹೋಗಿ ಕೂರಿಸುತ್ತೇವೆ ಎಂದು ಇದ್ದೆವು. ಚೀಫ್ ಇಂಜಿನಿಯರ್‌ರವರು ಹೇಳಿದರು, ಈ ಸರ್ಕಾರದಿಂದ ನಿಮ್ಮ ಕೆಲಸ ಆಗುವುದಿಲ್ಲ, ನೀವು ಗೇಟನ್ನು ಕೂರಿಸಿ ಬೇಕಾದರೆ ನಮಗೆ ಹೆದರಿಸಿ ನಾವು ಹಾಗೆಯೇ ಕೂರುತ್ತೇವೆಂದು ಹೇಳಿದರು. ಆದರೆ ನಮ್ಮ ಸರ್ಕಾರದವರು ದುರ್ದೈವದಿಂದ ಸಾವಿರಾರು ಜನ ರೈತರಿಗೆ ಆಲಮಟ್ಟಿಯ ಪ್ರಕರಣದಲ್ಲಿ ಅರೆಸ್ಟ್ ಮಾಡಿ ಒಳಗೆ ಹಾಕಿ ಆ ಮೂವ್‌ಮೆಂಟ್‌ನ್ನು ಕ್ರಷ್ ಮಾಡಿಬಿಟ್ಟರು. ಆ ಕಾಲಕ್ಕೆ ನನಗೆ ಗೊತ್ತಿದೆ. ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ನಾವು ಕರೆದುಕೊಂಡು ಹೋಗಿದ್ದೆವು. ಬಿಜಾಪುರ ಜಿಲ್ಲೆಯಲ್ಲಿ ನಂಜೇಗೌಡರನ್ನೂ ಸಹ ಕರೆದುಕೊಂಡು ಹೋದೆವು. ಅವರು ಜಾಗೃತಿಯನ್ನು ತರಲು ಸಾಕಷ್ಟು ಕೆಲಸವನ್ನು ಮಾಡಿದರು. ಇಂತಹದ್ದು ಬಹುಶಃ ಮಂಡ್ಯದಲ್ಲಿ ಆ ಭಾಗದಲ್ಲಿ ಆಗಿದ್ದರೆ ಎಲ್ಲಾ ಪಾರ್ಟಿಯವರು ಒಂದಾಗಿ ಆ ಗೇಟನ್ನು ಕೂರಿಸುತ್ತಿದ್ದೆವು ಎಂದು ಅವರು ಹೇಳಿದರು. ತಮಿಳುನಾಡಿನಲ್ಲಿ ಎಲ್ಲಾ ಪಾರ್ಟಿಯವರು ಒಂದಾಗುತ್ತಾರೆ, ಆಂಧ್ರದಲ್ಲೂ ಕೂಡ ಒಂದಾಗುತ್ತಾರೆ, ಅಲ್ಲಿ ನಾವು ವಿರೋಧ ಪಕ್ಷದವರು ಗೇಟ್ ಕೂರಿಸುವುದಕ್ಕೆ ಹೋಗುತ್ತೇವೆಂದರೆ, ಇವರು ಇದರಲ್ಲಿ ನಮ್ಮದು ಕ್ರೆಡಿಟ್ ಹೋಗುತ್ತದೆ. ನಾವು ಏನೋ ಪೊಲಿಟಿಕಲ್ ಲಾಭ ತೆಗೆದುಕೊಳ್ಳುತ್ತೇವೆ, ಎಂದು ನಮ್ಮ ಸರ್ಕಾರದವರು ಆ ಮೂವ್‌ಮೆಂಟ್ ಅನ್ನು ಕ್ರಷ್ ಮಾಡಿಬಿಟ್ಟರು. ಈ ರೀತಿಯಾಗಿ ನಮ್ಮ ನೀರಾವರಿ ಯೋಜನೆಗಳು ಕುಂಠಿತಗೊಳ್ಳುತ್ತಿವೆ. ಇಷ್ಟೇ ಅಲ್ಲ, ನಮ್ಮ ಸರ್ಕಾರದವರು . .

ಅಧ್ಯಕ್ಷರು: ಮಾನ್ಯ ವೈಜನಾಥ್‌ಪಾಟೀಲ್‌ರವರೆ, ಬೇಗ ಮುಗಿಸಿ, 5 ಗಂಟೆಗೆ ಚರ್ಚೆ ಮುಗಿಯಬೇಕು, ಇನ್ನೂ ಕೆಲವರು ಮಾತನಾಡುವವರು ಇದ್ದಾರೆ. ತಾವು ದಯಮಾಡಿ ಮುಗಿಸಿ.

ಶ್ರೀ ವೈಜನಾಥ ಪಾಟೀಲ್: ನಮ್ಮ ನೀರಾವರಿ ಯೋಜನೆಗಳಿಗೆ ನಮ್ಮ ಸರ್ಕಾರದವರೆ ಹೇಗೆ ಕ್ರಷ್ ಮಾಡುತ್ತಿದ್ದಾರೆಂದರೆ ಮತ್ತೊಂದು ಉದಾಹರಣೆ ಎಂದರೆ 'ಬಿ' ಸ್ಕೀಂನಲ್ಲಿ ನೀರು ಪುನಃ ರೀ ಅಲೋಕೇಟ್ ಆಗುವುದು ಏನಿದೆ, ಅದರ ಸಲುವಾಗಿ ರೈತರು ಯಾರೇ ಪಂಪುಸೆಟ್ಟು ತಮ್ಮ ಹಳ್ಳಗಳಿಗೆ ಅಥವಾ ನದಿಗಳಿಗೆ ಕೂಡಿಸುವುದಿದ್ದರೆ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಒಂದು ಸರ್ಕುಲರ್ ಬಂದಿದೆ, ಸರ್ಕಾರ ಅಂದರೆ ರಾಜ್ಯಸರ್ಕಾರಕ್ಕೆ ಬರಬೇಕು. ಅಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತೊಬ್ಬರಿಗೆ ಕೊಡಬಹುದು. ಆದರೆ ಈ ಕಡೆ ಸಾವಿರಾರು ಪಂಪುಸೆಟ್‌ಗಳನ್ನು ಇಲ್ಲೀಗಲ್ ಆಗಿ ಕೂಡಿಸಿಕೊಳ್ಳುತ್ತಾರೆ, ಇಲ್ಲಿ ಯಾರೂ ಕೇಳುವವರು ಇಲ್ಲ. ನಮ್ಮಲ್ಲಿ ಮಾತ್ರ ನಮ್ಮ ಚಿಂಚೋಳಿಯಲ್ಲಿ ಅನುಭವ ಇದೆ. ಪರ್ಮಿಷನ್ ಬಗ್ಗೆ ರಾಜ್ಯಸರ್ಕಾರಕ್ಕೆ ಕಳುಹಿಸಬೇಕು, ರಾಜ್ಯಸರ್ಕಾರದಲ್ಲಿ ಅದು ಬಿದ್ದಿರಬೇಕು. ರಾಜ್ಯಸರ್ಕಾರದಿಂದ ಆ ಕಡೆಗೆ ಕರೆಸ್ಪಾಂಡೆನ್ಸ್ ಹೋಗುವುದಿಲ್ಲ. ಕೊನೆಗೆ ಅವರು ಆ ಐ.ಪಿ.ಸೆಟ್ ಹಚ್ಚದೆ ಅದನ್ನು ಬಂದ್ ಮಾಡುವ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಬಚಾವತ್ ಅವಾರ್ಡ್ ಪ್ರಕಾರ ನಮಗೆ ಇವತ್ತು 723–33 ಅಡಿಗಳಷ್ಟು ನೀರೂ ಸಹ ಸಿಗದ ಪರಿಸ್ಥಿತಿಯಾಗಿದೆ. ಬಿ–ಸ್ಕೀಮ್‌ನಲ್ಲಿ ಹೊಸ ಟ್ರಿಬ್ಯುನಲ್ ಯಾವ ಆರ್ಡರ್ ಕೊಡುತ್ತದೋ ಗೊತ್ತಿಲ್ಲ, ಏಕೆಂದರೆ ಆ ಆರ್ಡರ್‌ನಲ್ಲಿ ಸರ್‌ಪ್ಲಸ್ ವಾಟರ್ ಅಥವಾ ಅನ್‌ಯುಟಿಲೈಸ್ಡ್ ವಾಟರ್ ಅನ್ನು ಯಾವರೀತಿ ಹಂಚಬೇಕೆಂಬ ಬಗ್ಗೆ ಕ್ಲಿಯರ್ ಇಲ್ಲದಿರುವ ಸಲುವಾಗಿ ಇವತ್ತು ಆಂಧ್ರದವರು (ಎ)–ಸ್ಕೀಮ್‌ನ ಅನ್–ಯುಟಿಲೈಸ್ಡ್ ವಾಟರ್ ಅನ್ನು ಕೇಳುತ್ತಿದ್ದಾರೆ. ಬಿ–ಸ್ಕೀಮ್‌ನಲ್ಲಿ ಎಷ್ಟು ಹೆಚ್ಚು ನೀರು ಇದೆ ಅದನ್ನೂ ಸಹ ಕೇಳುತ್ತಿದ್ದಾರೆ. ಹೀಗಾಗಿ ಬರುವ ದಿನಗಳಲ್ಲಿ ನಮಗೆ ಮತ್ತೆ ಪುನಃ ಅನ್ಯಾಯವಾಗಬಹುದೆಂಬ ಹೆದರಿಕೆ ಇದೆ. ಸರ್ಕಾರ ಈ ಕಡೆ ಇತ್ತೀಚಿನ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಹೆಚ್ಚು ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದಾರೆ. ಕಾವೇರಿ ನದಿಯಿಂದ ನೂರಾರು ವರ್ಷಗಳಿಂದ ನೀರಾವರಿ ಮಾಡಿ ಅದರಿಂದ ಲಾಭವನ್ನು ಪಡೆಯುವ ರುಚಿ ಅವರಿಗೆ ಹತ್ತಿದೆ. ಆ ದೃಷ್ಟಿಯಲ್ಲಿ ಅವರು ಹೋರಾಟದಲ್ಲಿ ಹೆಚ್ಚು ಕಾನ್ಷಿಯಸ್ ಇದ್ದಾರೆ, ಹೆಚ್ಚು ಮಿಲಿಟೆಂಟ್ ಇದ್ದಾರೆ; ಹಾಗಾಗಿ ಆ ಕಡೆ ಸರ್ಕಾರದವರು ಹೆಚ್ಚಿನ ಗಮನಹರಿಸಬೇಕು. ಆ ದೃಷ್ಟಿಯಿಂದ. . . . . .

ಅಧ್ಯಕ್ಷರು: ವೈಜನಾಥ್‌ರವರೇ, ಮಾತನಾಡುವುದನ್ನು ನಿಲ್ಲಿಸಿ, ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ.

ಶ್ರೀ ವೈಜನಾಥ ಪಾಟೀಲ್: ಆಯಿತು, ಕೆಲವು ಬೇರೆ ವಿಷಯಗಳ ಬಗ್ಗೆ ನಮ್ಮ ವಿರುದ್ಧ ಸುಪ್ರೀಂ ಕೋರ್ಟ್‌ನಿಂದ ಏನು ಜಡ್ಜಮೆಂಟ್ ಬಂತು ಅದು ಬರುವುದಕ್ಕೆ ನಾವು ಹೇಗೆ ಕಾರಣರಾಗುತ್ತೇವೆ ಎಂಬುದನ್ನು ಹೇಳುತ್ತೇನೆ. ಆ ಗೇಟ್‌ನ ಎತ್ತರವನ್ನು 524ಕ್ಕೆ ಏರಿಸಬೇಕೇ ಅಥವಾ 519ಕ್ಕೆ ಇಳಿಸಬೇಕೇ ಎಂಬ ಬಗ್ಗೆ ತೀರ್ಮಾನಿಸಲು 1996ರಲ್ಲಿ ಜ್ಯೋತಿಬಸು ಅವರ ನೇತೃತ್ವದಲ್ಲಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದರು, ಅದರಲ್ಲಿ ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೆಲ್ಲಾ ಇದ್ದರು, ಅವರೆಲ್ಲಾ ಬಂದು 524ಕ್ಕೆ ಏರಿಸುವ ಅವಶ್ಯಕತೆಯಿಲ್ಲವೆಂದು ಹೇಳಿದರು. ಅದು ಒಂದನ್ನೇ ಆಧಾರವಾಗಿಟ್ಟುಕೊಂಡು ಸುಪ್ರೀಂಕೋರ್ಟ್‌ನಲ್ಲಿ ನಮ್ಮ ವಿರುದ್ಧ ಜಡ್ಜಮೆಂಟ್ ಬಂತು. ಹೀಗೆ ಎಷ್ಟೋ ವಿಷಯಗಳಲ್ಲಿ ನಮ್ಮವರೇ ಯಾರನ್ನೋ ಪ್ಲೀಚ್ ಮಾಡುವ

ಸಲುವಾಗಿ, ಚಂದ್ರಬಾಬು ನಾಯ್ಡು ಅವರು ಸಪೋರ್ಟ್ ಮಾಡುತ್ತಿದ್ದುದರಿಂದ ಆಂಧ್ರದವರನ್ನು ಪ್ಲೀಜ್ ಮಾಡುವ ಸಲುವಾಗಿ, ಚಂದ್ರಬಾಬು ನಾಯ್ಡು ಅವರು ಸಪೋರ್ಟ್ ಮಾಡುತ್ತಿದ್ದುದರಿಂದ ಆಂಧ್ರದವರನ್ನು ಪ್ಲೀಜ್ ಮಾಡುವ ಸಲುವಾಗಿ ಇಂತಹ ಕೆಲಸಗಳನ್ನು ನಮ್ಮವರೇ ಮಾಡಿದ್ದರಿಂದ ಅದರ ಪರಿಣಾಮಗಳು ಇವತ್ತು ನಮ್ಮ ಮೇಲೆ ಆಗುತ್ತಿವೆ. ಸಾಮಾಜಿಕ ನ್ಯಾಯದ ಒಂದು ವಿಷಯ, ಮಕ್ಕಳ ಮಾರಾಟದ ವಿಷಯದ ಬಗ್ಗೆ ಹೋದ ಅಸೆಂಬ್ಲಿಯಲ್ಲಿ ಬಹಳಷ್ಟು ಚರ್ಚೆ ನಡೆಯಿತು, ಸಾವಿರಾರು ಜನ ಮಕ್ಕಳನ್ನು ಮಾರಿಕೊಂಡು ಹೋಗಿದ್ದು ಇಡೀ ಜಗತ್ತಿಗೆಲ್ಲಾ ಗೊತ್ತಿದೆ. ಆದರೆ ಈ ತನಕ ಆ ಮಕ್ಕಳು ಎಲ್ಲಿದ್ದಾರೆ, ಅವರ ಗತಿ ಏನಾಗಿದೆ? ಅದರ ಬಗ್ಗೆ ಕೇಂದ್ರ ಸರ್ಕಾರವಾಗಲೀ, ರಾಜ್ಯಸರ್ಕಾರವಾಗಲೀ ತಲೆ ಕೆಡಿಸಿಕೊಂಡಿಲ್ಲ, ಇವತ್ತಾದರೂ ರಾಜ್ಯ ಸರ್ಕಾರ ಆ ಮಕ್ಕಳು ಎಲ್ಲಿದ್ದಾರೆ, ಯಾವ ಪರಿಸ್ಥಿತಿಯಲ್ಲಿದ್ದಾರೆ, ನಮ್ಮ ದೇಶದಲ್ಲಿದ್ದಾರೆಯೇ, ಪರದೇಶದಲ್ಲಿದ್ದಾರೆಯೇ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಆದರೆ ಅದರ ಬಗ್ಗೆ ನೆನಪನ್ನೂ ಕೂಡ ಮಾಡುತ್ತಿಲ್ಲ. ಈಗ ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ಮಾತನಾಡಬೇಕಾದರೆ . .

ಅಧ್ಯಕ್ಷರು: ಈಗ ನೀರಾವರಿ ಬಗ್ಗೆ ಮಾತನಾಡಿ ನಿಮ್ಮ ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ, ದಯಮಾಡಿ ಸಹಕರಿಸಿ ತಾವು ಕುಳಿತುಕೊಳ್ಳಬೇಕು.

ಶ್ರೀ ವೈಜನಾಥ ಪಾಟೀಲ್: ಒಂದೊಂದು ನಿಮಿಷದಲ್ಲಿ ಒಂದೊಂದು ವಿಷಯವನ್ನು ಹೇಳಿ ಮುಗಿಸುತ್ತೇನೆ. ಈಗ ನಮ್ಮ ಸರ್ಕಾರ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆಯನ್ನಾಗಿ ಮಾಡಬೇಕೆಂಬ ಬಗ್ಗೆ ಒಂದು ಡೆಲಿಗೇಷನ್ ಅನ್ನು ದೆಹಲಿಗೆ ಒಯ್ದಿದೆ. ಆ ಕಡೆ ಇಂಗ್ಲೀಷ್ ಭಾಷೆಗೆ ಪ್ರೋತ್ಸಾಹವನ್ನು ಕೊಟ್ಟು ಕನ್ನಡ ಭಾಷೆಯ ತಲೆ ಒಡೆಯುವ ಕೆಲಸವನ್ನು ಸರ್ಕಾರವೇ ಮಾಡುತ್ತಿದೆ; ಮತ್ತೆ ಅದಕ್ಕೆ ಒಂದು ಡೆಲಿಗೇಷನ್ ಒಯ್ಯುವುದು. ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಆ ಕೈಗಾರಿಕೋದ್ಯಮಿಗಳನ್ನು ಸಂತೋಷಪಡಿಸಲಿಕ್ಕೆ ಅವರು ಹೇಳಿದ ಹಾಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಇವತ್ತು ನಮ್ಮ ಸರ್ಕಾರ ಹಾಕುತ್ತಿದೆ. ಆದರೆ ಆ ಕಾರ್ಖಾನೆಗಳಲ್ಲಿ ನಮ್ಮ ಜನ, ಯುವಕರಿಗೆ, ಕನ್ನಡಿಗರಿಗೆ ನೌಕರಿ ಕೊಡುತ್ತಾರೆಯೇ ಇಲ್ಲವೇ ಎಂಬುದನ್ನು ನೋಡುತ್ತಿಲ್ಲ. ಈಗ ನಮ್ಮ ಸರ್ಕಾರ ಸರೋಜಿನಿ ಮಹಿಷಿ ಕಮಿಟಿಯ ವರದಿಯನ್ನು ನೋಡಲಿಕ್ಕೆ, ಅದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ತಯಾರು ಇಲ್ಲ, ಸರ್ಕಾರದವರು ಆ ಕಡೆ ತಲೆ ಹಾಕಲಿಕ್ಕೂ ಸಹ ತಯಾರಿಲ್ಲ. ಸ್ಥಳೀಯರಿಗೆ, ನಮ್ಮವರಿಗೆ ನೌಕರಿಗಳು ಸಿಗಬೇಕು, ಇಲ್ಲವಾದರೆ ಆ ಕೈಗಾರಿಕೆಗಳ ಅವಶ್ಯಕತೆ ನಮಗೆ ಏತಕ್ಕೆ ಬೇಕು? ಅವರಿಗೆ ಷರತ್ತುಗಳನ್ನು ಇಟ್ಟು ಸರ್ಕಾರದವರು ಕೊಡುವ ಫೆಸಿಲಿಟೀಸ್‌ಗಳನ್ನು ಬಂದ್ ಮಾಡಬೇಕು.

ಅಧ್ಯಕ್ಷರು: ಕೈಗಾರಿಕೆ ಇಲಾಖೆಯ ಬೇಡಿಕೆ ಮೇಲೆ ಬಹಳ ಹಿಂದೆಯೇ ಚರ್ಚೆಯಾಗಿದೆ, ಮತ್ತೆ ನೀವು ಈಗ ಕೈಗಾರಿಕೆಯ ಮೇಲೆ ಮಾತನಾಡುತ್ತಿದ್ದೀರಿ. ಆಗ ಆ ಬೇಡಿಕೆಯ ಮೇಲೆ ಮಾತನಾಡದೆ ಈಗ ಮಾತನಾಡಿದರೆ ಹೇಗೆ? ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವೈಜನಾಥ ಪಾಟೀಲ್: ಈಗ ಆರ್ಟಿಕಲ್ 321ರ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿತ್ತು, ಆ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ. ಇದಕ್ಕೆ ದಯಮಾಡಿ ಅವಕಾಶವನ್ನು ಕೊಡಬೇಕು. ಇಲ್ಲದಿದ್ದರೆ ನಾನು ಸತ್ಯಾಗ್ರಹ ಮಾಡುತ್ತೇನೆ. ಮಾನ್ಯ ಬಿ.ಆರ್. ಪಾಟೀಲ್‌ರವರು ಬಹಳ ಅಧ್ಯಯನ ಮಾಡಿದ್ದಾರೆ. ಅವರು ಅದರ ಮೇಲೆ ಮಾತನಾಡಲಿ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ತಾವು ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಸದಸ್ಯರು ಮಾತನಾಡಿದ ಮೇಲೆ ನನಗೆ ಮಾತನಾಡಲು ಒಂದೆರಡು ನಿಮಿಷ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಪ್ರಕಾಶ್ ಖಂಡ್ರೆ: ವಿಶೇಷವಾಗಿ ನಾವು ಸದಸ್ಯರು ಏನು ಮಾತನಾಡುತ್ತೇವೆ, ಅದರ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ರಿಪ್ಲೈ ಕೊಡಬೇಕೆಂದು ನಾನು ವಿನಂತಿಸುತ್ತೇನೆ. ಏಕೆಂದರೆ ಬೀದರ್ ಜಿಲ್ಲೆಯಲ್ಲಿ ಮಿನಿಮಮ್ ಐದು ಸಾವಿರ ಜನರಿಗೆ ಆನೆಕಾಲಿನ ರೋಗ ಬಂದಿದೆ. ಅದರಲ್ಲಿ ವಿಶೇಷವಾಗಿ ಭಾಲ್ಕಿ ಕ್ಷೇತ್ರದಲ್ಲಿ ಎರಡು ಸಾವಿರದ ಮೇಲೆ ರೋಗಿಗಳು ಇದ್ದಾರೆ. ಇವತ್ತು ನಮ್ಮಲ್ಲಿ 100 ಹಾಸಿಗೆಗಳ ಆಸ್ಪತ್ರೆಯಿದೆ, ಅದರಲ್ಲಿ ಬ್ಲಡ್‌ಬ್ಯಾಂಕ್ ಇಲ್ಲ. ನಮ್ಮ ಆರೋಗ್ಯ ಮಂತ್ರಿಗಳು ಕೇಳಿದರೆ ಬಹಳ ಒಳ್ಳೆಯದಾಗುತ್ತದೆ. ಇದರ ಬಗ್ಗೆ ಅವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಂಬ ಬಗ್ಗೆ ನಮಗೆ ನಂಬಿಕೆಯಿದೆ. ಹೈಕೋರ್ಟ್‌ನಿಂದ ಸ್ಥಳ ಖಾಲಿ ಮಾಡಿಸಿ ಇವತ್ತು 100 ಹಾಸಿಗೆಗಳ ಆಸ್ಪತ್ರೆಯನ್ನು ಪೂರ್ಣಗೊಳಿಸಲಾಗಿದೆ. ಆದರೆ ಅಲ್ಲಿ ಬ್ಲಡ್ ಬ್ಯಾಂಕ್ ಇಲ್ಲ, ಆಪರೇಷನ್ ಥಿಯೇಟರ್ ಇಲ್ಲ, ಎಕ್ಸರೇ ತೆಗೆಯಲಿಕ್ಕೆ ಟೆಕ್ನೀಷಿಯನ್ ಇಲ್ಲ, ಇದನ್ನು ಬಿಟ್ಟು ಕಟ್ಟಡ ಎಲ್ಲಾ ರೀತಿಯ ವ್ಯವಸ್ಥೆಯೂ ಸಹ ಸರಿಯಿದೆ. ಆದರೆ ಈ 100 ಹಾಸಿಗೆಗಳ ಆಸ್ಪತ್ರೆಗೆ ಏನು ಪ್ರಾವಿಷನ್ ಇದೆ, ಆ ಪ್ರಾವಿಷನ್ ಪ್ರಕಾರ ಕೆಲಸವಾಗುತ್ತಿಲ್ಲ. ಈಗ ಆನೆಕಾಲು ರೋಗಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಮೂರು ತಿಂಗಳ ಹಿಂದೆ ಧನುರ್ ಎಂಬ ಗ್ರಾಮದಲ್ಲಿ ನಮ್ಮ ಸಹೋದರಿಯೊಬ್ಬರಿಗೆ ಎಂಗೇಜ್‌ಮೆಂಟ್ ಆಯಿತು, ಈಗ ಅವರಿಗೆ ಮದುವೆ ಮಾಡಬೇಕೆಂದರೆ ಅವರ ಕಾಲು ಬಹಳಷ್ಟು ಉಬ್ಬಿದೆ. ಹೀಗಾಗಿ ಅವರ ಎಂಗೇಜ್ಮೆಂಟ್ ಮುರಿದುಹೋಯಿತು, ಅವರಿಗೆ ಮದುವೆಯಾಗುತ್ತಿಲ್ಲ, ಇಂತಹ ಒಂದು ಕೇಸಲ್ಲ; ಡೋಳಗಾಪುರದಲ್ಲಿ 150 ಮಂದಿ ಆನೆಕಾಲು ರೋಗಕ್ಕೆ ತುತ್ತಾದ ರೋಗಿಗಳಿದ್ದಾರೆ. ನನ್ನ ಕ್ಷೇತ್ರದಲ್ಲಿ 2500 ರೋಗಿಗಳು, ಬೀದರ್‌ನಲ್ಲಿ ಐದು ಸಾವಿರ ರೋಗಿಗಳು ಇದ್ದಾರೆ, ಇದು ಬಹಳ ಸೀರಿಯಸ್ ವಿಷಯವಾಗಿದೆ. ನಮ್ಮ ಆರೋಗ್ಯ ಮಂತ್ರಿಗಳು ಇದರ ಬಗ್ಗೆ ಸೀರಿಯಸ್ಸಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್: ಈ ವಿಷಯ ಬಹಳ ಗುರುತರ ಹಾಗೂ ಗಂಭೀರವಾಗಿದೆ. ಒಂದೇ ಜಿಲ್ಲೆಯಲ್ಲಿ ಇಷ್ಟೊಂದು ಜನಗಳಿಗೆ ಆನೆಕಾಲು ರೋಗ ಬಂದಿದೆಯೆಂದು ಹೇಳಿದರೆ ಸರ್ಕಾರ ಇದರ ಬಗ್ಗೆ ಏನು ಚಿಂತನೆ ಮಾಡುತ್ತಿದೆ ಅವರು ಹೇಳುತ್ತಿರುವ ವಿಷಯ ಇಡೀ ಸದನವೇ ಆಶ್ಚರ್ಯಪಡುವಂತಹದ್ದಾಗಿದೆ.

ಅಧ್ಯಕ್ಷರು: ಉತ್ತರ ಹೇಳುವಾಗ ಹೇಳಿ.

ಶ್ರೀ ಪ್ರಕಾಶ್ ಖಂಡ್ರೆ: ಈ ಬೇನೆ ಒಬ್ಬರಿಂದೊಬ್ಬರಿಗೆ ಆದಷ್ಟು ಬೇಗನೆ ಬರುತ್ತದೆ. ಈ ರೋಗ ಆ ಜರ್ಮ್ಸ್‌ನಿಂದ ಬರುವುದಿಲ್ಲ. ಒಬ್ಬರಿಂದ ಮತ್ತೊಬ್ಬರಿಗೆ ಬರುತ್ತದೆ. 2-3 ತಿಂಗಳುಗಳ ಹಿಂದೆ ಐದು ಸಾವಿರ ರೋಗಿಗಳಿದ್ದಾರೆಂದು ದಾಖಲೆಯಿಂದ ತಿಳಿದುಬಂದಿದೆ. ಈಗ ಎಷ್ಟು ಜನಕ್ಕೆ ಆರೋಗ್ಯ ಬಂದಿದೆಯೋ ಗೊತ್ತಿಲ್ಲ. ಅದನ್ನು ಹೇಗೆ ಪ್ರಿವೆಂಟ್ ಮಾಡುತ್ತೀರಿ? ಇಲ್ಲದಿದ್ದರೆ ಈ ರೋಗ ಏಡ್ಸ್‌ಗಿಂತ ವೇಗವಾಗಿ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿದೆ. 100 ಹಾಸಿಗೆಯಿರುವ ತಾಲ್ಲೂಕು ಮಟ್ಟದ ಆಸ್ಪತ್ರೆಯಲ್ಲಿ ಏನು ವ್ಯವಸ್ಥೆಯಿದೆ? ನಾಲ್ಕು ವರ್ಷದಿಂದ

ಸದನದಲ್ಲಿ ಹೋರಾಟ ಮಾಡಿ ಅಲ್ಲಿ ಆಸ್ಪತ್ರೆಯನ್ನು ಕಟ್ಟಿದರೂ ಸಹ ಅಲ್ಲಿ ವ್ಯವಸ್ಥೆಯೇನಿಲ್ಲ. ಆರೋಗ್ಯ ಇಲಾಖೆ ಬಗ್ಗೆ ಹೇಳಬೇಕಾದರೆ ಬಹಳಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ, ಈ ವಿಷಯವನ್ನು ಬಹಳಷ್ಟು ಮಂದಿ ಮಾನ್ಯ ಸದಸ್ಯರು ಹೇಳಿದ್ದಾರೆ ಇಲ್ಲಿ ಮಾನ್ಯ ಮಂತ್ರಿಗಳಾದ ಖರ್ಗೆ ಸಾಹೇಬರು ಇದ್ದಾರೆ. ಹಾಗಾಗಿ ಈ ಒಂದು ರೋಗದ ಬಗ್ಗೆ ಏನು ತಾವು ಉತ್ತರ ಕೊಡುತ್ತೀರಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನಾನು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಇವತ್ತು ವಿಶೇಷವಾಗಿ ಮತ್ತೊಂದು ಬೀದರ್ ಜಿಲ್ಲೆಯಲ್ಲಿ ರೈಲ್ವೆ ಲೈನ್ ಇದೆ: ಮಾನ್ಯ ಅಧ್ಯಕ್ಷರೆ, ನಾವು ಬೀದರ್‌ನವರು 800 ಕಿಲೋಮೀಟರ್ ದೂರದಲ್ಲಿದ್ದೇವೆ, ಹಾಗಾಗಿ ನೀವು ಒಂದು ಸಲ ಬೆಲ್ ಹೊಡೆದರೆ ನಾಲ್ಕು ಸಲ ಕೇಳಿ ಬರುತ್ತದೆ. ಹಾಗಾಗಿ ನೀವು ಹೆಚ್ಚು ಬೆಲೆ ಹೊಡೆಯಬೇಡಿ, ಬೇಗ ಮುಗಿಸುತ್ತೇನೆ. ಇವತ್ತು ಬೀದರ್‌ಗೆ ಇಬ್ಬಿಬ್ಬರು ಮಂತ್ರಿಗಳನ್ನು ಕೊಟ್ಟಿರುವುದು ಬಹಳ ಸಂತೋಷ ಇದೆ. ಆದರೆ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ನಮ್ಮ ಜಿಲ್ಲೆಯ ಉಸ್ತುವಾಗಿ ಮಂತ್ರಿಯವರನ್ನೂ ವಿನಂತಿ ಮಾಡುತ್ತೇನೆ, ಏನೆಂದರೆ ನಮ್ಮಲ್ಲಿ ನೀರು ಇದೆ, ನದಿಗಳು ಇವೆ, ಪ್ರಾಜೆಕ್ಟ್‌ಗಳು ಇವೆ, ಇವತ್ತು ಥರ್ಮಲ್ ಪವರ್ ಪ್ರಾಜೆಕ್ಟ್ ಏನಿದೆ ಅದು ನಮ್ಮಲ್ಲಿ ಆಗಬೇಕು. ಮೊದಲು ಇದರ ಬಗ್ಗೆ ಸರ್ವೆ ಆಗಿತ್ತು, ಅದು ಎಷ್ಟು ಅಂತ, ಎಲ್ಲೆಲ್ಲಿ ಅಂತ ಗೊತ್ತಿಲ್ಲ. ನಾವು ಮಹಾರಾಷ್ಟ್ರಕ್ಕೆ ಹೋದರೆ ಥರ್ಮಲ್ ಪ್ರಾಜೆಕ್ಟ್ ಏನಿದೆ ಅಲ್ಲಿಗೆ ಕಲ್ಲಿದ್ದಲು ಈ ಕಡೆಯಿಂದ ಹೋಗುತ್ತದೆ, ಇದೇ ರೈಲ್ವೆ ಲೈನ್‌ನಿಂದ, ಹಾಗಾಗಿ ನಮ್ಮ ಮಾನ್ಯ ಹಿರಿಯ ಮಂತ್ರಿಗಳು, ನಮ್ಮ ತಾಲ್ಲೂಕಿನ ಹೊರಟ್ಟಿ ಗ್ರಾಮದಲ್ಲಿ ಹುಟ್ಟಿ ಒಂದು ದೊಡ್ಡ ಉನ್ನತ ಸ್ಥಾನಕ್ಕೆ ಬೆಳೆದಿದ್ದಾರೆ, ಇದು ನಮಗೆ ಬಹಳ ಹೆಮ್ಮೆ; ಈ ಥರ್ಮಲ್ ಪ್ರಾಜೆಕ್ಟ್ ಅನ್ನು ಬೀದರ್‌ಗೆ ತರುವುದಕ್ಕೆ ಮಾನ್ಯ ಖರ್ಗೆ ಸಾಹೇಬರು ಬಹಳ ಪ್ರಯತ್ನಮಾಡಿ ಮಾಡಿಸುತ್ತಾರೆ ಎಂಬ ಆಸೆ ಇಟ್ಟುಕೊಂಡಿದ್ದೇನೆ. ಇವತ್ತು ವಿಶೇಷವಾಗಿ ಈ ಮಾಂಜ್ರಾ ಮತ್ತು ನಾಂಜ್ರಾ ನದಿ ನೀರಿನ ಬಗ್ಗೆ ನಾನು ಹೋದ ಸಲ ಇದರ ಬಗ್ಗೆ ಈ ಸದನದಲ್ಲಿ ಗಮನ ಸೆಳೆದಿದ್ದೇನೆ. ಹೋದ ಸಲ ಇದ್ದ ಮಂತ್ರಿಗಳು ಮತ್ತು ಈಗ ಇರುವ ಹಿರಿಯ ಮಂತ್ರಿಗಳಾದ ಮಾನ್ಯ ಖರ್ಗೆ ಸಾಹೇಬರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಒಟ್ಟು 38 ಟಿ.ಎಂ.ಸಿ. ನೀರಿನಲ್ಲಿ ನಾವು ಉಪಯೋಗ ಮಾಡುತ್ತಿರುವುದು 18 ಟಿ.ಎಂ.ಸಿ. ಈ ನಾಲ್ಕು ವರ್ಷಗಳಿಂದ ನಾಲ್ಕು ಬ್ಯಾರೇಜ್ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಆದರೆ ಅದರ ಬಗ್ಗೆ ಟೆಂಡರ್ ಕಾಲ್ಫಾರ್ ಮಾಡುತ್ತಿದ್ದೇವೆಂದು ನಮಗೆ ಮಾನ್ಯ ಖರ್ಗೆ ಸಾಹೇಬರು ಹೇಳುತ್ತಿದ್ದಾರೆ, ನಾಲ್ಕು ಬ್ಯಾರೇಜ್ ಮಾಡಿದರೂ ಒಟ್ಟು ಏನಿದೆ ಇದರಲ್ಲಿ ಇನ್ನೂ 10 ಟಿ.ಎಂ.ಸಿ. ನೀರು ನಮಗೆ ಉಳಿಯುತ್ತಿದೆ. ಒಟ್ಟು 32 ಟಿ.ಎಂ.ಸಿ.ಯಲ್ಲಿ 18 ಟಿ.ಎಂ.ಸಿ. ನೀರು ಉಪಯೋಗವಾಗುತ್ತಿದೆ, ಈ 4 ಬ್ಯಾರೇಜ್‌ಗಳನ್ನು ನಾವು ಮಾಡುತ್ತೇವೆಂದರೂ ಇನ್ನೂ ಅಂದಾಜು 10 ಟಿ.ಎಂ.ಸಿ ನೀರು ಇರುತ್ತದೆ. ಹಾಗಾಗಿ ಮಾನ್ಯ ಮಂತ್ರಿಗಳಾದ ಶ್ರೀ ಖರ್ಗೆ ಸಾಹೇಬರು ಈ ನೀರನ್ನು ಪೂರ್ಣ ಉಪಯೋಗ ಮಾಡಿಕೊಳ್ಳಲು ಅವರು ಪ್ರಯತ್ನ ಮಾಡಬೇಕು. ಬೀದರ್ ಜಿಲ್ಲೆಗೆ ಬಹಳಷ್ಟು ದಿನಗಳಿಂದ ಇರುವ ಬೇಡಿಕೆಗಳ ಬಗ್ಗೆ ಪ್ರಯತ್ನ ಮಾಡಿ ಕೆಲಸ ಆಗಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಬಹಳಷ್ಟು ಬೀದರ್ ಜಿಲ್ಲೆಯಲ್ಲಿ ಕರಿ ಭೂಮಿ, ಒಳ್ಳೆಯ ಭೂಮಿ, ಇದೆ ನಮ್ಮಲ್ಲಿ ಎಲ್ಲಾ ರೀತಿಯಿಂದಲೂ ಬೆಳೆಬರುತ್ತದೆ, ಆದರೆ ನೀರಿನ ಉಪಯೋಗ ಕರೆಕ್ಟ್ ಆಗಿ ಆಗುತ್ತಿಲ್ಲ. ಕಾರಂಜಾ ಪ್ರಾಜೆಕ್ಟ್‌ನ್ನು ನಾವು ಡಿಸೆಂಬರ್‌ನಲ್ಲಿ

ಮುಗಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ನಮಗಿಂತ ಹೆಚ್ಚು ಮಾನ್ಯ ಖರ್ಗೆ ಸಾಹೇಬರಿಗೆ ಹೆಚ್ಚು ಕಳಕಳಿ ಇದೆ ಅಂತ ಅನಿಸುತ್ತಿದೆ. ಅವರು ಇದರ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಆದರೆ ನೀರು ಉಪಯೋಗ ಮಾಡುವುದು ತಮ್ಮ ಕೈಯಲ್ಲಿಯೇ ಆಗಬೇಕು. ಏಕೆಂದರೆ ತಾವು ಈಗ ಮಂತ್ರಿ ಇದ್ದೀರಿ, ತಾವು ಆ ನೀರಿನ ಪೂರ್ಣ ಉಪಯೋಗ ಮಾಡುವ ಯೋಜನೆಯನ್ನು ಹಾಕಿಕೊಳ್ಳಬೇಕು, ಆ ಒಂದು ಕೆಲಸ ಆಗುತ್ತದೆಂದು ನಾನು ವಿನಂತಿಸುತ್ತಾ, ಮಾನ್ಯ ಅಧ್ಯಕ್ಷರೆ, ಹೆಚ್ಚು ಏನೂ ಕೇಳುವುದಿಲ್ಲ...

ಅಧ್ಯಕ್ಷರು: ಮಾನ್ಯ ಖಂಡ್ರೆಯವರೆ, ಬೇಗ ಮುಗಿಸಿ, 10 ನಿಮಿಷ ಆಯಿತು.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಧನ್ಯವಾದಗಳು.

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೋಸ್ಕರ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು. ಹಾಗೆಯೇ ಅರಸೀಕೆರೆ ತಾಲ್ಲೂಕಿನ ಕನಕಟ್ಟೆ ಹೋಬಳಿಯಲ್ಲಿ ಶಂಕರನಹಳ್ಳಿ ಎನ್ನುವ ಒಂದು ಗ್ರಾಮ ಇದೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಆರೋಗ್ಯ ಮಂತ್ರಿಗಳಾಗಿದ್ದಂತಹ ಮಾನ್ಯ ಪುಟ್ಟಸ್ವಾಮಿಗೌಡರು ಅಲ್ಲಿಗೆ ಬಂದು ಆಸ್ಪತ್ರೆಯನ್ನು ಮಾಡಿಕೊಡುತ್ತೇನೆಂದು ಹೇಳಿದರು. ಅದಾದ ನಂತರವೂ ಕೂಡ ಅನೇಕ ಮಂತ್ರಿಗಳು ಬಂದರು, ಅನೇಕ ಮಂತ್ರಿಗಳು ಹೋದರು. ಇವತ್ತಿನವರೆಗೂ ಸಹ ಅಲ್ಲಿ ಆಸ್ಪತ್ರೆ ಆಗಲಿಲ್ಲ. ಏಕೆಂದರೆ ವೀರೇಂದ್ರ ಪಾಟೀಲರು ಹೋದರು. ಬಂಗಾರಪ್ಪನವರು ಹೋದರು, ಅದಾದ ಮೇಲೆ ನಮ್ಮ ಮಾನ್ಯ ಜೆ.ಹೆಚ್. ಪಟೇಲರು ಹೋದರು. ಅದಾದ ಮೇಲೆ ಮಾನ್ಯ ಕೃಷ್ಣರವರು ಹೋದರು. ಈಗ ಮಾನ್ಯ ಧರ್ಮಸಿಂಗ್‌ರವರು ಬಂದಿದ್ದಾರೆ. ಇಷ್ಟು ವರ್ಷಗಳಾದರೂ ಕೂಡ ಅಲ್ಲಿಗೆ ಆಸ್ಪತ್ರೆ ಬರಲಿಲ್ಲ. ಏಕೆಂದರೆ ತುಮಕೂರು ಬಾರ್ಡರ್, ಹಾಗೆಯೇ ಚಿತ್ರದುರ್ಗ, ಹಾಗೆಯೆ ಚಿಕ್ಕಮಗಳೂರು ಅದು ನಮ್ಮ ಕ್ಷೇತ್ರಕ್ಕೆ ಕೊನೆ ಬಾರ್ಡರ್ ಆಗಿದೆ. ಇವತ್ತಿನ ದಿವಸ ಅಲ್ಲಿರತಕ್ಕಂಥ ಜನ ತತ್ತರಿಸಿ ಹೋಗುತ್ತಿದ್ದಾರೆ. ಬಹುಶಃ ಏನಾದರೂ ಒಂದು ಹೆಣ್ಣು ಮಗಳು ಹೆರಿಗೆಗೆ ಹೋಗಬೇಕಾದರೆ ಯಾವ ಒಂದು ಎತ್ತಿನ ಗಾಡಿ ಇಲ್ಲ. ಇವತ್ತಿನ ದಿವಸ ಟ್ರ್ಯಾಕ್ಟರ್‌ನಲ್ಲಿ ಹೋಗಬೇಕಾದರೆ ಬಹುಶಃ ಅರ್ಧ ದಾರಿಯಲ್ಲಿಯೇ ಹೆರಿಗೆ ಆಗತಕ್ಕಂಥ ಪರಿಸ್ಥಿತಿ ಇದೆ. ಅನೇಕ ಸಲ ನಾನು ಹೋದಾಗ ನನ್ನ ಕಾರನ್ನು ಕೊಟ್ಟು ಪಂಚನಹಳ್ಳಿಗೆ ಕಳುಹಿಸಿರತಕ್ಕಂಥಾದ್ದು ಇದೆ. ಬಹುಶಃ ಮಾನ್ಯ ಮಾಧುಸ್ವಾಮಿಯವರಿಗೆ ಅಲ್ಲಿರತಕ್ಕಂಥ ವ್ಯತ್ಯಾಸ ಗೊತ್ತು. ಆದರೆ ಇವತ್ತಿನವರೆಗೂ ಸಹ ಆಸ್ಪತ್ರೆಯಾಗಲಿಲ್ಲ. ಅನೇಕ ಸಲ ನಮ್ಮ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತಂದೆ. ಅವರು ಹಣ ಇಲ್ಲ ಅಂತ ಹೇಳುತ್ತಿದ್ದಾರೆ. ಅದೇ ರೀತಿ ಹಿಂದಿನ ಕಾನೂನು ಸಚಿವರಾದಂತಹ ಹಾರ್‍ನಹಳ್ಳಿ ರಾಮಸ್ವಾಮಿಯವರೂ ಸಹ ಪತ್ರ ಬರೆದರು. ಅಲ್ಲಿಗೆ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ ಎಂದು. ಹಾಗೆಯೇ ಡೆಪ್ಯುಟಿ ಸ್ಪೀಕರ್ ಆಗಿದ್ದಂತಹ ಮಾನ್ಯ ಮಲ್ಲಿಕಾರ್ಜುನಯ್ಯನವರೂ ಸಹ ಪತ್ರ ಬರೆದರು. ಅಲ್ಲಿಗೆ ಆಸ್ಪತ್ರೆ ಅವಶ್ಯಕತೆ ಇದೆ ಎಂದು. ನಿಜವಾಗಿಯೂ ಸಹ ಯಾರ ಪತ್ರಕ್ಕೂ ಸರ್ಕಾರ ಗಮನ ಕೊಡದೇ ಇವತ್ತಿನದಿವಸ ತುಂಬಾ ನರಳತಕ್ಕಂಥಾದ್ದು ಆಗಿದೆ. ಆ ದೃಷ್ಟಿಯಿಂದ ಅಲ್ಲಿಗೆ ಒಂದು ಆಸ್ಪತ್ರೆ ಅವಶ್ಯಕತೆ ಇದೆ ಎಂದು ನಾನು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಹಾಗೆಯೇ ಇವತ್ತಿನದಿವಸ ಅರಸೀಕೆರೆಯಲ್ಲೂ ಕೂಡ 150 ಹಾಸಿಗೆಗಳ ಆಸ್ಪತ್ರೆಯಲ್ಲಿ ಒಂದು ಸ್ಕ್ಯಾನಿಂಗ್ ಮೆಷಿನ್ ಇದೆ, ಅದಕ್ಕೆ ಸರಿಯಾದಂತಹ ಚಾಲಕರು ಇಲ್ಲ. ಎಕ್ಸರೇ ಮೆಷಿನ್ ಇದೆ, ಅದಕ್ಕೆ ಚಾಲಕರು ಇಲ್ಲ. ಹಾಗೆಯೇ ಇವತ್ತಿನದಿವಸ ಒಂದು ಆಂಬ್ಯುಲೆನ್ಸ್ ಇಲ್ಲ. ತಾಲ್ಲೂಕು ಕೇಂದ್ರದಲ್ಲಿರತಕ್ಕಂಥ ಆಸ್ಪತ್ರೆಗೆ ಆಂಬ್ಯುಲೆನ್ಸ್

ಇಲ್ಲ. ಇವತ್ತು ರೋಟರಿಯವರೂ ಸಹ ಮುಂದೆ ಬಂದಿದ್ದಾರೆ. ಸರ್ಕಾರವೇನಾದರೂ ಅರ್ಧದಷ್ಟು ಮ್ಯಾಚಿಂಗ್ ಗ್ರ್ಯಾಂಟ್ ಕೊಟ್ಟರೆ ನಾವು ಅರ್ಧದಷ್ಟು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ಇವತ್ತಿನದಿವಸ ನಾನು ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಏನೆಂದರೆ ಆ ಶಂಕರನಹಳ್ಳಿಗೆ ಒಂದು ಆಸ್ಪತ್ರೆ ಅತಿ ಅವಶ್ಯಕತೆ ಇದೆ, ಕಾರಣ ಅದು ಬಾರ್ಡರ್‌ನಲ್ಲಿದೆ. ಹಾಗೆಯೇ ಇನ್ನೊಂದು ಅಂದರೆ ಅರಸೀಕೆರೆಯಲ್ಲಿ ಒಂದು ಸರಿಯಾದಂತಹ ಚರ್ಮರೋಗ ತಜ್ಞರು ಇಲ್ಲ, ಡಾಕ್ಟರ್‌ಗಳು ಇಲ್ಲ, ದಾದಿಗಳು ಇಲ್ಲ, ಇದನ್ನೂ ಕೂಡ ಅತಿ ಅವಶ್ಯಕತೆ ಅಂತ ಮಾನ್ಯ ಆರೋಗ್ಯ ಮಂತ್ರಿಗಳ ಹತ್ತಿರ ಬರೆದು ಕೊಟ್ಟಿದ್ದೇನೆ. ದಯಮಾಡಿ, ಅರಸೀಕೆರೆಗೂ ಕೂಡ ಆ ಒಂದು ಅವಕಾಶ ಮಾಡಿಕೊಡಬೇಕು. ಹಾಗೆಯೇ ಇವತ್ತಿನದಿವಸ ಆಹಾರದ ಬಗ್ಗೆ, ಅನೇಕರು ಹೇಳುತ್ತಿದ್ದರು, ಸರಿಯಾಗಿ ಕಾರ್ಡ್ ಕೊಟ್ಟಿಲ್ಲ ಎಂದು ಆ ದೃಷ್ಟಿಯಿಂದ ಹೇಳುವುದಾದರೆ ಕೊಟ್ಟಿರತಕ್ಕಂಥ ಕಾರ್ಡುಗಳಿಗೂ ಸಹ ಆಹಾರ ಪದಾರ್ಥಗಳು ಸರಿಯಾಗಿ ವಿತರಣೆಯಾಗುತ್ತಿಲ್ಲ. ಇವತ್ತು ಕಾರ್ಮಿಕರಿಗೆ ವಾರಕ್ಕೆ ಒಮ್ಮೆ ದುಡ್ಡು ಬರುತ್ತದೆ. ಅವರು ವಾರಕ್ಕೆ ಒಮ್ಮೆ ದುಡ್ಡನ್ನು ಸಂಗ್ರಹ ಮಾಡಿ ನ್ಯಾಯ ಬೆಲೆ ಅಂಗಡಿಗೆ ಏನಾದರೂ ಹೋದರೆ ಇವತ್ತಿನ ದಿನ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಇಲ್ಲ ಅಂತ ಹೇಳಿ ಕಳುಹಿಸುತ್ತಾರೆ. ಇದರ ಬಗ್ಗೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಿ ಅಂದರೆ ತಹಶೀಲ್ದಾರ್‌ರವರು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಈವತ್ತು, ಒಂದು ಜನತಾದಳ, ಮತ್ತು ಕಾಂಗ್ರೆಸ್ಸ್ ಸೇರಿ ಆಡಳಿತ ನಡೆಸುತ್ತಿದೆ. ನಾವು ಈವತ್ತು ಈ ಎರಡೂ ಪಕ್ಷದವರು ಮಂತ್ರಿಗಳಾಗಲು ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ಅರಸೀಕೆರೆ ಒಂದು ತರಹ ನಿರಪರಾಧಿ ಕ್ಷೇತ್ರವಾಗಿದೆ. ನುಸಿ ರೋಗದಿಂದ ತತ್ತರಿಸಿ ಹೋಗುತ್ತಿದೆ. ಇವತ್ತಿನದಿವಸ ಕಾಯಿ ಕೊಬ್ಬರಿ ಇಲ್ಲವೇ ಇಲ್ಲ; ನಮ್ಮಲ್ಲಿ, ನೀರಾವರಿ ಇಲ್ಲ; ನಮ್ಮಲ್ಲಿ ಇಂಡಸ್ಟ್ರಿಗಳು ಇಲ್ಲ, ಆದರೂ ಜೀವಂತವಾಗಿ ಬದುಕಿದ್ದೇವಲ್ಲಾ ಅದಕ್ಕೆ ನೀವು ಸಂತೋಷಪಡಬೇಕಾಗಿದೆ. ಆ ದೃಷ್ಟಿಯಿಂದ ಇವತ್ತಿನದಿವಸ ಮಂತ್ರಿಗಳು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಒಬ್ಬರು ಸ್ವಾಮೀಜಿಯವರು ಹೇಳಿದರು; ಮೂರು ಜನ ವಿದ್ಯಾರ್ಥಿಗಳು ಹೋಗುತ್ತಿರುತ್ತಾರೆ, ಆಗ ಒಬ್ಬ ವಿದ್ಯಾರ್ಥಿಯನ್ನು ನಿಮ್ಮಪ್ಪ ಏನು ಮಾಡುತ್ತಾನೆಂದು ಕೇಳಿದರು, ನಮ್ಮಪ್ಪ ಕೋಟ್ಯಾಧೀಶ್ವರ, ಅಂದ ಆಮೇಲೆ ಇನ್ನೊಬ್ಬ ವಿದ್ಯಾರ್ಥಿಯನ್ನು ಕೇಳುತ್ತಾರೆ. ಅವನು ಹೇಳಿದ ನಮ್ಮಪ್ಪ ಲಕ್ಷಾಧೀಶ್ವರ, ಅಂದ ಆದರೆ ಮೂರನೆಯವನನ್ನು ಕೇಳಿದಾಗ ಅವನು ಹೇಳಿದ ನಾವು ಎಲ್ಲವನ್ನೂ ಕಳೆದುಕೊಂಡು ಗೊಮ್ಮಟೇಶ್ವರ ಆಗಿದ್ದೇವೆ ಅಂತ. ಆ ರೀತಿ ಅರಸೀಕೆರೆಯಲ್ಲಿ ಸಾಕಷ್ಟು ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದರೂ ಸಹ ಅರಸೀಕೆರೆಗೆ ತಾರತಮ್ಯ ಮಾಡತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಇವತ್ತಿನದಿವಸ ಲೋಕೋಪಯೋಗಿ ವರ್ಕ್ ಆಗಿಲ್ಲ. ಸರಿಯಾದಂತಹ ಟಿ.ಸಿ.ಗಳನ್ನು ಕೊಡುತ್ತಿಲ್ಲ. ಇವತ್ತು ಆರೋಗ್ಯ ಇಲಾಖೆಯಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಪಡಿತರ ಪದಾರ್ಥಗಳು ಸರಿಯಾಗಿ ವಿತರಣೆ ಆಗುತ್ತಿಲ್ಲ. ಈ ರೀತಿಯ ಅನೇಕ ವಿಚಾರಗಳು ಇದ್ದರೂ ಸಹ ಒಂದು ಸಲ ಮಾನ್ಯ ಅಧ್ಯಕ್ಷರು ಬೆಲ್ ಹೊಡೆದಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ನಮ್ಮ ವೇದನೆಯನ್ನು ಹೇಳಿಕೊಳ್ಳಲು ಮಂತ್ರಿಗಳ ಹತ್ತಿರ ಹೋದರೆ ಸರಿಯಾಗಿ ಸ್ಪಂದಿಸುವಂತಹ ಮಂತ್ರಿಗಳು ಇಲ್ಲ. ನಾವು ಕೊಡತಕ್ಕಂಥ ಕಾಗದವನ್ನು ಓದತಕ್ಕಂಥ ವ್ಯವಧಾನ ಕೂಡ ಇಲ್ಲ. ಆದರೆ ಇಲ್ಲಿ ನಾವು ಏನಾದರೂ ಕೇಳೋಣ ಅಂದರೆ ನೀವು ನಮಗೆ

ಅವಕಾಶವನ್ನೇ ಕೊಡುವುದಿಲ್ಲ. ನಾವು ಅರಸೀಕೆರೆಗೆ ಹೋಗಿ ಏನು ಹೇಳಬೇಕು? ಆದರೆ ಮಾನ್ಯ ಅಧ್ಯಕ್ಷರ ಹತ್ತಿರವಾದರೂ ಹೇಳಿದರೆ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ. ಆದರೆ, ದಯವಿಟ್ಟು ನಾವು ಹೋದಾಗ ಮಾನ್ಯ ಮಂತ್ರಿಗಳು ಸ್ಪಂದಿಸಿ ನಮ್ಮ ಕಷ್ಟಸುಖಗಳನ್ನು ನಿವಾರಣೆ ಮಾಡಿಕೊಡಬೇಕೆಂದು ಹೇಳಿ ತಮಗೆ ವಂದಿಸಿ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್(ಆಳಂದ): ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶೇಷವಾಗಿ ವಿಕೇಂದ್ರೀಕರಣ ವ್ಯವಸ್ಥೆ ನಮ್ಮ ದೇಶದಲ್ಲಿ ಬಂದರೂ ಕೂಡ ಕಾನೂನು ಬದ್ಧವಾಗಿ ಶ್ರೀಮಾನ್ ರಾಜೀವ್‌ಗಾಂಧಿಯವರು ಸಂವಿಧಾನದ 73ನೇ ತಿದ್ದುಪಡಿಯ ಮುಖಾಂತರ ಈ ದೇಶದಲ್ಲಿ ಇದೊಂದು ಅಧಿಕೃತವಾದ ವ್ಯವಸ್ಥೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರು. ಈ ಒಂದು ಕಲ್ಪನೆ ಏನಿದೆ ಇದು ಮಹಾತ್ಮ ಗಾಂಧೀಜಿಯವರು ಕೊಟ್ಟಂತಹ ಒಂದು ಮಹಾನ್ ಕಲ್ಪನೆ. ಹಾಗಾಗಿ ಈ ಜನತಂತ್ರದ ವ್ಯವಸ್ಥೆಯಲ್ಲಿ ನಾವು ಜನರಮಟ್ಟಕ್ಕೆ ಈ ಜನತಂತ್ರವನ್ನು ತೆಗೆದುಕೊಂಡು ಹೋಗುವಂತಹ ಒಂದು ನಿರಂತರವಾದ ಪ್ರಯತ್ನವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಡಿ, ಈ ವಿಕೇಂದ್ರೀಕರಣ ವ್ಯವಸ್ಥೆಗೆ ಇನ್ನೂ ಶಕ್ತಿ ತುಂಬಬೇಕಾಗುತ್ತದೆ, ಅದರ ಮೂಲಕ ಹಳ್ಳಿಗಳ ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕದಲ್ಲೂ ಕೂಡ ಕಾನೂನುಬದ್ಧವಾಗಿ ವಿಕೇಂದ್ರೀಕರಣ ಬಂದಿದೆ: ರಾಜಕೀಯ ವಿಕೇಂದ್ರೀಕರಣ ಬಂತು, ಜಿಲ್ಲಾಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಗ್ರಾಮಮಟ್ಟದಲ್ಲಿ, ಚುನಾಯಿತ ಪ್ರತಿನಿಧಿಗಳಿಗೆ ಜನರು ಅಧಿಕಾರವನ್ನು ಕೊಟ್ಟರು, ಅವರು ಪಂಚಾಯಿತಿಗಳಲ್ಲಿ ಕುಳಿತರು. ಆದರೆ ಇವತ್ತೂ ಕೂಡ ಅಧಿಕಾರ ಅಧಿಕಾರಿಗಳ ಕೈಯಲ್ಲೇ ಜಾಸ್ತಿ ಇದೆ, ಆದರೆ ನಾವು ಭಾಷಣ ಮಾಡುವಾಗ ಹೇಳಿಕೊಳ್ಳುವುದೇನೆಂದರೆ ನಾವು ವಿಕೇಂದ್ರೀಕರಣದ ವ್ಯವಸ್ಥೆಯನ್ನು ತಂದಿದ್ದೇವೆ, ಪಂಚಾಯಿತಿಗಳಿಗೆ ಜವಾಬ್ದಾರಿಯನ್ನು ತಂದಿದ್ದೇವೆ, ಎಂದು ಆದರೆ ಯಾರ ಅಧಿಕಾರ ನಡೆಯುತ್ತಿದೆ ಎಂದರೆ, ಇವತ್ತೂ ಕೂಡ ಅಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷನಿಗಿಂತ ಅಲ್ಲಿಯ ಕಾರ್ಯದರ್ಶಿಯೇ ಬಹಳ ಅಧಿಕಾರ ಚಲಾಯಿಸುತ್ತಿರುತ್ತಾನೆ, ಇವತ್ತೂ ಕೂಡ ಒಬ್ಬ ಜೂನಿಯರ್ ಇಂಜಿನಿಯರ್‌ನ ಮಾತು ನಡೆಯುತ್ತಿದೆ, ಆದರೆ ಅಲ್ಲಿಯ ಒಬ್ಬ ತಾಲ್ಲೂಕು ಪಂಚಾಯಿತಿಯ ಸದಸ್ಯನ ಮಾತು ನಡೆಯುವುದಿಲ್ಲ, ಜಿಲ್ಲಾ ಮಟ್ಟದಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಆ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ಬರೀ ರಾಜಕೀಯ ವಿಕೇಂದ್ರೀಕರಣವಾದರೆ ಸಾಲದು, ಅದರ ಜೊತೆಗೆ ಆಡಳಿತದ ವಿಕೇಂದ್ರೀಕರಣವೂ ಕೂಡ ಬಹಳ ಪರಿಣಾಮಕಾರಿಯಾಗಿ ಆದಷ್ಟು ಬೇಗವಾದರೆ ಮಾತ್ರ ಈ ಒಂದು ವ್ಯವಸ್ಥೆ ಗಟ್ಟಿಗೊಳ್ಳುವುದಕ್ಕೆ ಸಾಧ್ಯತೆ ಇದೆ. ಇನ್ನು ಹಣಕಾಸಿನ ವಿಕೇಂದ್ರೀಕರಣದ ಬಗ್ಗೆ ಇವತ್ತಿನವರೆಗೂ ಎಲ್ಲೂ ಕೂಡ ಚರ್ಚೆಯಾಗಿಲ್ಲ. ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತಾರೆ, ರಾಜ್ಯಮಟ್ಟದ ಹಣಕಾಸು ಆಯೋಗವನ್ನು ರಚನೆ ಮಾಡಬೇಕೆಂದು ಹೇಳುತ್ತಾರೆ. ಏಕೆಂದರೆ, ಆಯೋಗ ಪಂಚಾಯತ್‌ರಾಜ್ ವ್ಯವಸ್ಥೆಗೆ ಬೇಕಾದ ಹಣಕಾಸಿನ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸ್ಸನ್ನು ಸಮಯ ಸಮಯಕ್ಕೆ ಮಾಡಬೇಕಾಗುತ್ತದೆ. ಆದರೆ ರಾಜ್ಯ ಸರ್ಕಾರದವರು ಇವತ್ತೂ ಕೂಡ ಈ ಒಂದು ಆಯೋಗವನ್ನು ರಚನೆ ಮಾಡಿಲ್ಲ. ಹಾಗಾದರೆ ಈ ದುಡ್ಡನ್ನು ಯಾವ ಮಿತಿಯಲ್ಲಿ ಯಾರಿಗೆ ಎಷ್ಟು ಕೊಡಬೇಕು,

ಅವಶ್ಯಕತೆ ಎಲ್ಲಿದೆ, ಈ ಲೆಕ್ಕಾಚಾರವನ್ನು ಯಾರು ಹೇಳುವವರು? ಈ ಬಗ್ಗೆ ಸ್ಪಷ್ಟತೆ ಇಲ್ಲ. ಮತ್ತೆ ಯೋಜನೆ ಬಗ್ಗೆ, ನಮ್ಮ ಕಲ್ಪನೆ ಏನೆಂದರೆ ಪಂಚಾಯಿತಿಗಳೇ ತಮ್ಮ ಯೋಜನೆಗಳನ್ನು ರೂಪಗೊಳಿಸಿಕೊಳ್ಳಬೇಕೆಂಬುದು ಸಿದ್ಧಾಂತ, ಜಿಲ್ಲಾ ಮಟ್ಟದಲ್ಲೂ ಕೂಡ ಒಂದು ಪ್ಲಾನಿಂಗ್ ಬೋರ್ಡ್ ಎಂದು ಮಾಡಿದ್ದೇವೆ, ನಮ್ಮ ಅನುಭವದ ಮಾತನ್ನು ಹೇಳುತ್ತೇನೆ, ಎಲ್ಲೂ ಕೂಡ ಪ್ಲಾನಿಂಗ್ ಬೋರ್ಡ್ ಕುಳಿತಿಲ್ಲ, ಚರ್ಚೆ ಮಾಡಿಲ್ಲ, ಒಂದು ಕಾರ್ಯಕ್ರಮ ಹಾಕಿಕೊಂಡಿಲ್ಲ. ಬೇರೆ ಬೇರೆ ಕಾರಣಕ್ಕಾಗಿ ಅನೇಕ ಕಡೆ ಪ್ಲಾನಿಂಗ್ ಬೋರ್ಡ್‌ಗಳು ರಚನೆಯಾಗಿಲ್ಲ. ಹಾಗಾಗಿ ಈ ಒಂದು ಪಂಚಾಯತ್‌ರಾಜ್ ವ್ಯವಸ್ಥೆ ಬೆಳೆಯಬೇಕಾದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಜನತಂತ್ರ ಮತ್ತು ವಿಕೇಂದ್ರೀಕರಣದ ವಿರುದ್ಧ ಜನತಂತ್ರ ಇವೆರಡೂ ನಡೆದರೆ ನಮ್ಮ ಗುರಿ ಸಾಧನೆಯಾಗುವುದಕ್ಕಾಗುವುದಿಲ್ಲ. ಈಗ ನಾವೇನು ಪಂಚಾಯಿತಿಗಳಿಗೆ ಸ್ವಾಯತ್ತತೆಯನ್ನು ಕೊಟ್ಟಿದ್ದೇವೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆಂಬ ಮಾತನ್ನು ಹೇಳುತ್ತೇವೆ, ಇವತ್ತೂ ಕೂಡ ಒಬ್ಬ ಶಾಲೆಯ ಶಿಕ್ಷಕ, ಅಲ್ಲಿರತಕ್ಕಂಥ ಆಸ್ಪತ್ರೆ, ಅಲ್ಲಿರತಕ್ಕಂಥ ಅಂಗನವಾಡಿ, ಅವರ ಮೇಲೆ ಯಾವುದೇ ಕಂಟ್ರೋಲ್ ಇಲ್ಲ. ಇವತ್ತು ಅಂಗನವಾಡಿ ಕಾರ್ಯಕರ್ತೆಯರು ನಾವು ಗ್ರಾಮಪಂಚಾಯಿತಿ ಅಧೀನದಲ್ಲಿರುವುದಿಲ್ಲವೆಂದು ಪ್ರತಿಭಟನೆ ಮಾಡುತ್ತಿದ್ದಾರೆ. ನೀವು ಶಿಕ್ಷಣ ಇಲಾಖೆಯನ್ನು ಸೇರಿಸುವುದಕ್ಕೆ ಹೋಗಿ ಆ ಶಿಕ್ಷಕರು ನಾವು ಗ್ರಾಮ ಪಂಚಾಯಿತಿಯ ಅಧೀನದಲ್ಲಿರುವುದಿಲ್ಲವೆಂದು ಹೇಳಿ ಹೊರಗಡೆಗೆ ಬರುತ್ತಿದ್ದಾರೆ. ಆಸ್ಪತ್ರೆಯ ಮೇಲೆ ಯಾರದ್ದೂ ನಿಯಂತ್ರಣವಿಲ್ಲ. ಹಾಗಾದರೆ ಗ್ರಾಮಸ್ವರಾಜ್ಯ ಸ್ವಾಯತ್ತತೆಯ ಕಲ್ಪನೆ ಎಷ್ಟರಮಟ್ಟಿಗೆ ಸಫಲವಾಗುತ್ತಿದೆ ಎಂಬುದರ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಈ ಒಂದು ಆಡಳಿತ ಸ್ವಾಯತ್ತತೆಯನ್ನು ಕೊಡುವುದಕ್ಕೆ ಗ್ರಾಮಪಂಚಾಯಿತಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟರೆ ಮಾತ್ರ ಈ ಒಂದು ಅಧಿಕಾರ ವಿಕೇಂದ್ರೀಕರಣಕ್ಕೆ ಅರ್ಥ ಬರುತ್ತದೆ. ಈ ದೇಶದಲ್ಲಿ ನಮ್ಮ ಜಾತಿಗಳಿಗೆ ಸುಮಾರು 5000 ವರ್ಷಗಳ ಇತಿಹಾಸವಿದೆ, ಮತ್ತು ಜನತಂತ್ರಕ್ಕೆ ಸುಮಾರು 57 ವರ್ಷಗಳ ಇತಿಹಾಸವಿದೆ. ಆದರೆ ನಮ್ಮ ದೇಶದ ಜಾತಿ ವ್ಯವಸ್ಥೆಯ ಹಿನ್ನೆಲೆಯಲ್ಲಿ ಈ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ, ಈ ಸೋಷಿಯಲ್ ಡೆಮಾಕ್ರಸಿ ಎನ್ನುವ ಸಂಕಲ್ಪವನ್ನು ಮಾಡಿಕೊಂಡು ವಿಕೇಂದ್ರೀಕರಣದಲ್ಲಿ ಎಲ್ಲಾ ಜಾತಿಯವರಿಗೂ ಕೂಡ ಅವಕಾಶವನ್ನು ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಆದರೆ ಈ ವ್ಯವಸ್ಥೆ ಬಂದಮೇಲೆ ಅನೇಕ ಕಡೆ ಇದರ ಬಗ್ಗೆ ಆರೋಪ ಪ್ರತ್ಯಾರೋಪಗಳು ಕೇಳಿ ಬರುತ್ತವೆ, ಕೆಲವರು ಮನಸ್ಸಿಲ್ಲದೆ ಅಧ್ಯಕ್ಷರನ್ನು ಮಾಡುತ್ತಾರೆ, ಕೆಲವರು ಮನಸ್ಸಿದೇ ಮಾಡುತ್ತಾರೆ; ಇದೊಂದು ಟ್ರಾನ್ಸಿಟರಿ ಪೀರಿಯೆಡ್ ಎಂದು ಹೇಳಬೇಕಾಗುತ್ತದೆ, ಏಕೆಂದರೆ ಸಾಮಾಜಿಕ ವ್ಯವಸ್ಥೆಯನ್ನು ಒಂದು ಸಮಾನಮಟ್ಟಿಗೆ ತರಬೇಕಾಗಿದ್ದರೆ ಅನೇಕ ಸಮಸ್ಯೆಗಳನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ. ಇಂತಹ ಒಂದು ವಿಚಾರದಲ್ಲಿ ಪ್ರಜಾತಂತ್ರ, ಜನತಂತ್ರ ಗಟ್ಟಿಯಾಗಿ ಬೆಳೆಯಬೇಕಾಗಿದ್ದರೆ, ಈ ಜಾತಿ ವ್ಯವಸ್ಥೆ ಹೋಗಬೇಕಾಗಿದ್ದರೆ ನಾವು ಎಲ್ಲಾ ವಿಷಯಗಳನ್ನೂ ಕೂಡ ಸಹಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಬಹಳ ಜನ ಗ್ರಾಮಪಂಚಾಯಿತಿಗಳ ವ್ಯವಸ್ಥೆ ಬಗ್ಗೆ, ಆಡಳಿತದ ಬಗ್ಗೆ ಅಪಸ್ವರದಿಂದ ಮಾತನಾಡಿದ್ದಾರೆ. ಇದು ನನ್ನ ಮಟ್ಟಿಗೆ ಒಂದು ಹಂತ; ಒಂದು ಹಂತದ ಮಟ್ಟಿಗೆ ಗ್ರಾಮಪಂಚಾಯಿತಿಗಳ ಬಗ್ಗೆ ಕೆಲವು ಆರೋಪಗಳು ಪ್ರತ್ಯಾರೋಪಗಳು ಬರುತ್ತವೆ, ನಾನು ಕೇಳುತ್ತೇನೆ, ಹಾಗಾದರೆ ನಮ್ಮ ದೇಶದ ಪಾರ್ಲಿಮೆಂಟ್ ಬಹಳ ವ್ಯವಸ್ಥಿತವಾಗಿ ನಡೆಯುತ್ತಿದೆಯೇನು? ಮಾನ್ಯ ಸಚಿವರೂ ಕೂಡ ಈ ಬಗ್ಗೆ ಹೇಳಬೇಕಾಗುತ್ತದೆ. ಏನು ಗ್ರಾಮ ಪಂಚಾಯಿತಿಯ ಜೊತೆಗೆ ಸೇರಿದವರ ಮೇಲೆ ನಾವು ಏನು

ಆರೋಪ ಮಾಡುತ್ತೇವೆ, ಅದರ ಬಗ್ಗೆ ಬೆಟ್ಟುಮಾಡಿ ತೋರಿಸುತ್ತೇವೆ, ನಮ್ಮ ದೇಶದ ಪಾರ್ಲಿಮೆಂಟ್ ಎಷ್ಟು ವ್ಯವಸ್ಥಿತವಾಗಿ ನಡೆದಿದೆ, ಅಷ್ಟೇ ನಮ್ಮ ರಾಜ್ಯ ಸರ್ಕಾರಗಳನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತಿದೆ ನಾವು ಇಷ್ಟೆಲ್ಲಾ 50 ವರ್ಷಗಳ ಅನುಭವ ಇಟ್ಟುಕೊಂಡು, ಶಾಸನ ಸಭೆಗಳು ಜನರ ನಿರೀಕ್ಷೆ ಮಟ್ಟಿಗೆ ಕೆಲಸ ಮಾಡಲು ನಾವು ಸಾಧ್ಯವಾಗದಿದ್ದಾಗ ಮೊನ್ನೆ ಹುಟ್ಟಿಕೊಂಡ ಪಂಚಾಯತ್ ವ್ಯವಸ್ಥೆಗಳು, ಗ್ರಾಮಪಂಚಾಯಿತಿಗಳು ಎಷ್ಟು ಜನರ ನಿರೀಕ್ಷೆ ಮುಟ್ಟಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನೂ ಕೂಡ ನಾವಿಲ್ಲಿ ಸೇರಿದ ಎಲ್ಲಾ ಸದಸ್ಯರು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ಒಂದನ್ನು ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇವತ್ತು ಜನರ ಆಶಯ ಹೆಚ್ಚಾಗಿದೆ, ಅವರ ಬೇಡಿಕೆ ಹೆಚ್ಚಾಗಿದೆ, ಅವರಲ್ಲಿ ಜಾಗ್ರತೆ ಮೂಡಿದೆ, ಎಲ್ಲಾ ಸಮಸ್ಯೆಗಳಿಗೂ ರಾಜಕೀಯ ಪರಿಹಾರ ಕಂಡುಹಿಡಿಯುವುದಕ್ಕೆ ಜನರು ನಮ್ಮಿಂದ ಅಪೇಕ್ಷೆಪಡುತ್ತಿದ್ದಾರೆ, ತಾವು ವಿಚಾರ ಮಾಡಿ, ಎಲ್ಲಾ ಸಮಸ್ಯೆಗಳಿಗೂ ಕೂಡ ಪ್ರಾಮಾಣಿಕವಾಗಿ ಹಗಲುರಾತ್ರಿ ದುಡಿದರೂ ಕೂಡ ಆ ಸಮಸ್ಯೆಗಳಿಗೆ ಒಬ್ಬ ಶಾಸಕ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಜನರ ಅಪೇಕ್ಷೆಗಳು, ಬೇಡಿಕೆಗಳು, ಸಮಸ್ಯೆಗಳು ಜಾಸ್ತಿಯಾಗಿವೆ. ಹಾಗಾಗಿ ನಾವು ನಮ್ಮ ಕೆಲಸಗಳನ್ನು ಹಂಚಿಕೊಳ್ಳಲೇಬೇಕು, ಗ್ರಾಮಪಂಚಾಯಿತಿಯವರು ಗ್ರಾಮಪಂಚಾಯಿತಿ ಕೆಲಸವನ್ನು ಮಾಡಬೇಕು, ಜಿಲ್ಲಾಪಂಚಾಯಿತಿಯವರು ಜಿಲ್ಲಾಪಂಚಾಯಿತಿ ಕೆಲಸವನ್ನು ಮಾಡಬೇಕು, ತಾಲ್ಲೂಕು ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯ ಕೆಲಸವನ್ನು ಮಾಡಬೇಕು, ನಾವು ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಈ ರಾಜ್ಯಕ್ಕೆ ಶಾಸನಗಳನ್ನು ರಚನೆ ಮಾಡಬೇಕು, ಬೇಕಾದ ಆಯವ್ಯಯವನ್ನು ಕೊಡಬೇಕು, ಯೋಜನೆಗಳನ್ನು ಹಾಕಿಕೊಳ್ಳಬೇಕು, ನೀರಾವರಿ, ವಿದ್ಯುತ್, ರಸ್ತೆ, ದೊಡ್ಡದೊಡ್ಡ ಉದ್ದಿಮೆಗಳ ಬಗ್ಗೆ ಕುಳಿತು ಚಿಂತನೆ ಮಾಡಬೇಕು. ಮಾನ್ಯ ಯಡಿಯೂರಪ್ಪನವರು ಒಂದು ವಿಷಯ ಬಂದಾಗ ಒಂದು ಮಾತನ್ನು ಹೇಳಿದರು, ಶಾಸನಸಭೆಯ ಶಾಸಕರಿಗೆ ಬರೀ ಇಂತಿಷ್ಟು ಅಧಿಕಾರ ಮಾತ್ರ ಇದೆ. ಎಂದು ಸರ್ಕಾರ ಘೋಷಣೆ ಮಾಡಬೇಕೆಂದರು; ನಾನೂ ಕೂಡ ಈ ಮಾತನ್ನು ಒಪ್ಪುತ್ತೇನೆ, ಏಕೆಂದರೆ ಜನರಲ್ಲಿ ಗೊಂದಲವಿದೆ. ಚುನಾವಣೆಗೆ ಹೋದಾಗ ನಾವೂ ಕೂಡ ತಪ್ಪು ಮಾಡುತ್ತೇವೆ, ಚುನಾವಣೆಗೆ ಹೋದಾಗ, ನಮಗೆ ಓಟು ಬೇಕಾದಾಗ ಚರಂಡಿ ದುರಸ್ತಿ ಮಾಡುತ್ತೇವೆಂದು ಹೇಳುತ್ತೇವೆ, ಲೈಟ್ ಹಾಕಿಸುತ್ತೇವೆ, ನಲ್ಲಿ ಹಾಕಿಸುತ್ತೇವೆ ಎಂದು ಹೇಳುತ್ತೇವೆ, ಏಕೆಂದರೆ ಓಟ್ ಬೇಕಾಗಿದೆಯಲ್ಲಾ. ಜನರಿಗೂ ಕೂಡ ನಾವು ಎಜ್ಯುಕೇಟ್ ಮಾಡಬೇಕಾಗುತ್ತದೆ, ಈ ಒಂದು ಪ್ರಜಾತಂತ್ರ ಪ್ರಕ್ರಿಯೆಯಲ್ಲಿ, ನೋಡಪ್ಪ, ಇದು ನನ್ನ ಜವಾಬ್ದಾರಿಯಲ್ಲ, ಇದು ಪಂಚಾಯತಿ ಮಾಡಬೇಕಾದ್ದು, ಇದು ಮುನಿಸಿಪಾಲಿಟಿಯವರು ಮಾಡುವುದು, ಇದು ತಾಲ್ಲೂಕು ಪಂಚಾಯಿತಿಯವರು ಮಾಡುವುದು, ನಾನು ನಿಮಗೆ ಬೇಕಾದಂತಹ ಶಾಸನಗಳನ್ನು ಮಾಡುತ್ತೇನೆ, ಜನಪರವಾದ ಕಾರ್ಯಕ್ರಮಗಳನ್ನು ರಚಿಸಿಕೊಡುತ್ತೇನೆ, ದೊಡ್ಡದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಚಿಂತನೆ ಮಾಡುತ್ತೇನೆ, ಈ ಕಾರಣಕ್ಕೆ ನಿಮ್ಮ ಮತವನ್ನು ಕೇಳುತ್ತೇನೆ ಎಂದು ನಾವು ಮತದಾರರಿಗೆ ಹೇಳಿದಾಗ ಮಾತ್ರ ಒಂದು ಜಾಗ್ರತೆ ಮೂಡುವುದಕ್ಕೆ ಸಾಧ್ಯವಿದೆ. ಆಗ ಈ ಗೊಂದಲ ಆಗುವುದಿಲ್ಲ. ಹೀಗೆ ನಾವು ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಈ ಜನತಂತ್ರವನ್ನು ತಳಮಟ್ಟಕ್ಕೆ ಒಯ್ಯಬೇಕಾದರೆ ಸ್ವಲ್ಪಮಟ್ಟಿಗೆ ಏರುಪೇರುಗಳನ್ನು ನೋಡಿಕೊಂಡು ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ನಾನು ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ನೋಡಿದೆ, ಹಿಂದೆ 2003–04ರಲ್ಲಿ ನಮ್ಮ

ಪಂಚಾಯಿತಿಗಳು ಕಲೆಕ್ಟ್ ಮಾಡಿದಂತಹ ಟ್ಯಾಕ್ಸ್, ಅದೇ 2004–05ರಲ್ಲಿ ಅವರು ಬಹಳ ಹೆಚ್ಚಿಗೆ ಟ್ಯಾಕ್ಸ್ ಕಲೆಕ್ಟ್ ಮಾಡಿದ್ದಾರೆ. ಅಂದರೆ ಅವರಿಗೆ ಅಧಿಕಾರ, ಜವಾಬ್ದಾರಿಯನ್ನು ಕೊಟ್ಟಾಗ ಜನ ಪೂರಕವಾಗಿ ಪ್ರಕ್ರಿಯೆ ಮಾಡಿ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡುತ್ತಿರುವುದನ್ನು ಈ ಉದಾಹರಣೆಯ ಮೂಲಕ ನೋಡಲು ಸಾಧ್ಯತೆ ಇದೆ. ಹೀಗೆ ಈ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿಗೆ ಅಧಿಕಾರ, ಈ ಒಂದು ವ್ಯವಸ್ಥೆ ಮಾಡುವುದರ ಮೂಲಕ ನಾವು ಈ ಪಂಚಾಯತ್ ವ್ಯವಸ್ಥೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಬ್ಬ ಶಾಲಾ ಶಿಕ್ಷಕ ವರ್ಗಾವಣೆಯಾಗಬೇಕಾದರೂ ಅವನು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಬೇಕು. ಬೆಂಗಳೂರಿಗೆ ಬರಬೇಕು. ನಾವು ಇಷ್ಟೆಲ್ಲಾ ಪಂಚಾಯತ್‌ರಾಜ್ ವ್ಯವಸ್ಥೆ, ವಿಕೇಂದ್ರೀಕರಣ ಎಂದು ಹೇಳಿದರೂ ಕೂಡ ಒಬ್ಬ ಶಾಲಾ ಶಿಕ್ಷಕ ಅವನ ವರ್ಗಾವಣೆಯಾಗಬೇಕಾಗಿದ್ದರೆ ಬೆಂಗಳೂರಿಗೆ ಬಂದು ಅಲೆದಾಡಿ ಅವನು ವರ್ಗಾವಣೆ ಮಾಡಿಸಿಕೊಂಡು ಹೋಗಬೇಕು, ನಾನು ಕೇಳುತ್ತೇನೆ ಇದು ಯಾವ ವಿಕೇಂದ್ರೀಕರಣ ವ್ಯವಸ್ಥೆ? ಒಬ್ಬ ಸಾಮಾನ್ಯ ಶಿಕ್ಷಕ ವರ್ಗಾವಣೆಗೆ ಬೆಂಗಳೂರಿಗೆ ಅಲೆದಾಡಬೇಕಾಗಿದೆ, ಅಂದರೆ ಆಡಳಿತ ವಿಕೇಂದ್ರೀಕರಣ ಇನ್ನೂ ಆಗಿಲ್ಲ.

ಇನ್ನೂ ಕೂಡ ಕೇಂದ್ರೀಕರಣ ಬೆಂಗಳೂರಿನಲ್ಲಿ ಗಟ್ಟಿಯಾಗಿ ಉಳಿದಿದೆ. ಇದಕ್ಕೊಂದು ಸರಿಯಾದ ರೂಪ ಕೊಡಬೇಕಾದರೆ ಎಲ್ಲಾ ಅಧಿಕಾರವನ್ನು ಬೆಂಗಳೂರಿನಲ್ಲಿ ಕೆಲವು ಅಧಿಕಾರಿಗಳು ಇಟ್ಟುಕೊಂಡು ಕುಳಿತಿದ್ದಾರೆ ಅದನ್ನೆಲ್ಲಾ ಜಿಲ್ಲಾಮಟ್ಟಕ್ಕೆ ಕಳುಹಿಸಬೇಕು. ತಾಲ್ಲೂಕು ಮತ್ತು ಗ್ರಾಮಮಟ್ಟಕ್ಕೆ ಕಳುಹಿಸಬೇಕು. ಒಂದು ರೆಕ್ರೂಟ್‌ಮೆಂಟಿಲ್ಲ; ಇಷ್ಟೊಂದು ಅಧಿಕಾರವನ್ನು ಗ್ರಾಮಪಂಚಾಯ್ತಿಗೆ ಕೊಟ್ಟಿದ್ದೇವೆ. ಮಾನ್ಯ ಸಚಿವರು ಯೋಚನೆ ಮಾಡಬೇಕು. ಅವರಿಗೆ ಸಿಬ್ಬಂದಿನೇ ಇಲ್ಲ. ಎಷ್ಟೋ ಕಡೆ ಗ್ರಾಮಪಂಚಾಯ್ತಿಗಳಿಗೆ ಕಾರ್ಯದರ್ಶಿಗಳೇ ಇಲ್ಲ. ನೀವು ಸಾಕಷ್ಟು ಹಣ ಅಧಿಕಾರ ವ್ಯವಸ್ಥೆ ಕೊಡುತ್ತಿದ್ದೀರಿ; ಆದರೆ ಕೆಲಸ ಮಾಡುವವರು ಯಾರು? ಒಬ್ಬೊಬ್ಬ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗೆ ಅನುಭವವಿಲ್ಲ, ಅವನಿಗೆ ಯಾವುದೂ ಗೊತ್ತಿಲ್ಲ. ಮೂರ್ನಾಲ್ಕು ಪಂಚಾಯ್ತಿಗಳನ್ನು ನಿರ್ವಹಣೆ ಮಾಡುತ್ತಾನೆ. ಹಾಗಾಗಿ ಯಾರಿಗೂ ಕೂಡ ಕೆಲಸ ಮಾಡುವುದಕ್ಕೆ ಸಮಾಧಾನವಾಗುವುದಿಲ್ಲ. ಮಾನ್ಯ ಸಚಿವರಿಗೆ ನಾನೂ ಒಂದು ಮಾತು ಹೇಳುತ್ತೇನೆ. ಈ ಗ್ರಾಮಪಂಚಾಯ್ತಿ ವ್ಯಾಪ್ತಿಯನ್ನು ಜಾಸ್ತಿ ಮಾಡಿ. ಸಂಪೂರ್ಣ ಸಿಬ್ಬಂದಿ ಕೊಡಿ. ಈ ವ್ಯವಸ್ಥೆಯನ್ನು ಗಟ್ಟಿಮಾಡಲು ಅನುಕೂಲವಾಗುತ್ತದೆ. ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ಗ್ರಾಮಪಂಚಾಯ್ತಿ ಮಟ್ಟದಲ್ಲೂ ಕೂಡ ಪಕ್ಷಾಧಾರಿತ ಚುನಾವಣೆ ನಡೆಸಬೇಕಾಗುತ್ತದೆ. ಇವತ್ತು ಗ್ರಾಮಪಂಚಾಯ್ತಿ ಮಟ್ಟದಲ್ಲಿ ಆ ಪಕ್ಷ ಈ ಪಕ್ಷ ಅಂತ ಯಾವುದೂ ಬಂಧನವಿಲ್ಲ. ಪಕ್ಷ ವ್ಯವಸ್ಥೆ ತಂದರೆ ಅವರಿಗೆ ಬದ್ಧತೆ ಬರುತ್ತದೆ, ಶಿಸ್ತು ಬರುತ್ತದೆ. ನಮ್ಮ ದೇಶದ ದುರ್ದೈವ ಅಂದರೆ ಪಾರ್ಲಿಮೆಂಟಿನಲ್ಲೂ ಪಕ್ಷಾಂತರ ನಿಷೇಧ ಕಾನೂನು ತಂದು ಸದಸ್ಯರನ್ನು ನಿಯಂತ್ರಿಸುವ ವ್ಯವಸ್ಥೆ ಬಂದಿರುವಾಗ ಗ್ರಾಮಪಂಚಾಯ್ತಿಯಲ್ಲಿ ನೀವು ಪಕ್ಷಾತೀತ ಚುನಾವಣೆ ಅಂತ ಹೇಳಿಬಿಟ್ಟು ಅಲ್ಲಿ ಎಲ್ಲರೂ ನಮ್ಮ ನಮ್ಮ ಪಕ್ಷ ಅಂತ ಹೇಳಿಕೊಂಡು ಈ ಅನಾರ್ಕಿ ಮಾಡುವುದು ಸರಿಯಲ್ಲ. ಒಂದು ರಾಜಕೀಯ ಪಕ್ಷದ ಚಿಹ್ನೆಯ ಆಧಾರದ ಮೇಲೆ ಚುನಾವಣೆ ನಡೆದಾಗ ಮಾತ್ರ ಒಂದು ಸಿದ್ಧಾಂತ ಕೂಡ ಜನತೆಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಶಿಸ್ತು ಬರುವ ಸಾಧ್ಯತೆ ಇದೆ, ಅಲ್ಲಿ ಚುನಾವಣೆಯಲ್ಲಿ ನಿಂತು ಗೆದ್ದವರಿಗೂ ಕೂಡ ನಮ್ಮ ಪಕ್ಷ ಬೆಳೆಯಬೇಕು ಸಿದ್ಧಾಂತ ಬೆಳೆಯಬೇಕು ನಾವು ದೊಡ್ಡವರಾಗಬೇಕು, ಇನ್ನೂ ತಾಲ್ಲೂಕು ಜಿಲ್ಲಾಪಂಚಾಯ್ತಿ ಚುನಾವಣೆಗಳಲ್ಲಿ

ಗೆಲ್ಲಬೇಕು ಎಂಬ ಭಾವನೆ ಮೂಡಿಬಂದು ಅವರೂ ಕೂಡ ಕೆಲಸ ಮಾಡಲು ಅನುಕೂಲವಾಗುತ್ತದೆ ಮತ್ತು ಡಿಸಿಪ್ಲಿನ್ ಬರುತ್ತದೆ. ಹಾಗಾಗಿ ಈ ಪಂಚಾಯ್ತಿಗಳಿಗೆ ಪಕ್ಷಾಧಾರಿತ ಚುನಾವಣೆ ನಡೆಸಿದರೆ ಮಾತ್ರ ಇದಕ್ಕೊಂದು ವ್ಯವಸ್ಥಿತ ರೂಪ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಪಂಚಾಯ್ತಿಗಳಿಗೆ ನೀವು ಅಧಿಕಾರ ಹೆಚ್ಚಿಗೆ ಕೊಡಬೇಕು ಎನ್ನುತ್ತೀರಿ. ಮಾನ್ಯ ರವಿಯವರು ಇಲ್ಲ ಇವತ್ತು, ನಕ್ಸಲ್‌ವಾದಿಗಳ ಸಮಸ್ಯೆ, ಕುದುರೆಮುಖದ ನೆಲ್ಲಿಬೀಡು ಪ್ರದೇಶದ ಗ್ರಾಮ ಪಂಚಾಯ್ತಿಯವರು ಅಲ್ಲಿ ಗಣಿಗಾರಿಕೆಗೆ ಅವಕಾಶ ಇರಬಾರದು ಅಂತ ನಿರ್ಣಯ ಮಾಡಿದರು. ಅದೇ ತರಹ ಕೇರಳದಲ್ಲಿ ಪೆಪ್ಸಿಕೋಲ ಏನು ನೀರನ್ನು ಸಂಪೂರ್ಣ ಎತ್ತಿಹಾಕಿ ಇಡೀ ಕೇರಳವನ್ನು ಸಂಪೂರ್ಣ ಬಂಜರು ಮಾಡಿದೆ, ಅಲ್ಲಿಯ ಗ್ರಾಮ ಪಂಚಾಯ್ತಿ ಕೂಡ ಅವರಿಗೆ ಎತ್ತಲಿಕ್ಕೆ ಅವಕಾಶವಿಲ್ಲ ಅಂತ ನಿರ್ಣಯ ಮಾಡಿದರು. ಮುಂದೆ ಅದು ಹೈಕೋರ್ಟ್‌ಗೆ ಹೋಯಿತು, ಹೈಕೋರ್ಟ್‌ನವರು ಗ್ರಾಮಪಂಚಾಯ್ತಿಯವರು ಮಾಡಿದ ನಿರ್ಣಯವನ್ನು ಎತ್ತಿಹಿಡಿದರು. ಅದೇ ತರಹ ಗೋವಾದಲ್ಲಿ 10 ವರ್ಷಗಳ ಹಿಂದೆ, . . .

7. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ ಮೊದಲನೇ ಸಾಲಿನಲ್ಲಿ ಮಂತ್ರಿಗಳಿಲ್ಲದಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ಸರ್ಕಾರಿ ನೌಕರರಿಗೆ ಸಂಬಳ ಕೊಟ್ಟಿರಬಹುದು, ವರ್ಗಾವಣೆ ಮಾಡಿರಬಹುದು, ಈಗ ಇಷ್ಟು ಪ್ರಮುಖ ವಿಷಯಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಮೊದಲನೇ ಸಾಲಿನಲ್ಲಿ ಯಾರೂ ಇಲ್ಲ. ಇಷ್ಟು ಹಗುರವಾಗಿ ಸದನವನ್ನು ಇವರು ತೆಗೆದುಕೊಂಡು ಹೇಗೆ ಬೇಕಾದರೂ ನಾವು ಆಡಳಿತ ನಡೆಸಬಹುದು, ಎಲ್ಲಕ್ಕೂ ಪ್ರತಿಪಕ್ಷದವರು ಬಗ್ಗುತ್ತಾರೆ, ನಾವು ಹೇಳಿದಂತೆ ಕೇಳುತ್ತಾರೆ ಎಂಬ ಭಾವನೆ ಅವರ ಬಳಿ ಇದೆ. ಅದಕ್ಕೋಸ್ಕರ ಈಗ ನಾನು ಪ್ರತಿಪಕ್ಷದ ಮುಖಂಡರೊಡನೆ ಸಮಾಲೋಚನೆ ಮಾಡಿದ್ದೇನೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾಡುತ್ತಿರುವ ಅಪಮಾನ. ಇವರು ಯಾವುದನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿಲ್ಲ. ಯಾವುದೇ ಒಬ್ಬ ಸಚಿವರು ಅಭಿವೃದ್ಧಿ ಕಾರ್ಯ ನೋಡಲು ಹೋಗಲಿಲ್ಲ. ನೀರಾವರಿ ಸಚಿವರು ಕಳೆದ 14 ತಿಂಗಳಲ್ಲಿ ಕಾವೇರಿ ಕೃಷ್ಣ ಬೇಸಿನ್‌ಗೆ ಮೂರ್ನಾಲ್ಕು ಸಾರಿ ಹೋಗಿಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಧಿಕಾರಿಗಳ ಕಿವಿಗಾದರೂ ಬಿದ್ದು ಏನಾದರೂ ಸುಧಾರಣೆಯಾಗಬಹುದು ಅಂತ ಎಲ್ಲಾ ಮಂತ್ರಿಗಳು ಇದ್ದಾಗ ಐದು ನಿಮಿಷ ಮಾತನಾಡೋಣ ಅಂತ ಐದಾರು ಪಾಯಿಂಟ್‌ಗಳನ್ನು ತಂದೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಯಾವುದೋ ಕಾರಣಕ್ಕೆ ಹೋಗಿದ್ದರು. ಅವರು ಹೆಚ್ಚು ಹೊತ್ತು ಕುಳಿತುಕೊಳ್ಳುತ್ತಾರೆ ಎಂದು ನಾನು ಮಾತನಾಡಲು ಹೋಗುವುದಿಲ್ಲ. ಹೀಗೆ ಮೊದಲನೇ ಸಾಲಿನಲ್ಲಿ ಯಾರೂ ಕುಳಿತುಕೊಳ್ಳದೆ ಇರುವುದು ನಮಗೆ ಮಾಡುತ್ತಿರುವ ಅಪಮಾನ ಅಂತ ಭಾವಿಸಿಕೊಂಡು ಇದನ್ನು ಬಹಿಷ್ಕಾರ ಮಾಡಿ ನಾವು ಹೊರಗಡೆ ಹೋಗುತ್ತೇವೆ. ಅವರೇ ಉತ್ತರ ಕೊಟ್ಟುಕೊಳ್ಳಲಿ. ಯಾವುದೇ ಕಾರಣಕ್ಕೂ ಇನ್ನು ಮುಂದೆ ಕೋಆಪರೇಟ್ ಮಾಡಲು ನಾವು ರೆಡಿಯಿಲ್ಲ. ಆಡಳಿತ ಕುಲಗೆಟ್ಟುಹೋಗಿದೆ, ಸರ್ಕಾರ ಸತ್ತುಹೋಗಿದೆ, ಸರ್ಕಾರ ಇದೆ ಅಂತ ಜನರಿಗೂ ಅನಿಸುತ್ತಾ ಇಲ್ಲ, ಅವರ ಹೊಡೆದಾಟ ಬಡಿದಾಟಗಳಲ್ಲಿ ತಲ್ಲೀನರಾಗಿರಬೇಕಾದರೆ . . . . .